
# ಅಮರಸಾಹಿತಿ

# ಶರತ್‌ಚಂದ್ರ



*ಜಹಾರ್ ಅಮರಸ್ಥಾನ ಪ್ರೇಮೇರ್ ಆಸನೆ,*
*ಕ್ಷತಿ ತಾರ್ ಕ್ಷತಿ ನಯ ಮೃತ್ಯುರ್ ಶಾಸನೆ।*
*ದೇಶೇರ್ ಮಾಟೀರ್ ಥೇಕೆ ನಿಲೊಜಾರೆ ಹರಿ,*
*ದೇಶೇರ್ ಹೃದಯ ತಾರೆ ರಾಖಿಯಾಛೆ ವರಿ॥*

*"ಪ್ರೇಮಪೀಠದಲ್ಲಿ ಯಾರಿಗೆ ಸ್ಥಾನವಿದೆಯೋ ಅವರನ್ನು ನಾವು ಮರಣದಲ್ಲಿ ಕಳೆದುಕೊಳ್ಳುವುದಿಲ್ಲ. ದೇಶದ ಮಣ್ಣಿನಿಂದ ಯಾರು ಅಪಹರಿಸಲ್ಪಟ್ಟಿರುವರೊ ಅವರನ್ನು ದೇಶದ ಹೃದಯವು ವರಿಸಿ ತನ್ನಲ್ಲಿಟ್ಟು ಕೊಂಡುಬಿಟ್ಟಿದೆ."*

**– ರವೀಂದ್ರನಾಥ್ ಟ್ಯಾಗೋರ್**

(ಶರತ್‌ಚಂದ್ರರ ಮರಣದ ಸಂದರ್ಭದಲ್ಲಿ ರಚಿಸಿದ ಕವನ)

......."ಶೋಷಿತರು, ಅಶಕ್ತರು
ಮತ್ತು ದಮನಕ್ಕೆ ಸಿಲುಕಿರುವವರು ತಮ್ಮ
ಅಸಹಾಯಕತೆ ಮತ್ತು ಗೋಳಿನ ಬಾಳಿಗೆ
ಕಾರಣಗಳನ್ನೂ ಅರಿಯದಾಗಿದ್ದಾರೆ; ಅವರ
ಮಾನವ ಹಕ್ಕಿಗೆ ಧಕ್ಕೆ ಹೇಗೆ ಮತ್ತು ಏಕೆ
ಬಂದಿದೆಯೆಂಬುದನ್ನು ತಿಳಿಯದಾಗಿದ್ದಾರೆ.
ಅವರ ಗೋಳೇ ನನ್ನನ್ನು
ಲೇಖಕನನ್ನಾಗಿಸಿರುವುದು; ಮಾನವತೆಯ
ನ್ಯಾಯಾಲಯದ ಮುಂದೆ ಅವರ
ಅಹವಾಲನ್ನು ಮಂಡಿಸುವುದೇ
ನನ್ನ ಕರ್ತವ್ಯ."

– ಶರತ್‌ಚಂದ್ರ ಚಟರ್ಜಿ

# ಶರತ್‌ಚಂದ್ರ

## ಒಂದು ಮೌಲ್ಯಮಾಪನ

ಶಿವದಾಸ್ ಘೋಷ್

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ
(ಕಮ್ಯುನಿಸ್ಟ್)
ಕರ್ನಾಟಕ ರಾಜ್ಯ ಸಮಿತಿ

**‘Saratchandra Ondu Maulyamaapana’** is a Kannada translation of the English booklet **‘An Evaluation of Saratchandra’** written by Comrade Shibdas Ghosh and published by SUCI(C)

Edited & Published by:

K.Radhakrishna
On behalf of SUCI(C), Karnataka State Committee,
No. 31, 3rd Cross, Malleswaram, Bangalore-560 003
Ph: 080-23561443

Website: www.suci.in
e-mail: karmika.drushtikona@gmail.com

**ಬೆಲೆ : ರೂ. 25/–**

**ಎರಡನೇ ಮುದ್ರಣ: ಜನವರಿ 1, 2014**

**ಮುದ್ರಣ:**
**ವಿಘ್ನೇಶ್ವರ ಪ್ರಿಂಟರ್ಸ್,**
**ನಂ.159, ಜಿ.ಬಿ ಲೇನ್,**
**ಕಾಟನ್ ಪೇಟ್,**
**ಬೆಂಗಳೂರು–53**

# ಮುನ್ನುಡಿ

ಮಹಾನ್ ಸಾಹಿತಿ ಶರತ್ ಚಂದ್ರರು ಮೂಲತಃ ಬಂಗಾಲಿ ಲೇಖಕರಾಗಿದ್ದರೂ ಸುಮಾರು ಎಂಟು ದಶಕಗಳ ಹಿಂದೆಯೇ ದೇಶದಾದ್ಯಂತ ಓದುಗರ ಮನಸನ್ನು ಗೆದ್ದುಕೊಂಡರು. ಇದಕ್ಕೆ ಕಾರಣ ಅವರು ಅಸಾಧಾರಣ ಕಥೆಗಾರರಾಗಿದ್ದು ಮನಮುಟ್ಟುವಂತೆ ಕಾದಂಬರಿಗಳನ್ನು ರಚಿಸಿದರು ಎಂಬುದು ಮಾತ್ರವಲ್ಲ, ಅವರು ಅಂದಿನ ಹಲವಾರು ಮುಖ್ಯ ಸಮಸ್ಯೆಗಳ ಕುರಿತು ಪ್ರಗತಿಶೀಲ ಧೋರಣೆಯನ್ನು ತಳೆದರು ಎಂಬುದು. ಸಾಮ್ರಾಜ್ಯಶಾಹಿ ದಬ್ಬಾಳಿಕೆ, ಬಂಡವಾಳಶಾಹಿ ಶೋಷಣೆ, ಗ್ರಾಮೀಣ ಬದುಕಿನ ಉಸಿರುಗಟ್ಟಿಸುವಂತಹ ಸ್ಥಿತಿ, ವಿಧವೆಯರ ವೇದನೆಗಳು, ಕ್ರೂರ ಜಾತಿ ಪದ್ಧತಿ, ಹಳೆಯ ಕಂದಾಚಾರ ಇವೆಲ್ಲವುಗಳ ವಿರುದ್ಧದ ಹೋರಾಟ ಅವರ ಕೃತಿಗಳಲ್ಲಿ ಪ್ರತಿಫಲಿತವಾಯಿತು. ಸ್ವಾತಂತ್ರ ಸಂಗ್ರಾಮದಲ್ಲಿ ಭಾಗವಹಿಸುತ್ತಾ ಹೌರಾ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರೂ ಆಗಿದ್ದ ಅವರು ನೇತಾಜಿ ಸುಭಾಷ್‌ಚಂದ್ರ ಬೋಸ್‌ರ ಆಪ್ತರೊಲ್ಲಬ್ಬರಾಗಿದ್ದರು, ಸ್ವಾತಂತ್ರ ಸಂಗ್ರಾಮದಲ್ಲಿನ ರಾಜಿರಹಿತ, ಕ್ರಾಂತಿಕಾರಿ ಪಂಥವನ್ನು ಬೆಂಬಲಿಸಿದರು. ಕಾರ್ಮಿಕರನ್ನು ಸಂಘಟಿಸಿದ್ದೇ ಅಲ್ಲದೆ ಅಂದಿನ ಕಾಲದಲ್ಲೇ ಸಮಾಜವಾದಿ ವೇದಿಕೆಯೊಂದನ್ನೂ ಅವರು ರಚಿಸಿದ್ದರು. ಭಾರತದ ಎಲ್ಲಾ ಭಾಷೆಗಳಿಗೂ ಅನುವಾದಿತವಾದ ಅವರ ಕೃತಿಗಳು ಅನೇಕ ಯೂರೋಪಿಯನ್ ಭಾಷೆಗಳಲ್ಲೂ ತರ್ಜುಮೆಯಾದವು. ಜನಪ್ರಿಯತೆಯ ಉತ್ತುಂಗವನ್ನೇ ಏರಿದ ಶರತ್‌ರ ಅನೇಕ ಕೃತಿಗಳು ಚಲನಚಿತ್ರಗಳಾದವು, ಇಂದೂ ಆಗುತ್ತಿವೆ. ಅನೇಕಾನೇಕ ಟಿ.ವಿ. ಧಾರವಾಹಿಗಳು ಕಾಣಿಸಿಕೊಂಡಿವೆ. ಕನ್ನಡದಲ್ಲಿಯೂ ಬಹುತೇಕ ಎಲ್ಲಾ ಕೃತಿಗಳು ಅನುವಾದವಾಗಿರುವುದಲ್ಲದೆ ಕೆಲವೊಂದು ಕೃತಿಗಳು ಇಬ್ಬರು ಮೂವರು ಲೇಖಕರಿಂದ ಅನುವಾದಗೊಂಡಿರುವುದು ಗಮನಾರ್ಹ.

ಇಂಥ ಮಹಾನ್ ಲೇಖಕರನ್ನು ಓದಲು, ಅರ್ಥಮಾಡಿಕೊಳ್ಳಲು ಮಾರ್ಗದರ್ಶಿಯಾಗಬಲ್ಲ ವಿಮರ್ಶೆ ಅಗತ್ಯ ಎಂಬುದು ಸರ್ವವಿದಿತ. ಈ ದಿಶೆಯಲ್ಲಿ ಅತ್ಯಂತ ವೈಜ್ಞಾನಿಕವಾಗಿ, ವಸ್ತುನಿಷ್ಠವಾಗಿ ಹಾಗೂ ಇತಿಹಾಸದ ಅಡಿಗಲ್ಲಿನ ಮೇಲೆ ಶರತ್‌ಚಂದ್ರರ ಕೃತಿಗಳನ್ನು ವಿಮರ್ಶಿಸಿರುವ ಈ ಕೃತಿಯನ್ನು ನಿಮ್ಮ ಕೈಯಲ್ಲಿರಿಸುತ್ತಿದ್ದೇವೆ.

ಮಹಾನ್ ಮಾರ್ಕ್ಸ್‌ವಾದಿ ಚಿಂತಕರಾದ ಶಿವದಾಸ್ ಘೋಷ್‌ರು ಶರತ್ ಚಂದ್ರರ ಕುರಿತು ಹಲವಾರು ಉಪನ್ಯಾಸಗಳನ್ನು ನೀಡಿದ್ದರು. ಇದನ್ನು ಸೂಕ್ತವಾಗಿ ಸಂಪಾದಿಸುವ ಸಲುವಾಗಿ ಎಸ್.ಯು.ಸಿ.ಐ(ಸಿ) ಪಕ್ಷದ ಕೇಂದ್ರ ಸಮಿತಿಯು ಆಯೋಗವೊಂದನ್ನು ನೇಮಿಸಿತ್ತು. ಅದರ ಫಲವಾಗಿ ಹೊರಬಂದ ಬಂಗಾಳಿ ಹೊತ್ತಿಗೆಯು ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಮಾರಾಟಗೊಂಡು ನಂತರ ಬಂದ ಅದರ ಇಂಗ್ಲೀಷ್ ಅನುವಾದವೂ ಹಲವಾರು ಮುದ್ರಣಗಳನ್ನು ಕಂಡಿದೆ.

ಇದೀಗ ಆ ಹೊತ್ತಿಗೆಯ ಕನ್ನಡದ ಆವೃತ್ತಿಯನ್ನು ಹೊರತರುತ್ತಿರುವುದು ನಮಗೆ ಹೆಮ್ಮೆಯ ಸಂಗತಿ. ಈ ತಲೆಮಾರಿನ ಕನ್ನಡದ ಓದುಗರಿಗಂತೂ ಶರತ್ ಚಂದ್ರರ ಸೂಕ್ತ ಪರಿಚಯವಾಗಬೇಕಾದುದ್ದು ಅತ್ಯಗತ್ಯ. ಅಲ್ಲದೆ ಈ ಹೊತ್ತಿಗೆಯಲ್ಲಿ ಸಾಹಿತ್ಯ ವಿಮರ್ಶೆಗೆ ಹಾಗೂ ಸಾಮಾಜಿಕ ಪರಿವರ್ತನೆಯಲ್ಲಿ ಸಾಹಿತ್ಯದ ಪಾತ್ರಕ್ಕೆ ಸಂಬಂಧಿಸಿದಂತೆ ಎಷ್ಟೋ ಸಾರ್ವತ್ರಿಕವಾಗಿ ಅನ್ವಯವಾಗುವ ಮಹತ್ವದ ಸೈದ್ಧಾಂತಿಕ ಪ್ರತಿಪಾದನೆಗಳಿವೆ. ಹಾಗಾಗಿ ಇದು ಅವಶ್ಯವಾದದ್ದು, ಅಮೂಲ್ಯವಾದದ್ದು. ಸಹೃದಯ ಓದುಗರೆಲ್ಲರೂ ಇದನ್ನು ಸ್ವಾಗತಿಸುತ್ತಾರೆ ಹಾಗೂ

ಇದರ ಬಗ್ಗೆ ಅಭಿಪ್ರಾಯವನ್ನು ತಿಳಿಸುತ್ತಾರೆ ಎಂದು ನಂಬಿದ್ದೇವೆ. ಅನುವಾದದ ಪ್ರಕ್ರಿಯೆಯಲ್ಲಿ ಯಾವುದೇ ಇತಿಮಿತಿಗಳು ಉಂಟಾಗಿದ್ದಲ್ಲಿ ಅದರ ಸಂಪೂರ್ಣ ಜವಾಬ್ದಾರಿ ನಮ್ಮದೇ.

**ಕೆ.ರಾಧಾಕೃಷ್ಣ**

ರಾಜ್ಯ ಕಾರ್ಯದರ್ಶಿಗಳು,

ಎಸ್‌ಯುಸಿಐ(ಸಿ), ಕರ್ನಾಟಕ

# ಎರಡನೇ ಮುದ್ರಣ

ಮಹಾನ್ ಮಾರ್ಕ್ಸ್‌ವಾದಿ ಚಿಂತಕರಾದ ಶಿವದಾಸ್ ಘೋಷ್‌ರು ಶರತ್ ಚಂದ್ರರ ಸಾಹಿತ್ಯ ಸೃಷ್ಟಿ ಹಾಗೂ ವೈಚಾರಿಕತೆಯ ಕುರಿತು ಮಾಡಿದ ವಸ್ತುನಿಷ್ಠ, ಮಾರ್ಕ್ಸ್‌ವಾದಿ ವಿಶ್ಲೇಷಣೆಯು ಸಾಹಿತ್ಯಾಸಕ್ತರ ಅಪಾರ ಮೆಚ್ಚುಗೆಯನ್ನು ಗಳಿಸಿದೆ. ಮೊದಲ ಮುದ್ರಣದ ಪ್ರತಿಗಳೆಲ್ಲವೂ ಮುಗಿದುಹೋಗಿದ್ದು, ಜನರ ಬೇಡಿಕೆ ಏರುತ್ತಲೇ ಇದೆ. ಈ ಅವಶ್ಯಕತೆಯನ್ನು ಪೂರೈಸುವ ಸಲುವಾಗಿ ಎರಡನೆಯ ಮುದ್ರಣ ಹೊರಬರುತ್ತಿದೆ. ಈ ಆವೃತ್ತಿಯಲ್ಲಿ ಕೆಲವೊಂದು ಕಡೆ ಭಾಷಾ ಅಭಿವ್ಯಕ್ತಿಯನ್ನು ಉತ್ತಮಪಡಿಸಲಾಗಿದೆ. ಎಂದಿನಂತೆ ಸಹೃದಯ ಓದುಗರೆಲ್ಲರೂ ಇದನ್ನು ಸ್ವಾಗತಿಸುತ್ತಾರೆ ಎಂಬುದು ನಮ್ಮ ನಂಬಿಕೆ.

**ಕೆ.ರಾಧಾಕೃಷ್ಣ**

ರಾಜ್ಯ ಕಾರ್ಯದರ್ಶಿಗಳು,

ಎಸ್‌ಯುಸಿಐ(ಸಿ), ಕರ್ನಾಟಕ

# ಶರತ್‌ಚಂದ್ರ
## ಒಂದು ಮೌಲ್ಯಮಾಪನ

ಶರತ್‌ಚಂದ್ರರ ಸಾಹಿತ್ಯವನ್ನೇ ಆಗಲಿ ಅಥವಾ ಇನ್ನಾವುದೇ ಸಾಹಿತಿಯ ಸಾಹಿತ್ಯಕ ವಿಚಾರ ಹಾಗೂ ಕೃತಿಗಳನ್ನೇ ಆಗಲಿ ವೈಜ್ಞಾನಿಕವಾಗಿ ಮೌಲ್ಯಮಾಪನ ಮಾಡಬಯಸಿದರೆ, ಆ ಸಾಹಿತಿ ಮೂಡಿಬಂದ ಹಾಗೂ ತನ್ನ ಸಾಹಿತ್ಯವನ್ನು ಸೃಷ್ಟಿಸಿದ ನಿರ್ದಿಷ್ಟ ಕಾಲ ಮತ್ತು ಸಾಮಾಜಿಕ ಪರಿಸರವನ್ನು ನಾವು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಯಾವುದೇ ಸಾಹಿತಿಯ ಚಿಂತನೆ ಮತ್ತು ಜೀವನದರ್ಶನವನ್ನು ನಾವು ಅವರ ಕಾಲ ಮತ್ತು ಸಾಮಾಜಿಕ ಪರಿಸರದಿಂದ ಪ್ರತ್ಯೇಕಿಸಿ ಚರ್ಚಿಸಲು ಅಥವಾ ಮೌಲ್ಯಮಾಪನ ಮಾಡಲು ಪ್ರಯತ್ನಿಸಿದರೆ ಅದೊಂದು ದೊಡ್ಡ ತಪ್ಪಾಗುತ್ತದೆ. ಏಕೆಂದರೆ ಮಾನವನ ಚಿಂತನೆ ಹಾಗೂ ವಿಚಾರಗಳು ಕಾಲ, ಸ್ಥಳ ಹಾಗೂ ಸಾಮಾಜಿಕ ಪರಿಸರದ ಮಿತಿಗೆ ಒಳಪಟ್ಟಿವೆ. ಮಾನವನ ಚಿಂತನಾ ಶಕ್ತಿಯು ನಿಸ್ಸಂದೇಹವಾಗಿ ಅಪರಿಮಿತವೂ ಸೀಮಾತೀತವೂ ಆಗಿದೆ ನಿಜ. ಆದರೆ ಈ ಸೀಮಾತೀತ ಅಥವಾ ಅಪರಿಮಿತ ಶಕ್ತಿಯು ವಾಸ್ತವದಲ್ಲಿ ಒಂದು ನಿರ್ದಿಷ್ಟ ವಸ್ತುಸ್ಥಿತಿ ಅಥವಾ ಪರಿಸರ, ಅರ್ಥಾತ್ ಒಂದು ನಿರ್ದಿಷ್ಟ ಕಾಲ ಹಾಗೂ ಸ್ಥಳದ ಪರಿಮಿತಿಗಳಿಗೆ ಅಧೀನವಾಗಿರುತ್ತದೆ.

ವ್ಯಕ್ತಿಯೊಬ್ಬ ಎಂತಹ ಮಹಾನ್ ಮೇಧಾವಿಯೇ ಆಗಿದ್ದರೂ ಸಹ ಆತನ ಚಿಂತನಾ ಶಕ್ತಿಯು ವಸ್ತು ಸ್ಥಿತಿಯ ಮಿತಿಯನ್ನು ಯಾವುದೇ ರೀತಿಯಿಂದಲೂ ದಾಟಿ ಹೋಗಲಾರದು. ಆದ್ದರಿಂದಲೇ ಬುದ್ಧ ತನ್ನ ಕಾಲದಲ್ಲಿನ ಮಹಾನ್ ಚಿಂತಕನಾಗಿದ್ದರೂ ಸಹ ಆತನಿಗೆ ಸಾಪೇಕ್ಷ ಸಿದ್ಧಾಂತವನ್ನು ಕಂಡುಹಿಡಿಯುವುದು ಸಾಧ್ಯವಾಗಲಿಲ್ಲ. ಹಾಗೆಯೇ ಬುದ್ಧ ತನ್ನ ಅಚ್ಚರಿಗೊಳಿಸುವ ಮೇಧಾವಿತನದ ಮೂಲಕ ಸಹ, ಆಧುನಿಕ ನಾಗರಿಕ ವಿಶ್ವದ ಪ್ರಜಾತಾಂತ್ರಿಕ ಶಿಕ್ಷಣದ ಪರಿಕಲ್ಪನೆಗಳಿಂದ ವಿಚಾರವಂತನಾಗಿರುವ ಇಂದಿನ ಶ್ರೀಸಾಮಾನ್ಯ ಸಹ ಅತ್ಯಂತ ಪ್ರೀತಿಯಿಂದ ಆಕಾಂಕ್ಷಿಸುವ ಮಾನವತಾವಾದ, ಮಹಿಳಾ ವಿಮುಕ್ತಿ, ನಾರೀತ್ವದ ಘನತೆ ಮುಂತಾದ ಜೀವನದ ಕುರಿತಾದ ಪ್ರಜಾತಾಂತ್ರಿಕ ಪರಿಕಲ್ಪನೆಗಳನ್ನು ತನ್ನ ಕಾಲದಲ್ಲಿ ಕಲ್ಪಿಸಿಕೊಳ್ಳುವುದು ಸಾಧ್ಯವಾಗಲಿಲ್ಲ. ಅದೇ ರೀತಿ ಆನಂತರದ ದಿನಗಳಲ್ಲಿ ಜೀವನದ ಕುರಿತಾದ ಇಂತಹ ಆಧುನಿಕ ಪ್ರಜಾತಾಂತ್ರಿಕ ಪರಿಕಲ್ಪನೆಗಳನ್ನು ಪ್ರತಿಪಾದಿಸಿದವರು ಹಾಗೂ ಅನನ್ಯ ವೈಜ್ಞಾನಿಕ ಅನ್ವೇಷಣೆಗಳನ್ನು ಮಾಡಿದ ಮಹನೀಯರು ಹಿಂದಿನ ಮಹಾಪುರುಷರಾದ ಬುದ್ಧ, ಶಂಕರಾಚಾರ್ಯ, ಮಹಮದ್ ಅಥವಾ ಏಸುಕ್ರಿಸ್ತರನ್ನು ಪ್ರತಿಭೆಯಲ್ಲಿ ಮೀರಿಸಿದವರು ಎಂದು ಅಂದುಕೊಂಡರೆ ಅದು ತಪ್ಪಾದೀತು. ಇದರರ್ಥ ಯಾವುದೇ ವಿಚಾರ ಅಥವಾ ಚಿಂತನೆ ಹೊರಹೊಮ್ಮುವುದಕ್ಕೂ ಮೊದಲು ಮಾನವನ ಚಿಂತನೆ ಹಾಗೂ ಧೀ ಶಕ್ತಿಯ ಬೆಳವಣಿಗೆಗೆ ಬೇಕಾದ ಪರಿಕರಗಳು – ಅಂದರೆ ಅವಶ್ಯಕ ವಸ್ತುಸ್ಥಿತಿಯು ಮೊದಲು ಸಮಾಜದಲ್ಲಿ ಉದ್ಭವಿಸಿರುತ್ತದೆ. ಓರ್ವ ಸಾಹಿತಿ ಅಥವಾ ಮಹಾನ್ ವ್ಯಕ್ತಿಯ ಮೌಲ್ಯಮಾಪನದ ಸಂದರ್ಭದಲ್ಲಿ ಅನೇಕ ಜನ ಈ ಅತ್ಯಂತ ಮುಖ್ಯ ವಿಷಯವನ್ನು ಬಾರಿ ಬಾರಿಗೂ ಮರೆಯುತ್ತಾರೆ. ಅದರಿಂದಾಗಿ ಅವರು ಹಲವು ಸಲ

ತೀರಾ ವಿಚಿತ್ರ ತೀರ್ಮಾನಗಳಿಗೆ ಬರುತ್ತಾರೆ. ಒಬ್ಬಾತ ಎಷ್ಟೇ ಮಹಾನ್ ವ್ಯಕ್ತಿಯಾಗಿರಲಿ ಅಥವಾ ಪ್ರತಿಭಾಶಾಲಿಯಾಗಿರಲಿ ಅಂದಿನ ವಸ್ತುಸ್ಥಿತಿಯು ಅವನ ಚಿಂತನಾ ಶಕ್ತಿ ಅಥವಾ ಪ್ರತಿಭೆಯನ್ನು ವಾಸ್ತವದಲ್ಲಿ ಸೀಮಿತಗೊಳಿಸುತ್ತದೆ. ಯಾರೇ ಆಗಲಿ ಅದನ್ನು ಮೀರಲು ಸಾಧ್ಯವಿಲ್ಲ ಎಂಬುದನ್ನು ಅರಿತಾಗ ಮಾತ್ರವೇ ನಾವು ಒಂದು ನಿರ್ದಿಷ್ಟ ಕಾಲ ಹಾಗೂ ಸಾಮಾಜಿಕ ಪರಿಸರದ ಹಿನ್ನೆಲೆಯಲ್ಲಿ ಒಬ್ಬ ಮಹಾನ್ ವ್ಯಕ್ತಿಯ ಸರಿಯಾದ ಮೌಲ್ಯಮಾಪನ ಮಾಡುವುದು ಸಾಧ್ಯವಾಗುತ್ತದೆ.

ಆಗ ಮಾತ್ರವೇ ಒಂದು ನಿರ್ದಿಷ್ಟ ಕಾಲಘಟ್ಟ ಹಾಗೂ ಸಾಮಾಜಿಕ ಪರಿಸರದ ಹಿನ್ನೆಲೆಯಲ್ಲಿ ನಾವು ಮೌಲ್ಯಮಾಪನ ಮಾಡುತ್ತಿರುವ ವ್ಯಕ್ತಿಯ ಚಿಂತನೆ, ವಿಚಾರ ಹಾಗೂ ಚಟುವಟಿಕೆಗಳು ಆ ಕಾಲದಲ್ಲಿ ಪ್ರಗತಿಗಾಗಿ ನಡೆದ ಸಾಮಾಜಿಕ ಆಂದೋಲನದ ದೃಷ್ಟಿಯಿಂದ ನಿಜವಾಗಿಯೂ ಪ್ರಗತಿಪರವಾಗಿದ್ದವೇ ಅಥವಾ ಪ್ರತಿಗಾಮಿಯಾಗಿದ್ದವೇ ಎಂಬುದನ್ನು ನಿರ್ಧರಿಸಬಹುದು. ಅವರು ತಮ್ಮ ಚಿಂತನೆ, ವಿಚಾರಗಳ ಮೂಲಕ ಯಾವ ರೀತಿಯ ಸಾಮಾಜಿಕ ದೃಷ್ಟಿಕೋನ, ಸೌಂದರ್ಯಾಭಿರುಚಿ ಮತ್ತು ಸಾಂಸ್ಕೃತಿಕ ಮಟ್ಟಗಳನ್ನು ಪ್ರತಿಬಿಂಬಿಸಿದ್ದಾರೆ ಹಾಗೂ ಇವು ಎಷ್ಟರಮಟ್ಟಿಗೆ ಸಾಮಾಜಿಕ ಪ್ರಗತಿಗೆ ಸಹಾಯಕವಾದವು ಅಥವಾ ಪ್ರತಿಗಾಮಿಯಾಗಿದ್ದರೆ ಅವು ಎಷ್ಟರಮಟ್ಟಿಗೆ ಪ್ರತಿಗಾಮಿಯಾಗಿದ್ದವು ಎಂಬಂತಹ ಪ್ರಶ್ನೆಗಳ ಬಗ್ಗೆ ಸರಿಯಾಗಿ ಮೌಲ್ಯಮಾಪನ ಮಾಡಲು ಸಹ ನಾವು ಶಕ್ತರಾಗುತ್ತೇವೆ. ಇಲ್ಲದಿದ್ದಲ್ಲಿ ಕಾಲ, ಸ್ಥಳ, ಪರಿಸರ, ಇತ್ಯಾದಿಗಳ ಬದಲಾವಣೆಯೊಂದಿಗೆ ಬದಲಾವಣೆಯಾಗದ ಕೆಲವು  ಮೂಲಭೂತ ಅಂಶಗಳು ಮಾನವನ ಚಿಂತನೆ ಹಾಗೂ ಜೀವನಮೌಲ್ಯಗಳಲ್ಲಿ ಇವೆ,  ಅವು ಅಮರ ಎಂಬುದನ್ನು ನಾವು ಒಪ್ಪಬೇಕಾಗುತ್ತದೆ. ನನ್ನ ಪ್ರಕಾರ ಇದು ಅವೈಜ್ಞಾನಿಕವಾದ ಹಾಗೂ ತಪ್ಪಾದ ಪರಿಕಲ್ಪನೆ ಮಾತ್ರವಲ್ಲ ಹಾನಿಕಾರಕವಾದದ್ದೂ ಸಹ. ಏಕೆಂದರೆ ಇಂತಹ ಪರಿಕಲ್ಪನೆಗಳು ಮಾನವನ ಚಿಂತನೆಯ ಬೆಳವಣಿಗೆ ಹಾಗೂ ಪ್ರಗತಿಗೆ ಅಡ್ಡವಾಗಿ ನಿಲ್ಲುತ್ತವೆ ಹಾಗೂ ಸತ್ಯವನ್ನು ಗ್ರಹಿಸುವಲ್ಲಿ ಅಡೆತಡೆಗಳನ್ನು ಸೃಷ್ಟಿಸುತ್ತವೆ.

ಯಾರು ಈ ಪ್ರತಿಪಾದನೆಯನ್ನು ಒಪ್ಪುವುದಿಲ್ಲವೋ ಅವರು ಈ ಪ್ರಶ್ನೆಯನ್ನು ಉತ್ತರಿಸಬೇಕಾಗುತ್ತದೆ. ಸಾಪೇಕ್ಷ ಸಿದ್ಧಾಂತ ಅಥವಾ ವಿದ್ಯುತ್–ಅಯಸ್ಕಾಂತ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ಸಿದ್ಧಾಂತಗಳನ್ನು ಕಂಡುಹಿಡಿಯುವಲ್ಲಿ ಬುದ್ಧ ವಿಫಲನಾಗಿದ್ದು ಆತ ಐನ್‌ಸ್ಟೈನ್‌ಗಿಂತ ಕಡಿಮೆ ಪ್ರತಿಭಾವಂತನಾಗಿದ್ದುದರಿಂದಲೇ? ಹಾಗೆಯೇ, ಯುರೋಪಿನ ಮಾನವತಾವಾದಿಗಳು ಪ್ರಜಾತಾಂತ್ರಿಕ ಪರಿಕಲ್ಪನೆ ಮತ್ತು ಆದರ್ಶಗಳಿಗೆ ಜನ್ಮ ನೀಡಲು ಕಾರಣ ಅವರು ಬುದ್ಧ, ಶಂಕರಾಚಾರ್ಯ ಮತ್ತು ಸಾಕ್ರೆಟಿಸ್‌ರವರಿಗಿಂತ ಉನ್ನತ ಪ್ರತಿಭೆ ಮತ್ತು ವಿವೇಕವನ್ನು ಹೊಂದಿದ್ದರೆಂಬುದೇ? ಅಥವಾ ಕಾರ್ಲ್‌ಮಾರ್ಕ್ಸ್ ಇನ್ನೂ ಹೆಚ್ಚು ಮೇಧಾವಿಯಾದ್ದರಿಂದ ಇನ್ನೂ ಉನ್ನತ ಪರಿಕಲ್ಪನೆಯಾದ ವೈಜ್ಞಾನಿಕ ಸಮಾಜವಾದದ ಸಿದ್ಧಾಂತವನ್ನು ಪ್ರತಿಪಾದಿಸಲು ಸಾಧ್ಯವಾಯಿತೇ? ಇಂತಹ ಅಭಿಪ್ರಾಯಗಳನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ನನ್ನ ಪ್ರಕಾರ ವಿವಿಧ ಕಾಲಘಟ್ಟಗಳ ಮಹಾನ್ ಚಿಂತಕರು ಅವರವರ ಕಾಲದ ಸರ್ವೋತ್ಕೃಷ್ಟ ಮೇಧಾವಿಗಳಾಗಿದ್ದರೂ ಸಹ ತಮ್ಮ ಐತಿಹಾಸಿಕ ಇತಿಮಿತಿಗಳನ್ನು ಎಂದರೆ ಕಾಲ, ಸ್ಥಳ ಹಾಗೂ ಸಾಮಾಜಿಕ ಪರಿಸರದ ಇತಿಮಿತಿಗಳನ್ನು

ದಾಟಿಹೋಗಲು ಸಾಧ್ಯವಾಗಲಿಲ್ಲ. ಚರಿತ್ರೆಯಲ್ಲಿ ಯಾವುದೇ ವ್ಯಕ್ತಿ ತನ್ನ ಕಾಲದಲ್ಲಿ ಅತ್ಯುನ್ನತ ಪ್ರತಿಭೆ ಹಾಗು ಸಾಮರ್ಥ್ಯದ ಉತ್ತುಂಗವನ್ನು ತಲುಪಿದ್ದರೂ ಸಹ ಸಾಮಾಜಿಕ ಬೆಳವಣಿಗೆಯ ನಂತರದ ಹಂತದಲ್ಲಿ ಮೂಡಿಬಂದಂತಹ ಆಧುನಿಕ ಚಿಂತನೆಗಳ ಬಗ್ಗೆ ಕಿಂಚಿತ್ತಾದರೂ ಊಹಿಸುವುದೂ ಅಸಾಧ್ಯ. ಆದ್ದರಿಂದಲೇ ಕೊಪರ್ನಿಕಸ್ ರೂಪಿಸಿದ ನೈಸರ್ಗಿಕ ವಿಜ್ಞಾನದ ತಿಳುವಳಿಕೆಯ ಆಧಾರದ ಮೇಲೆ ನ್ಯೂಟನ್ ಉದಯಿಸಲು ಸಾಧ್ಯವಾಯಿತು. ಅಂತೆಯೇ ನ್ಯೂಟನ್‌ನ ಯಂತ್ರಶಾಸ್ತ್ರದ ಬುನಾದಿಯ ಮೇಲೆಯೇ ಐನ್‌ಸ್ಟೈನ್‌ರಂತಹ ಮೇಧಾವಿ ಮೂಡಿಬರಲು ಸಾಧ್ಯವಾಯಿತು.

ಹಾಗೆಯೇ, ಸಾಹಿತ್ಯದಲ್ಲಿ ಸಹ ಯಾವುದೇ ನಿರ್ದಿಷ್ಟ ಚಿಂತನೆ, ವಿಚಾರ, ರೂಢಿ, ತತ್ವ ಅಥವಾ ಸಾಂಸ್ಕೃತಿಕ ಮಾದರಿ ಮನುಷ್ಯನಿಗೆ ಎಲ್ಲಾ ಕಾಲಕ್ಕೂ ಮಾರ್ಗದರ್ಶನ ನೀಡಲು ಸಾಧ್ಯವಿಲ್ಲ. ಒಂದು ನಿರ್ದಿಷ್ಟ ಯುಗಕ್ಕೆ ಸೇರಿದ ನಿರ್ದಿಷ್ಟ ಪರಿಕಲ್ಪನೆಗಳ ಪ್ರಕಾರವೊಂದು ಮಾನವನು ಕೆಲವು ಹೆಜ್ಜೆ ಮುಂದಿಡಲು ಅಥವಾ ಸಾಮಾಜಿಕವಾಗಿ ಸ್ವಲ್ಪ ಹೆಚ್ಚಿನ ಹಂತಗಳನ್ನು ಏರಲು ಸಹಾಯ ಮಾಡಬಹುದು. ಆದರೆ ಒಮ್ಮೆ ಸಾಮಾಜಿಕ ಕಲ್ಯಾಣ ಹಾಗೂ ಉತ್ತಮ ಜೀವನಕ್ಕೆ ನೆರವು ನೀಡಿದ ಅದೇ ಚಿಂತನೆಗಳು, ವಿಚಾರಗಳು ನಂತರ ಹೊಸ ಪರಿಸ್ಥಿತಿಯಲ್ಲಿ ಹೊಸ ಸಮಸ್ಯೆಗಳನ್ನು ಎದುರಿಸುವಾಗ ಸಾಮಾಜಿಕ ಪ್ರಗತಿ ಹಾಗೂ ಏಳ್ಗೆಯನ್ನು ಸಾಧಿಸುವಲ್ಲಿ ಅಸಮರ್ಪಕವಾಗುತ್ತವೆ, ಹಳತಾಗುತ್ತವೆ. ಹಳೆಯ ವಿಚಾರಗಳು ಹಾಗೂ ಚಿಂತನೆಗಳು ಹೊಸ ಹೊಸ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವಲ್ಲಿ ಪರಿಣಾಮಕಾರಿಯಾಗದೆ ಅವಾಸ್ತವಿಕವಾಗುತ್ತವೆ. ಈ ಹೊಸ ವಿಚಾರ, ಪರಿಕಲ್ಪನೆಗಳು ಆ ಹಿಂದಿನ ಅತ್ಯುನ್ನತವಾದ ಹಾಗೂ ಅತ್ಯಂತ ಮುಂದುವರೆದ ವಿಚಾರ ಮತ್ತು ಚಿಂತನೆಗಳ ಬಲವಾದ ಬುನಾದಿಯ ಮೇಲೆ ಬೆಳೆದಿದ್ದರೂ ಸಹ ಅವುಗಳ ಐತಿಹಾಸಿಕ ಮುಂದುವರಿಕೆಯಲ್ಲಿ ಒಂದು ಛೇದವಿರುತ್ತದೆ. ಆಗ ಹೊಸ ಪರಿಸ್ಥಿತಿಯಲ್ಲಿ ಜೀವನ ಮತ್ತು ಸಮಾಜದ ಹೊಸ ಅವಶ್ಯಕತೆಗನುಗುಣವಾಗಿ, ಹಳೆಯ ವಿಚಾರಗಳೊಂದಿಗೆ ಸಂಭವಿಸುವ ದ್ವಂದ್ವ ಮತ್ತು ಸಂಘರ್ಷಗಳ ಮೂಲಕ ಒಂದು ಪೂರ್ತಿಯಾಗಿ ಹೊಸತಾದ ವೈಚಾರಿಕ ಪ್ರಕಾರ ಉದ್ಭವಿಸುತ್ತದೆ. ಹೀಗೆ ವಿಚಾರ, ಚಿಂತನೆಗಳು, ಸಂಸ್ಕೃತಿ, ಸೌಂದರ್ಯಾಭಿರುಚಿ ನೀತಿ, ನೈತಿಕತೆ, ಮೌಲ್ಯಗಳಿಗೆ ಸಂಬಂಧಿಸಿದ ಪರಿಕಲ್ಪನೆಗಳು – ಎಲ್ಲವೂ ಮತ್ತೆ ಮತ್ತೆ ಬದಲಾವಣೆ ಹೊಂದಿ ಹೊಸ ಹೊಸ ಪರಿಕಲ್ಪನೆಗಳಾಗಿ ಬದಲಾಗುತ್ತವೆ. ಆದ್ದರಿಂದ ಯಾವುದೇ ಸತ್ಯವು ನಿರುಪಾಧಿಕವಲ್ಲ, ಚಿರಂತನವೂ ಅಲ್ಲ. ಸತ್ಯವು ಯಾವಾಗಲೂ ಮೂರ್ತವೂ ಸಾಪೇಕ್ಷವೂ ಆಗಿರುತ್ತದೆ. ಆದ್ದರಿಂದಲೇ ಸತ್ಯ ನಿರ್ಮಾಮಕಾರಿಯೂ, ನಿರ್ಣಾಯಕವೂ ಹೌದು. ಸತ್ಯವು ಘಟನಾವಳಿಗಳ ಮತ್ತು ಪ್ರಘಟನೆಗಳ ಗತಿಯ ಮೇಲೆ ಪ್ರಭಾವ ಬೀರುತ್ತದೆ ಹಾಗೂ ಅವುಗಳನ್ನು ನಿರ್ಧರಿಸುತ್ತದೆ. ನಿರುಪಾಧಿಕ ಅಥವಾ ಅಮರ ಸತ್ಯದ ಪರಿಕಲ್ಪನೆ ಅವಾಸ್ತವಿಕವಾಗಿರುವುದರಿಂದ ಅದು ಬದುಕು ಮತ್ತು ಸಾಮಾಜಿಕ ಕ್ರಿಯೆಗಳ ಕುರಿತು ಮನುಷ್ಯನು ಒಂದು ವಸ್ತುನಿಷ್ಠ ದೃಷ್ಟಿಕೋನವನ್ನು ಅಳವಡಿಸಿಕೊಳ್ಳುವಲ್ಲಿ ಅಸಮರ್ಥನಾಗುವಂತೆ ಮಾಡುತ್ತದೆ.

ಆದ್ದರಿಂದ ಶರತ್‌ಚಂದ್ರರ ಸಾಹಿತ್ಯದ ಮೌಲ್ಯಮಾಪನ ಮಾಡುವಾಗ, ಇಂದು ನಾವು ಅತ್ಯುನ್ನತ ಹಾಗೂ ಉದಾತ್ತವೆಂದು ಪರಿಗಣಿಸುವ ಚಿಂತನೆ ಹಾಗೂ ವಿಚಾರಗಳನ್ನು ಅವರು ತಮ್ಮ ಕಾಲದಲ್ಲಿ ಪ್ರತಿಧ್ವನಿಸದಿದ್ದಲ್ಲಿ ಕೂಡಲೇ ಅವರನ್ನು ಪ್ರತಿಗಾಮಿ ಎಂದು ತೀರ್ಮಾನಿಸುವುದು ಸರಿಯಾದ ಮೌಲ್ಯಮಾಪನ ಅಲ್ಲವೇ ಅಲ್ಲ ಎಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು. ಶರತ್‌ಚಂದ್ರರು ತಮ್ಮ ಸಾಹಿತ್ಯದಲ್ಲಿ ಪ್ರತಿಬಿಂಬಿಸಿದ ಜೀವನದರ್ಶನ, ಚಿಂತನೆ, ವಿಚಾರಗಳು ಹಾಗೂ ನೈತಿಕ – ಸಾಂಸ್ಕೃತಿಕ ಮಟ್ಟ ನಮ್ಮ ದೇಶದ ಅಂದಿನ ಸಾಮಾಜಿಕ ಬೆಳವಣಿಗೆಯ ನಿರ್ದಿಷ್ಟ ಹಂತದಲ್ಲಿ ಜರುಗಿದ ಪ್ರಗತಿಪರ ಆಂದೋಲನಕ್ಕೆ ಮತ್ತು ಕ್ರಾಂತಿಕಾರಿ ಸಂಘರ್ಷಕ್ಕೆ ನಿಜವಾಗಿಯೂ ಪೂರಕವಾಗಿದ್ದವೇ ಇಲ್ಲವೇ ಎಂಬುದೇ ಇಲ್ಲಿ ಪ್ರಸ್ತುತವಾಗಿರುವ ಮುಖ್ಯ ಅಂಶ ಎಂಬುದನ್ನು ಅರ್ಥಮಾಡಿಕೊಳ್ಳುವಲ್ಲಿ ಇಂಥ ಜನ ವಿಫಲರಾಗಿದ್ದಾರೆ. ಇಂದಿನ ಕ್ರಾಂತಿಕಾರಿ ಆಂದೋಲನ ಆ ಕಾಲದ ಕ್ರಾಂತಿಕಾರಿ ಆಂದೋಲನದಿಂದ ವೈಚಾರಿಕವಾಗಿ, ಸಂಘಟನಾತ್ಮಕವಾಗಿ ಹಾಗೂ ಗುಣಲಕ್ಷಣಗಳಲ್ಲಿ ಭಿನ್ನವಾಗಿರುವುದು ಮಾತ್ರವಲ್ಲದೆ, ಕ್ರಾಂತಿಯ ಶಕ್ತಿಯಾದ ಜನತೆ ಸಹ ಬದಲಾವಣೆಗೆ ಒಳಗಾಗಿದ್ದಾರೆ. ಆದ್ದರಿಂದ ಇಂದಿನ ಪ್ರಗತಿ ಮತ್ತು ಕ್ರಾಂತಿಯ ಅವಶ್ಯಕತೆಗೆ ಪೂರಕವಾದ ಅತ್ಯಂತ ಮುಂದುವರೆದ ಚಿಂತನೆ ಮತ್ತು ವಿಚಾರಗಳಷ್ಟು ಶರತ್‌ಚಂದ್ರರ ಯಾವುದೇ ಚಿಂತನೆ ಅಥವಾ ವಿಚಾರ ಪ್ರಗತಿಪರವೆಂದು ಕಂಡುಬರದಿದ್ದಲ್ಲಿ ಒಮ್ಮಿಂದೊಮ್ಮೆಲೇ ನಾವದನ್ನು ತಪ್ಪೆಂದು ಕರೆದು, ಪ್ರತಿಗಾಮಿಯೆಂದು ಹಣೆಪಟ್ಟಿ ಅಂಟಿಸಲಾಗದು. ಯಾರನ್ನೇ ಆಗಲಿ ಮೌಲ್ಯಮಾಪನ ಮಾಡುವ ರೀತಿ ಇದಲ್ಲ. ಆ ರೀತಿ ಮಾಡ ಹೊರಟರೆ ಬುದ್ಧ, ಸಾಕ್ರೆಟಿಸ್, ಶೇಕ್ಸ್‌ಪಿಯರ್, ಟಾಲ್‌ಸ್ಟಾಯ್, ರವೀಂದ್ರನಾಥ್ ಟ್ಯಾಗೋರ್, ಶರತ್‌ಚಂದ್ರ ಯಾರನ್ನೂ ಸರಿಯಾಗಿ ಮೌಲ್ಯಮಾಪನ ಮಾಡಲಾಗದು ಮತ್ತು ಇಂದು ನಾವು ಯಾವುದನ್ನು ಸರಿಯೆಂದು ಪರಿಗಣಿಸುತ್ತೇವೋ ಅದಕ್ಕೆ ಹೋಲಿಸಿ ನಮ್ಮ ಇಡೀ ಭೂತಕಾಲವನ್ನು ತಪ್ಪೆಂದು ತಿರಸ್ಕರಿಸಿದಂತಾಗುತ್ತದೆ. ತತ್ಪರಿಣಾಮವಾಗಿ, ನಾವು ಹಿಂದಿನ ಪರಂಪರೆಯೊಂದಿಗೆ ನಮ್ಮ ಕೊಂಡಿಯನ್ನು ಸಂಪೂರ್ಣವಾಗಿ ಮುರಿದುಕೊಂಡು, ಬೇರುಗಳೇ ಇಲ್ಲದವರಾಗುತ್ತೇವೆ.

...ನಾವೀಗ ಶರತ್‌ಚಂದ್ರರ ಕಾಲದ ವಿಶಿಷ್ಟ ಗುಣಲಕ್ಷಣಗಳೇನು ಎಂಬುದನ್ನು ಪರಿಶೀಲಿಸೋಣ. ಅದು ಭಾರತದ ನವೋದಯ ಆಂದೋಲನದ ಕಾಲವಾಗಿದ್ದು ಸಾಮ್ರಾಜ್ಯಶಾಹಿ ವಿರೋಧಿ ಸ್ವಾತಂತ್ರ್ಯ ಹೋರಾಟದ ಪ್ರಬಲ ಅಲೆ ಇಡೀ ದೇಶವನ್ನೇ ವ್ಯಾಪಿಸಿತ್ತು. ವಾಸ್ತವವಾಗಿ ಭಾರತದಲ್ಲಿ ನವೋದಯ ಆಂದೋಲನದ ಹರಿಕಾರರೆಂದರೆ ರಾಜಾ ರಾಮ್‌ಮೋಹನ್ ರಾಯ್. ಅವರು ನಮ್ಮ ದೇಶದಲ್ಲಿ ಪ್ರಾರಂಭಿಸಿದ ನವೋದಯ ಆಂದೋಲನವು ಯುರೋಪಿನ ನವೋದಯದ ಬೂರ್ಜ್ವಾ ಮಾನವತಾವಾದಿ ಪರಿಕಲ್ಪನೆ ಮತ್ತು ನೈತಿಕ ಮೌಲ್ಯಗಳೊಡನೆ ಧರ್ಮದ ಪ್ರಮುಖ ಸಾರವನ್ನು ಬೆಸೆದು ಧಾರ್ಮಿಕ ಸುಧಾರಣೆಯ ಪಥದಲ್ಲಿ ಮುಂದುವರೆಯಿತು. ನಂತರದ ಕಾಲದಲ್ಲಿ ಈಶ್ವರಚಂದ್ರ ವಿದ್ಯಾಸಾಗರರು ಉದಯಸಿದ್ದು ನವೋದಯ ಆಂದೋಲನದಲ್ಲಿನ ಒಂದು ಮೈಲಿಗಲ್ಲು. ಏಕೆಂದರೆ ನನ್ನ ಅಭಿಪ್ರಾಯದಲ್ಲಿ ಧರ್ಮದ ದಾರಿಗೆ ಹೊರಳಿಕೊಳ್ಳುತ್ತಿದ್ದ ನವೋದಯವನ್ನು ಅಲ್ಲಿಂದ ಹೊರತಂದದ್ದು ಮೊಟ್ಟ ಮೊದಲ ಬಾರಿಗೆ

ವಿದ್ಯಾಸಾಗರರೇ. ನಮ್ಮ ನೆಲದಲ್ಲಿ ಅವರು ಅಂದಿನ ಪರಿಸ್ಥಿತಿಯಲ್ಲಿ ಸಾಧ್ಯವಾಗುವಷ್ಟು ಮಟ್ಟಿಗೆ ವಿಜ್ಞಾನ, ಇತಿಹಾಸ ಹಾಗೂ ತರ್ಕದ ಭದ್ರ ಬುನಾದಿಯ ಮೇಲೆ ಮಾನವತಾವಾದಿ ಆಂದೋಲನವನ್ನು ಬೆಳೆಸಲು ಯತ್ನಿಸಿದರು. ...ನಮ್ಮ ದೇಶದ ಜನ ವಿದ್ಯಾಸಾಗರರನ್ನು ಒಬ್ಬ ಮಹಾಪುರುಷರೆಂದು ಪರಿಗಣಿಸಿ ಅವರನ್ನು ಬಹಳ ಗೌರವಿಸುತ್ತಾರೇನೋ ನಿಜ, ಆದರೆ ಎಷ್ಟು ಮಂದಿ ಅವರನ್ನು ನಿಜವಾಗಿ ಅರ್ಥಮಾಡಿಕೊಂಡಿದ್ದಾರೆ? ಅವರ ಬಾಹ್ಯರೂಪದಿಂದ ಹಾಗೂ ಸಾಂಪ್ರದಾಯಿಕ ಬ್ರಾಹ್ಮಣ ಉಡುಗೆಯಿಂದ ಜನ ಅನೇಕ ಬಾರಿ ಅವರೊಬ್ಬ ಸಂಪ್ರದಾಯಶರಣ ಬ್ರಾಹ್ಮಣರೆಂದು ತಪ್ಪಾಗಿ ಭಾವಿಸುತ್ತಿದ್ದರು. ನಿಜ ಅವರ ವೇಷಭೂಷಣ ಹಾಗೂ ಬಾಹ್ಯ ರೂಪಗಳು ಅವರೊಬ್ಬ ಆಧ್ಯಾತ್ಮವಾದಿ ಹಾಗೂ ಸಂಪ್ರದಾಯಶರಣ ಬ್ರಾಹ್ಮಣ ಎಂದು ಭಾವಿಸುವಂತೆ ಮಾಡುತ್ತಿದ್ದವು. ಆದರೆ ವಾಸ್ತವದಲ್ಲಿ ನಮ್ಮ ದೇಶದ ಅಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಉದ್ಭವಿಸಿದ ಒಬ್ಬ ನೈಜ ಮಾನವತಾವಾದಿಯನ್ನು ನಾವು ಅವರಲ್ಲಿ ಕಾಣುತ್ತೇವೆ. ಅವರು ಪಶ್ಚಿಮದ ವೈಜ್ಞಾನಿಕ ಪರಿಕಲ್ಪನೆಗಳೊಂದಿಗೆ ಭಾರತೀಯ ನಾಗರಿಕತೆಯನ್ನು ಒಂದು ವಿಚಾರಶೀಲ ರೀತಿಯಲ್ಲಿ ಸಮ್ಮಿಲನಗೊಳಿಸಲು ಬಯಸುತ್ತಿದ್ದರು. ಆದ್ದರಿಂದಲೇ ಅವರು ಪ್ರತಿಪಾದಿಸಿದ್ದು: ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಕಲಿಸಿ, ಜಾನ್ ಸ್ಟುವರ್ಟ್ ಮಿಲ್‌ರವರ ತರ್ಕಶಾಸ್ತ್ರವನ್ನು ಅವರಿಗೆ ಬೋಧಿಸಿ. ಸಂಸ್ಕೃತವನ್ನು ಕಲಿಸುವ ಮೂಲಕ ಹೆಳವನಂತಿರುವ ರಾಷ್ಟ್ರವನ್ನು ಅದರ ನೈತಿಕ ಬೆನ್ನೆಲುಬಿನ ಮೇಲೆ ನೆಟ್ಟಗೆ ನಿಲ್ಲುವಂತೆ ಮಾಡುವುದು ಸಾಧ್ಯವಿಲ್ಲ. ...ಈ ರಾಷ್ಟ್ರ ಮತ್ತೆ ತಲೆ ಎತ್ತಿ ನಿಲ್ಲಲು ನಮ್ಮ ದೇಶದ ಜನತೆಯನ್ನು ವಿಶ್ವದ ಜ್ಞಾನಕ್ಕೆ, ವಿಜ್ಞಾನ ಭಂಡಾರಕ್ಕೆ ಪರಿಚಯಿಸಬೇಕು. ನಮ್ಮ ವಿದ್ಯಾರ್ಥಿಗಳಿಗೆ ಹಾಗೂ ಯುವಜನರಿಗೆ ಇತಿಹಾಸ, ತರ್ಕಶಾಸ್ತ್ರ ಮತ್ತು ಆಧುನಿಕ ವೈಜ್ಞಾನಿಕ ವಿಚಾರಗಳೊಂದಿಗೆ, ಯುರೋಪಿನ ವಸ್ತುವಾದಿ ತತ್ವಜ್ಞಾನವನ್ನು ಪರಿಚಯಿಸಲು ಸಾಧ್ಯವಾಗುವುದು ಇಂಗ್ಲಿಷ್ ಭಾಷಾ ಜ್ಞಾನದ ಮೂಲಕವೇ. ಬ್ಯಾಲಂಟೈನ್‌ರವರ ಅಭಿಪ್ರಾಯವನ್ನು ವಿರೋಧಿಸುತ್ತಾ ಅವರು ನುಡಿದರು: ಸಾಂಖ್ಯ ಹಾಗೂ ವೇದಾಂತಗಳು ಪೊಳ್ಳು ತತ್ವಜ್ಞಾನಗಳಾಗಿವೆ. ಅಂತೆಯೇ ಯುರೋಪಿನ ಬರ್ಕ್ಲಿಯವರ ತತ್ವಜ್ಞಾನವೂ ಸಹ. ಇಂತಹ ತಪ್ಪು ತತ್ವಜ್ಞಾನಗಳ ಪ್ರಭಾವದಿಂದ ನಮ್ಮ ಜನತೆಯನ್ನು ಮುಕ್ತಗೊಳಿಸಬೇಕೆಂದರೆ ಅವರನ್ನು ಯುರೋಪಿನ ವಿಜ್ಞಾನ ಹಾಗೂ ಭೌತವಾದಿ ತತ್ವಶಾಸ್ತ್ರದ ಜ್ಞಾನಕ್ಕೆ ಪರಿಚಯಿಸಬೇಕು. ಆಗ ಮಾತ್ರವೇ ನಮ್ಮ ದೇಶದ ಜನ ವಸ್ತು ಪ್ರಪಂಚವನ್ನು ಆಳವಾಗಿ ಅರಿತುಕೊಂಡು ಸತ್ಯವನ್ನು ಗ್ರಹಿಸಿಕೊಳ್ಳಲು ಸಾಧ್ಯವಾಗುತ್ತದೆ ಹಾಗೂ ಈ ಆಧಾರದ ಮೇಲೆ ಮಾತ್ರ ಅವರು ಒಂದು ನೂತನ ಜೀವನ ದರ್ಶನ ಹಾಗೂ ನೂತನ ಮೌಲ್ಯ ಪ್ರಜ್ಞೆಗೆ ಜನ್ಮ ಕೊಡಬಲ್ಲರು. ಹೀಗಾಗಿ ವಿದ್ಯಾಸಾಗರರು ನಿಷ್ಪ್ರಯೋಜಕ ಭಾವನಾವಾದಿ ತತ್ವಜ್ಞಾನಗಳನ್ನು ಬೋಧಿಸುವುದನ್ನು ತೀವ್ರವಾಗಿ ವಿರೋಧಿಸಿದರು. ಶಿಕ್ಷಣದ ಕುರಿತಾದ ಅವರ ದೃಷ್ಟಿಕೋನವನ್ನು ಹತ್ತಿರದಿಂದ ಪರಿಶೀಲಿಸಿದರೆ ವಿದ್ಯಾಸಾಗರ್‌ರವರು ನಮ್ಮ ನವೋದಯ ಆಂದೋಲನವು ತನ್ನ ಆರಂಭದ ಕಾಲದಿಂದಲೂ ಅನುಸರಿಸುತ್ತಿದ್ದ ಧಾರ್ಮಿಕ ಸುಧಾರಣಾವಾದಿ ಧಾರೆಯಿಂದ ವಿಶಿಷ್ಟವಾಗಿ ಪ್ರತ್ಯೇಕವಾಗಿದ್ದರು ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಅವರ ಇಡೀ ಜೀವನದ ಚಿಂತನೆ ಮತ್ತು ಕ್ರಿಯೆಗಳು, ರೂಢಿ ಮತ್ತು ಅಭ್ಯಾಸಗಳು

ಅವರು ಅಂದಿನ ಪರಿಸ್ಥಿತಿಯಲ್ಲಿ ಸಾಧ್ಯವಾಗುವಷ್ಟು ಮಟ್ಟಿಗೆ ಮಾನವತಾವಾದಿ ಆಂದೋಲನವನ್ನು ಧಾರ್ಮಿಕ ಬಂಧನದಿಂದ ಮುಕ್ತಗೊಳಿಸಲು ಇಚ್ಛಿಸಿದರು ಎಂಬುದನ್ನು ನಿಸ್ಸಂದೇಹವಾಗಿ ಸಾಬೀತುಪಡಿಸುತ್ತವೆ.

... ವಿದ್ಯಾಸಾಗರರ ಈ ವಿಶಿಷ್ಟ ಪಾತ್ರವನ್ನು ಬಿಟ್ಟರೆ ಅವರ ನಂತರದ ಕಾಲದಲ್ಲೂ ನಮ್ಮ ನವೋದಯ ಆಂದೋಲನ ಮತ್ತೊಮ್ಮೆ ಧಾರ್ಮಿಕ ಸುಧಾರಣಾವಾದದ ಹಾದಿಯಲ್ಲಿ ನಡೆಯಲಾರಂಭಿಸಿತು. ...ಒಂದೆಡೆ ಹಿಂದೂ ಸಮಾಜವನ್ನು ಸಂಪ್ರದಾಯಶರಣತೆ ಹಾಗೂ ಪೂರ್ವಗ್ರಹದಿಂದ ಬಿಡುಗಡೆಗೊಳಿಸಿ ಸುಧಾರಿಸುವ ಹೆಸರಿನಲ್ಲಿ ಬ್ರಹ್ಮ ಸಮಾಜದ ಧಾರ್ಮಿಕ ಆಂದೋಲನದ ಒಂದು ಪ್ರಬಲ ಅಲೆಯನ್ನು ದೇಶ ವೀಕ್ಷಿಸಿದರೆ ಇನ್ನೊಂದೆಡೆ ಇದಕ್ಕೆ ಪ್ರತಿಕ್ರಿಯೆಯಾಗಿ ಹಿಂದೂ ಪುನರುತ್ಥಾನವಾದಿ ಆಂದೋಲನದ ಅಲೆ ದೇಶವನ್ನು ಆವರಿಸಿತು. ಹಿಂದೂ ಧರ್ಮದ ಸಂಪ್ರದಾಯ ಹಾಗೂ ಪರಂಪರೆಯ ಬಳುವಳಿಯಾಗಿ ಬಂದ ಜಾತಿವಾದ ಮತ್ತು ಇತರ ಪಿಡುಗುಗಳ ಶಾಪದಿಂದ ಹಿಂದೂ ಸಮಾಜವನ್ನು ಮುಕ್ತಗೊಳಿಸಲು ಹಿಂದೂ ಧಾರ್ಮಿಕ ಸುಧಾರಕರು ಮೂಡಿ ಬಂದರು. ರಾಮಕೃಷ್ಣ ಪರಮಹಂಸರು ರಂಗಪ್ರವೇಶ ಮಾಡಿದ್ದು ಈ ಕಾಲದಲ್ಲಿಯೇ ...ವಿವೇಕಾನಂದರು ಈ ಹಿಂದೂ ಪುನರುತ್ಥಾನವಾದಿ ಚಳುವಳಿಯ ಅದ್ಭುತ ಸೃಷ್ಟಿ. ಅವರು ನವೋದಯ ಆಂದೋಲನವನ್ನು ಬರಿಯ ಧಾರ್ಮಿಕ ಸುಧಾರಣೆಯ ಕಕ್ಷೆಯೊಳಗೆ ಸೀಮಿತಗೊಳಿಸದೆ, ಪೂಜೆ ಹಾಗೂ ಧ್ಯಾನಯೋಗದ ಬದಲಿಗೆ ಕರ್ಮಯೋಗಕ್ಕೆ ಹೆಚ್ಚು ಒತ್ತು ನೀಡಿದರು. ದೇಶದಾದ್ಯಂತ ಒಂದು ಆಳವಾದ ರಾಷ್ಟ್ರವಾದ ಮತ್ತು ದೇಶಭಕ್ತಿಯ ಪ್ರಜ್ಞೆಯನ್ನು ತುಂಬುವಲ್ಲಿ ಸಫಲರಾದರು....ಆದರೆ ಅವರು ದೇಶವನ್ನು ಜಾಗೃತಗೊಳಿಸಿದ ರಾಷ್ಟ್ರವಾದ ಹಾಗೂ ದೇಶಭಕ್ತಿಯ ಪ್ರಜ್ಞೆಯು, ವೇದಾಂತ ತತ್ವಜ್ಞಾನ ಹಾಗೂ ಪ್ರಾಚೀನ ಭಾರತದ ಆಧ್ಯಾತ್ಮಿಕ ಅಭಿಮಾನವನ್ನು ಆಧರಿಸಿತ್ತು. ...ಮುಖ್ಯವಾಗಿ ಈ ಕಾರಣದಿಂದಲೇ ದೇಶದ ಉದ್ದಗಲಕ್ಕೂ ಹರಡಿ ಬೆಳೆದ ಪ್ರಬಲ ಸ್ವಾತಂತ್ರ್ಯ ಚಳುವಳಿಯು ಮೂಲತಃ ಹಿಂದೂ ಧರ್ಮದತ್ತ ವಾಲಿದ ಒಂದು ರಾಷ್ಟ್ರೀಯ ಆಂದೋಲನವಾಗಿ ಉಳಿಯಿತು.

...ಸ್ವಾತಂತ್ರ್ಯದ ಹಾಗೂ ಸ್ವಾತಂತ್ರ್ಯ ಆಂದೋಲನದ ಕುರಿತಾದ ಆಕಾಂಕ್ಷೆ ದೇಶದಲ್ಲಿ ಕ್ರಮೇಣ ತೀವ್ರಗೊಳ್ಳುತ್ತಿದ್ದಂಥ ಈ ಕಾಲದಲ್ಲಿ ಶರತ್‌ಚಂದ್ರರು ಬಂಗಾಳದಲ್ಲಿ ಸಾಹಿತಿಗಳಾಗಿ ಮೂಡಿಬಂದರು. ...ಅಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಮಾನವತಾವಾದಿ ಆಂದೋಲನವನ್ನು ಧಾರ್ಮಿಕ ಬಂಧನದಿಂದ ಮುಕ್ತಗೊಳಿಸುವುದಕ್ಕೆ ಸಂಬಂಧಿಸಿದಂತೆ ವಿದ್ಯಾಸಾಗರರ ಪಾತ್ರ ಹೇಗೆ ನವೋದಯ ಚಳುವಳಿಯಲ್ಲಿನ ಒಂದು ವಿಶಿಷ್ಟ ಹಂತ ಎಂದು ಗುರುತಿಸಲ್ಪಡುತ್ತದೆಯೋ ಅದೇ ರೀತಿ ಸ್ವಾತಂತ್ರ್ಯ ಆಂದೋಲನದಲ್ಲಿ ಶರತ್‌ಚಂದ್ರರು ಹಿಂದೂ ಧರ್ಮದತ್ತ ವಾಲಿದ ರಾಷ್ಟ್ರವಾದ ಹಾಗೂ ಧರ್ಮದೊಂದಿಗೆ ರಾಜಿ ಮಾಡಿಕೊಂಡ ಅವನತಿಗೀಡಾದ ಮಾನವತಾವಾದಗಳಿಂದ ವಿಭಿನ್ನವಾಗಿ ಗುರುತಿಸಲ್ಪಡುತ್ತಾರೆ. ಶರತ್‌ಚಂದ್ರರ ಸಾಹಿತ್ಯಿಕ ಚಿಂತನೆಗಳು ಹಾಗೂ ಅವರ ದೃಷ್ಟಿಕೋನ ಮೂಲತಃ ವಸ್ತುವಾದಿಯಾಗಿತ್ತು. ಎಲ್ಲಿ ಅದನ್ನು ಸತತವಾಗಿ ಉಳಿಸಿಕೊಳ್ಳಲಾಗಲಿಲ್ಲವೋ ಅಲ್ಲಿ ಅವರು ಅಜ್ಞೇಯತಾವಾದಿಯಾಗೇ ಉಳಿದರು. ಆದರೆ ಅವರೆಂದೂ

ಭಾವನಾವಾದಿ ಚಿಂತನೆಯಲ್ಲಿ ತೊಡಗಲಿಲ್ಲ. ಅಷ್ಟೇ ಅಲ್ಲದೆ ತಮ್ಮ ಸಾಹಿತ್ಯಿಕ ಚಿಂತನೆ ಹಾಗೂ ವಿಚಾರಗಳಲ್ಲಿ ಅಲೌಕಿಕವಾದದೊಂದಿಗೆ ಯಾವುದೇ ಸಂಧಾನ ಮಾಡಿಕೊಳ್ಳಲಿಲ್ಲ.

ಅಂದಿನ ಸಾಮಾಜಿಕ ಸನ್ನಿವೇಶದಲ್ಲಿನ ಪ್ರಗತಿಗಾಮಿ–ಪ್ರತಿಗಾಮಿ ಮಾನದಂಡವನ್ನು ಉಪಯೋಗಿಸಿಯೇ ನಾವು, ನಮ್ಮ ಊಳಿಗಮಾನ್ಯ ವಿರೋಧಿ, ಸಾಮ್ರಾಜ್ಯಶಾಹಿ ವಿರೋಧಿ ಸ್ವಾತಂತ್ರ್ಯ ಆಂದೋಲನದ ರಾಜಕೀಯ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ಪ್ರತಿಬಿಂಬಿತವಾದ ಸಂಧಾನಪರ ಅಥವಾ ಸಂಧಾನಾತೀತ ಪಂಥಗಳಲ್ಲಿ ಯಾವುದು ಇಂದು ನಾವು ಸಾಮಾಜಿಕ ಪ್ರಗತಿಗಾಗಿ ನಡೆಸುವ ಆಂದೋಲನದ ವಿಕಸನ ಹಾಗೂ ಬೆಳವಣಿಗೆಗೆ ಸಹಾಯಕಾರಿಯಾಗುತ್ತದೆ, ಪೂರಕವಾಗುತ್ತದೆ ಎಂಬುದನ್ನು ನಿರ್ಧರಿಸಬೇಕಾಗುತ್ತದೆ. ಇವೆರಡು ಪಂಥಗಳಲ್ಲಿ ಯಾವ ಪಂಥದ ಮುಂದುವರಿಕೆಯಾಗಿ ಇಂದಿನ ಹೊಸ ವರ್ಗ ಪ್ರಜ್ಞೆಗೆ, ಎಂದರೆ ಬಂಡವಾಳಶಾಹಿ ವಿರೋಧಿ ಕ್ರಾಂತಿಕಾರಿ ಪ್ರಜ್ಞೆಗೆ ಹಾಗೂ ಕಾರ್ಮಿಕ ವರ್ಗದ ಸಾಂಸ್ಕೃತಿಕ ಆಂದೋಲನಕ್ಕೆ ಜನ್ಮ ನೀಡಬಹುದೆಂಬುದನ್ನು ನಾವು ನಿರ್ಧರಿಸಬೇಕಾಗುತ್ತದೆ. ಈ ದೃಷ್ಟಿಕೋನದಿಂದ ಗಮನಿಸಿದಾಗ, ಶರತ್‌ಚಂದ್ರರ ಸಾಹಿತ್ಯದ ಚಿಂತನೆ ಮತ್ತು ಮೌಲ್ಯಗಳಲ್ಲಿ ಅತ್ಯುತ್ತಮ ಅಭಿವ್ಯಕ್ತಿಯನ್ನು ಪಡೆದುಕೊಂಡಂತಹ ಅತ್ಯಂತ ಸಮರಶೀಲ, ಯೌವನಭರಿತ, ಧರ್ಮನಿರಪೇಕ್ಷ ಹಾಗೂ ರಾಜಿರಹಿತ ಮಾನವತಾವಾದದ ಮುಂದುವರಿಕೆಯಾಗಿ ಮಾತ್ರ ಇಂದು ನಮ್ಮ ದೇಶದ ಕಾರ್ಮಿಕವರ್ಗದ ಸಂಸ್ಕೃತಿಯು ವಿಕಸನ ಹೊಂದಿ ಬೆಳೆಯಬಲ್ಲದು ಎಂಬುದು ಸ್ಪಷ್ಟವಾಗುತ್ತದೆ. ಇವೆರಡರ ನಡುವೆ ದ್ವಂದ್ವ ಉದ್ಭವಿಸುವುದು ಸಹ ಅನಿವಾರ್ಯವಾದರೂ ಶರತ್‌ಚಂದ್ರರ ಚಿಂತನೆ ಮತ್ತು ಮೌಲ್ಯ ಪ್ರಜ್ಞೆಗಳ ಭದ್ರ ಬುನಾದಿಯ ಮೇಲೆಯೇ ಇಂದು ನಮ್ಮ ದೇಶದ ಕಾರ್ಮಿಕವರ್ಗದ ಸಾಂಸ್ಕೃತಿಕ ಆಂದೋಲನ ಬೆಳೆಯುತ್ತದೆ ಎಂಬುದು ನಿಜ.

...ನಮ್ಮ ಹಳೆಯ ಸಮಾಜದ ರಕ್ಷಕರಿಂದ ಅತ್ಯಂತ ವಿಷಮ ದಾಳಿಗೆ ಶರತ್‌ಚಂದ್ರರು ತುತ್ತಾದರು. ಸಂಪ್ರದಾಯನಿಷ್ಠ ಹಿಂದೂ ಸಮಾಜವು ಶರತ್‌ಚಂದ್ರರ ಚಿಂತನೆಗಳಿಗೆ ಕಟ್ಟಾವಿರೋಧಿಯಾಗಿತ್ತು. ಬ್ರಹ್ಮಸಮಾಜಿಗಳು ಹಿಂದೂ ಸಮಾಜದ ಅಂಧಶ್ರದ್ಧೆ, ಮೂಢನಂಬಿಕೆ, ಸಂಕುಚಿತ ಮನೋಭಾವ ಮತ್ತು ಪೂರ್ವಗ್ರಹಗಳ ಬಗ್ಗೆ ತುಂಬಾ ಕಿಡಿಕಾರಿದರೂ ಸಂಪ್ರದಾಯಶರಣ ಹಿಂದೂ ಸಮಾಜ ಅವರನ್ನು ಉಪೇಕ್ಷಿಸಿತು. ಬ್ರಹ್ಮಸಮಾಜಕ್ಕೆ ಸೇರಿದ ಬರಹಗಾರರ ವಿರುದ್ಧ ಅಂಥ ಗುಲ್ಲೆಬ್ಬಿಸಲಿಲ್ಲ. ಏಕೆಂದರೆ ಈ ಸಾಹಿತಿಗಳು ಸಾಮಾಜಿಕ ಸಮಸ್ಯೆಗಳ ಮೇಲ್‌ಪದರವನ್ನೂ ಸಹ ಸ್ಪರ್ಶಿಸಲಾರರೆಂಬುದನ್ನು ಸಂಪ್ರದಾಯಶರಣ ಹಿಂದೂ ಸಮಾಜ ಅರಿತಿತ್ತು. ಜನತೆಯ ಮನೋಭಾವ ಹಾಗೂ ದೃಷ್ಟಿಕೋನದಲ್ಲಿ ಪರಿವರ್ತನೆ ತರುವ ದೃಷ್ಟಿಯಿಂದ ಪ್ರಾಚೀನ ಹಿಂದೂ ಸಮಾಜದ ಹಳೆಯ ಆಚಾರ, ಪೂರ್ವಗ್ರಹ ಹಾಗೂ ಮೌಲ್ಯ ಪ್ರಜ್ಞೆಗಳ ವಿರುದ್ಧ ಕಾರ್ಯಪ್ರವೃತ್ತವಾಗಿದ್ದೂ ಕೂಡ, ಆ ಸಮಾಜದೊಂದಿಗೆ ಸಾದ್ಯಂತವಾಗಿ ಬಹಳ ನಿಕಟವಾದ ಆಪ್ತತೆಯನ್ನು ಉಳಿಸಿಕೊಂಡು ಬಂದಿರುವ ಚಿಂತನೆ ಹಾಗೂ ಸಾಹಿತ್ಯ ಕೇವಲ ಶರತ್‌ಚಂದ್ರರದ್ದಾಗಿತ್ತು.

**...**ಆದರೆ ಈ ವಿಚಿತ್ರವನ್ನು ನೋಡಿ! ಬಂಗಾಲಿ ಸಾಹಿತ್ಯದ ವಿಮರ್ಶಕರೊಬ್ಬರು ಶರತ್‌ಚಂದ್ರರನ್ನು ಅಡುಗೆಮನೆ ಸಾಹಿತಿ ಎಂದು ಕರೆಯಲು ಹಿಂಜರಿಯಲಿಲ್ಲ! ಅಷ್ಟೇ ಅಲ್ಲ ಈ ದಿನಗಳಲ್ಲಿ ನಮ್ಮ ವಿದ್ಯಾರ್ಥಿಗಳು ಶರತ್‌ಚಂದ್ರರ ಬಗ್ಗೆ ಈ ರೀತಿಯ ವಿಮರ್ಶೆಗಳನ್ನು ಓದುತ್ತಾರೆ. ಸಹಜವಾಗಿಯೇ ಇವರು ಒಣ ಪಂಡಿತರಾಗದೆ ಇನ್ನೇನಾಗಲು ಸಾಧ್ಯ! ಇಂತಹ ವಿಮರ್ಶೆಯ ಪ್ರಕಾರ ಶರತ್‌ಚಂದ್ರರ ಸಾಹಿತ್ಯದಲ್ಲಿ ಮೂಲ ಪರಿಕಲ್ಪನೆಗಳಾಗಲಿ, ವಿವೇಚನಾಶೀಲ ಜೀವನದರ್ಶನವಾಗಲಿ ಇಲ್ಲ!

ಶರತ್‌ಚಂದ್ರರು ತಮ್ಮ ಕಥೆ ಕಾದಂಬರಿಗಳಲ್ಲಿ ಜನಸಾಮಾನ್ಯರಿಗೆ ಅರ್ಥವಾಗದಂಥ ಕ್ಲಿಷ್ಟ ಪದಪುಂಜಗಳನ್ನು ಎಂದೂ ಉಪಯೋಗಿಸಲಿಲ್ಲ ಎಂಬುದೇನೊ ಸತ್ಯವಾದ ವಿಷಯವೇ. ಆದರೆ ಅವರು ಯಾವಾಗಲೂ ಉನ್ನತ ವಿಚಾರಗಳ ಮತ್ತು ಪರಿಕಲ್ಪನೆಗಳ ತಿರುಳನ್ನು ಓದುಗರ ಮನಸಿನಲ್ಲಿ ಮೂಡಿಸಲೆತ್ನಿಸಿದರು. ಅನುಕಂಪ, ನೋವು ಮತ್ತು ಕ್ಷೋಭೆಯನ್ನು ಉಂಟುಮಾಡುವಂತಹ ಉದಾತ್ತವಾದ ಸೌಂದರ್ಯಪ್ರಜ್ಞೆಯುಳ್ಳ ರಸಪೂರ್ಣ ಕಲಾಸೃಷ್ಟಿಯ ಮೂಲಕ ಅಂಥ ತಿರುಳನ್ನು ಜನಮನದಲ್ಲಿ ತುಂಬಲು ಯತ್ನಿಸಿದರು. ಹೀಗಾಗಿ ಅದನ್ನು ಗ್ರಹಿಸಲು ಯಾರಿಗೂ ಬೌದ್ಧಿಕ ಮಾರ್ಗ ಅನಿವಾರ್ಯವಾಗಲಿಲ್ಲ. ಬುದ್ಧಿಶಕ್ತಿಯಿಂದ ಗ್ರಹಿಸಬಲ್ಲವರಿಗೆ ವಿಜ್ಞಾನ ಹಾಗೂ ಸಮಗ್ರ ಜ್ಞಾನದ ಅನೇಕ ಸೈದ್ಧಾಂತಿಕ ಗ್ರಂಥಗಳಿವೆ. ಸಾಹಿತ್ಯದ ಉಪಯುಕ್ತತೆ ಇರುವುದಾದರೂ ಎಲ್ಲಿ? ಸೈದ್ಧಾಂತಿಕ ವಿಶ್ಲೇಷಣೆಗಳ ಮೂಲಕ ಕಂಡುಕೊಂಡ ಸತ್ಯ ಹಾಗೂ ಉನ್ನತ ಚಿಂತನೆಗಳನ್ನು ಓದುಗರಿಗೆ ಮನವರಿಕೆ ಮಾಡಿಸಲೋಸುಗ ಉದಾತ್ತವಾದ ಕಲಾತ್ಮಕ ನೈಪುಣ್ಯತೆಯಿಂದ ಉತ್ಕೃಷ್ಟ ರೀತಿಯಲ್ಲಿ ಕಥೆ ಹೇಳುತ್ತಾ, ರಸಸೃಷ್ಟಿ ಮಾಡುತ್ತಾ ಅವರ ಮನದಾಳದಲ್ಲಿ ಅನೇಕಾನೇಕ  ಸೂಕ್ಷ್ಮ ಸಂವೇದನೆಗಳು ಹಾಗೂ ಸುಕೋಮಲ ಭಾವನೆಗಳ ಒಂದು ಛಾಪನ್ನು ಮೂಡಿಸುವುದರಲ್ಲೇ ಸಾಹಿತ್ಯದ ಅವಶ್ಯಕತೆ ಸ್ಪಷ್ಟವಾಗಿ ಅಡಕವಾಗಿದೆ. ಶೈಕ್ಷಣಿಕ ಸಿದ್ಧತೆ ಇಲ್ಲದೆ, ವಿಮರ್ಶಾತ್ಮಕ ಗ್ರಹಣಶಕ್ತಿಯ ಕೊರತೆಯಿಂದಾಗಿ, ಹೊಸ ಪರಿಕಲ್ಪನೆಗಳನ್ನು ವಿಶ್ಲೇಷಣಾ ಬೌದ್ಧಿಕ ಮಾರ್ಗದ ಮೂಲಕ ಗ್ರಹಿಸಲು ಅಸಮರ್ಥರಾಗಿರುವವರ ಮನದಲ್ಲೂ ಸಹ ಸೌಂದರ್ಯಾತ್ಮಕ ಸೃಷ್ಟಿಯ ಮುಖಾಂತರ ವ್ಯಥೆ, ಅನುಕಂಪವನ್ನು ಸ್ಫುರಿಸುವ ಮೂಲಕ ಉದಾತ್ತ ವಿಚಾರಗಳನ್ನು ಭಾಗಶಃವಾದರೂ ಸಹ ಮೂಡಿಸುವುದರಲ್ಲೇ ಸಾಹಿತ್ಯದ ಸಾರ್ಥಕತೆ ಅಡಗಿದೆ.

ಉದಾಹರಣೆಗೆ, ಮಾನವತಾವಾದವು ಹಿಂದೊಮ್ಮೆ ನೈತಿಕ ಮಾತೃತ್ವದ ಪರಿಕಲ್ಪನೆಯನ್ನು ಪ್ರತಿಪಾದಿಸಿತು. ಉದಾತ್ತ ಪರಿಕಲ್ಪನೆಗಳು ಬೇರೆಬೇರೆ ಪುಸ್ತಕಗಳಲ್ಲಿ ಸಿದ್ಧಾಂತಗಳ ರೂಪದಲ್ಲಿ ದೊರೆಯುತ್ತವೆ ಎಂಬುದನ್ನು ಶರತ್‌ಚಂದ್ರರು ಅರಿತಿದ್ದರು. ಆದರೆ ಬಹಳಷ್ಟು ಜನ ಇದರ ಬಗ್ಗೆ ಅಭ್ಯಾಸ ಮಾಡಿದ್ದರೂ ಅದರ ಸಾರವನ್ನು ಗ್ರಹಿಸುವಲ್ಲಿ ವಿಫಲರಾಗುತ್ತಾರೆ. ಆದರೆ ಶರತ್‌ಚಂದ್ರರು ಬದುಕಿನಲ್ಲಿ ಉದ್ಭವಿಸುವ ಸಂಘರ್ಷಗಳು, ದ್ವಂದ್ವಗಳು, ಮಾನವ ಸಂಬಂಧಗಳಲ್ಲಿ ಬೆಳೆಯುವ ಸಂಕೀರ್ಣತೆಗಳು ಹಾಗೂ ಮಾನವನ ಮನಸ್ಸಿನ ಭಾವನೆಗಳಲ್ಲಿ, ಅನುಭೂತಿಗಳಲ್ಲಿ ಉಂಟಾಗುವ ಭಾವೋದ್ವೇಗಗಳು, ಏರಿಳಿತಗಳು, ಇವೆಲ್ಲವುಗಳ ಕುರಿತು ಅನುಕಂಪ,

* **ಬಿಂದೂರ್ ಛೇಲೆ (ಕನ್ನಡದಲ್ಲಿ 'ಬಿಂದುವಿನ ಮಗ') ಎಂಬ ಹೆಸರಾಂತ ಕಾದಂಬರಿಯ ಒಂದು ಪಾತ್ರ.**

ವೇದನೆಗಳನ್ನು ಬಡಿದೆಬ್ಬಿಸಿ ತನ್ಮೂಲಕ ಸೌಂದರ್ಯಾಭಿರುಚಿಯ ಸೂಕ್ಷ್ಮ ಭಾವನೆಗಳನ್ನು ಜನಮನದಲ್ಲಿ ಸಾಕ್ಷಾತ್ಕರಿಸುತ್ತಾ ಆ ಯುಗದ ಮಹೋನ್ನತ ವಿಚಾರಗಳನ್ನು ಅಚ್ಚೊತ್ತಲು ಶ್ರಮಿಸಿದರು. ಅಧ್ಯಯನ ಹಾಗೂ ಬುದ್ಧಿಮತ್ತೆಯಿಂದ ಗ್ರಹಿಸಲು ಸಾಧ್ಯವಾಗುವವರಿಗೆ ಯಾವುದೇ ತೊಂದರೆಯಿಲ್ಲ. ಆದರೆ ಅದಾಗದವರು – ಅಂದರೆ ವಿಶಾಲ ಜನಸ್ತೋಮವು – ರಸ ಮಾಧ್ಯಮದ ಮೂಲಕ ಮಾತ್ರ ಯಾವುದೇ ಉದಾತ್ತ ಚಿಂತನೆಯನ್ನು ಗ್ರಹಿಸಬಲ್ಲದು. ಮನುಷ್ಯನು ಒಂದು ಚಿಂತನೆಯ ಉದಾತ್ತ ಸಾರವನ್ನು ಒಮ್ಮೆ ನೈಜವಾಗಿ ಗ್ರಹಿಸಿದರೆ ಆ ಸಿದ್ಧಾಂತದ ಪರಿಕಲ್ಪನೆಯನ್ನು ಪಡೆಯಲಾಗದಿದ್ದರೂ ಆತ ಬದಲಾಗುತ್ತಾನೆ. ನೈತಿಕ ಮಾತೃತ್ವದ ಸಿದ್ಧಾಂತ ಹಾಗೂ ಅದರ ಪರಿಕಲ್ಪನೆಗಳ ಬಗ್ಗೆ ಕಿಂಚಿತ್ತಾದರೂ ತಿಳಿಯದ ಮಹಿಳೆಯರೂ ಸಹ ನೈತಿಕ ಮಾತೃತ್ವವು ನೈಜವಾಗಿ ಪ್ರತಿಬಿಂಬಿಸುವ ಗುಣಚಾರಿತ್ರ್ಯಗಳತ್ತ ಹೆಚ್ಚು ಹೆಚ್ಚಾಗಿ ಆಕರ್ಷಿತರಾಗುತ್ತಾರೆ. ಕಥೆಯ ಗತಿಯಲ್ಲಿ ನೈತಿಕ ಮಾತೃತ್ವದ ಮೌಲ್ಯಗಳಿಂದ ಕೂಡಿದ ಸಂಪದ್ಭರಿತವಾದ ಪಾತ್ರಗಳು ಬಿಚ್ಚಿಕೊಳ್ಳುತ್ತಿದ್ದಂತೆ – ಬಿಂದುವಾಸಿನಿಯ* ಪಾತ್ರ ಖಂಡಿತವಾಗಿ ಅವರನ್ನು ಆಕರ್ಷಿಸುತ್ತದೆ; ಹಾಗೆಯೇ ಯಾದವನ ಪಾತ್ರವೂ ಆಕರ್ಷಿಸುತ್ತದೆ ಮತ್ತು ಮಾಧವನನ್ನೂ ಸಹ ಓದುಗರು ಅರ್ಥಮಾಡಿಕೊಳ್ಳತೊಡಗುತ್ತಾರೆ. ಹೀಗೆ ಸಹಾನುಭೂತಿಯನ್ನು ಉಂಟು ಮಾಡಿ ಮತ್ತು ನಾವು ಏನನ್ನು ಬದುಕಿನಲ್ಲಿ ಕಳೆದುಕೊಂಡಿದ್ದೇವೆಂಬ ಪ್ರಜ್ಞೆಯನ್ನು ಜಾಗೃತಗೊಳಿಸಿ ಶರತ್‌ಚಂದ್ರರು ಜೀವನದ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಲು ಯತ್ನಿಸುತ್ತಾ ತನ್ಮೂಲಕ ಮಹಾನ್ ಮೌಲ್ಯಗಳ ಬಗ್ಗೆ ಒಂದು ಆಳವಾದ ಉದಾತ್ತವಾದ ಆಕಾಂಕ್ಷೆಯನ್ನು ಮೂಡಿಸಿದರು. ಅವರು ತಮ್ಮ ಕೃತಿಗಳಲ್ಲಿ ಪುಟಗಟ್ಟಲೆ ವ್ಯಾಖ್ಯಾನವನ್ನು ಹಾಗೂ ವಿವರಣೆಗಳನ್ನು ತುಂಬಿಸಲು ಇಚ್ಛಿಸಲಿಲ್ಲ.

...ಉದಾಹರಣೆಗೆ, ನೈತಿಕತೆ ಹಾಗೂ ನೈತಿಕ ಮಾತೃತ್ವದ ಬಗ್ಗೆ ಕೇವಲ ಭಾಷಣಗಳನ್ನು ಕೇಳಿದ ಸ್ತ್ರೀಯರು, 'ಹೇಮಾಂಗಿನಿ' ಕಾದಂಬರಿಯ ಹೇಮಾಂಗಿನಿ, 'ಬಿಂದುವಿನ ಮಗ' ಕಥೆಯ ಬಿಂದುವಾಸಿನಿ, 'ರಾಮನ ಸುಬುದ್ಧಿ' ಕಥೆಯ ನಾರಾಯಣಿ – ಈ ಪಾತ್ರಗಳು ಉದಾತ್ತತೆ ಹಾಗೂ ಸದ್ಗುಣಗಳ ಮೂಲಕ ಸುಲಭವಾಗಿ ಸಿದ್ಧಿಸಿಕೊಂಡ ಈ ನೈತಿಕ ಮಾತೃತ್ವದ ಗುಣವನ್ನು ಪಡೆದುಕೊಳ್ಳಲಾರರು. ನಾರಾಯಣಿಯನ್ನು ಅವಳ ಗಂಡನಾಗಲಿ, ತಾಯಿಯಾಗಲಿ – ಯಾವುದೇ ಕ್ಷುಲ್ಲಕ ಸ್ವಾರ್ಥವಾಗಲಿ ಆಕೆ ಆಯ್ದುಕೊಂಡ ದಾರಿಯಿಂದ ವಿಚಲಿತಳನ್ನಾಗಿ ಮಾಡಲಾಗಲಿಲ್ಲ. ಶರತ್‌ಚಂದ್ರರ ಕೃತಿಗಳಲ್ಲಿ ಕಂಡುಬರುವ ಈ ಸ್ತ್ರೀ ಪಾತ್ರಗಳು ತಮ್ಮೊಂದಿಗೆ ಯಾವುದೇ ರಕ್ತ ಸಂಬಂಧವಿಲ್ಲದಿದ್ದರೂ ತಮ್ಮ ಮಕ್ಕಳೆಂದೇ ಭಾವಿಸಿದ ಇತರ ಮಕ್ಕಳ ಕುರಿತು ತಾವು ಅಂದುಕೊಂಡ ಎಲ್ಲ ಬಾಧ್ಯತೆಗಳನ್ನು ನಿಭಾಯಿಸಿದವು. ತನ್ಮೂಲಕ ಆ ಮಹಿಳೆಯರು ನಿರ್ವೈಯಕ್ತಿಕ ಮಾತೃತ್ವದ ನೈಜ ಸ್ವಾದವನ್ನು ಗಳಿಸಿಕೊಂಡರು. ಈ ಕಥೆಗಳ ಮೂಲಕ ಶರತ್‌ಚಂದ್ರರು ಒಬ್ಬ ಸ್ತ್ರೀ ತನ್ನ ಜೀವನದಲ್ಲಿ ನಿರ್ವೈಯಕ್ತಿಕ ಮಾತೃತ್ವದ ನೈಜ ಸ್ವಾದವನ್ನು ಅನುಭವಿಸಿದಾಗ ಆಕೆಯ ತಾಯ್ತನ ಅಭಿವ್ಯಕ್ತವಾಗುವ ನಿರ್ದಿಷ್ಟ ಸ್ವರೂಪ, ಗಾಂಭೀರ್ಯ ಹಾಗೂ ಸೌಂದರ್ಯ ಹೇಗಿರುತ್ತದೆ ಎಂಬುದನ್ನು ಎತ್ತಿಹಿಡಿಯಲು ಪ್ರಯತ್ನಿಸಿದರು. ಅಂಥ ಮಹಿಳೆ ತನ್ನ ಸ್ವಂತ ಮಗು ಹಾಗೂ ಇನ್ನೊಬ್ಬರ ಮಗುವಿನ ನಡುವೆ ಭೇದವೆಣಿಸುತ್ತಾಳೆಯೇ? ಈ ಅಂಶಗಳನ್ನು ಶರತ್‌ಚಂದ್ರರು ವಿವಿಧ ಕಥೆಗಳ ಮೂಲಕ ಪ್ರತಿಪಾದಿಸಲು

ಯತ್ನಿಸುತ್ತಾರೆ. ಇವು ಕೇವಲ ಕಥೆಗಳಲ್ಲ! ಈ ಕಥೆಗಳಲ್ಲಿನ ನಾರಿತ್ವದ ಘನತೆಯ ಚಿತ್ರಣ ಎಲ್ಲರನ್ನೂ ಪರವಶರನ್ನಾಗಿಸುತ್ತದೆ. 'ಹೇಮಾಂಗಿನಿ'ಯನ್ನು ಓದಿದ ಯಾವುದೇ ಸ್ತ್ರೀ, ಹೇಮಾಂಗಿನಿಯ ಹಿರಿಯ ವಾರಗಿತ್ತಿಯಾಗಲು ಬಯಸಲಾರಳು ಮತ್ತು ತಾನು ಹೇಮಾಂಗಿನಿ ಅಥವಾ ನಾರಾಯಣಿ ಆಗಲು ಸಾಧ್ಯವೋ, ಇಲ್ಲವೋ, ಆದರೆ ಖಂಡಿತವಾಗಿ ಈ ಪಾತ್ರಗಳ ಚೆಲುವನ್ನು ತನ್ನೊಳಗೆ ಆಹ್ವಾನಿಸಿಕೊಳ್ಳುವ ತೀವ್ರ ಆಕಾಂಕ್ಷೆಯನ್ನು ಹೊಂದುತ್ತಾಳೆ. ಈ ಆಕಾಂಕ್ಷೆಯ ಮಹತ್ವವೇನು? ಸಾಮಾನ್ಯ ಸ್ತ್ರೀಯರಲ್ಲಿ ನಾರಾಯಣಿ ಅಥವಾ ಹೇಮಾಂಗಿನಿಯ ನೈತಿಕ ಮಟ್ಟವನ್ನು ಪಡೆಯಬೇಕೆಂಬ ತೀವ್ರ ಕಾತರವನ್ನು ಉಂಟುಮಾಡಲಾದರೆ ಮತ್ತು ಅವರು ನಿಜವಾಗಿಯೂ ಈ ಪಾತ್ರಗಳನ್ನು ತಾವು ಅನುಸರಿಸಬೇಕಾದ ಆದರ್ಶಗಳೆಂದು ಪರಿಗಣಿಸಲಾರಂಭಿಸಿದರೆ, ಪ್ರತಿಯೊಂದು ಕುಟುಂಬದಲ್ಲೂ ಮಹಿಳಾ ಜಾಗೃತಿಯ ನೈಜ ಅಲೆ ಈಗಾಗಲೇ ಎದ್ದಿದೆ ಎಂದರ್ಥ. ಆದರೆ ವಿಚಿತ್ರವೆಂದರೆ ಟೀಕಾಕಾರರ ಗಮನಕ್ಕೆ ಈ ಅಂಶಗಳು ಬಂದೇ ಇಲ್ಲ. ಅವರು ಶರತ್‌ಚಂದ್ರರ ಸಾಹಿತ್ಯದಲ್ಲಿ ಯಾವುದೇ ಸಿದ್ಧಾಂತವಿಲ್ಲ ಎಂದು ಟೀಕಿಸುತ್ತಾರೆ. ಆದರೆ ಈ ಸಿದ್ಧಾಂತಗಳ ನೈಜ ಸಾರವನ್ನು ಶರತ್‌ಚಂದ್ರರು ಅತ್ಯುತ್ತಮ ಕಲಾಭಿವ್ಯಕ್ತಿಯಿಂದ ನಮ್ಮ ಕುಟುಂಬ ಜೀವನದ ಅಂತರಾಳದ ಒಳಗೆ ಕೊಂಡೊಯ್ದಾಗಲೂ ಈ ಟೀಕಾಕಾರರಿಗೆ ಅದು ಸಿದ್ಧಾಂತರಹಿತವೆಂದು ಅನಿಸುವುದು ಹೇಗೋ? ಇದೆಂಥ ವಿಚಿತ್ರವಾದ ಪೊಳ್ಳಾದ ಬೌದ್ಧಿಕತೆ!

...ಒಬ್ಬ ಸಾಹಿತಿಯ ಸಾಹಿತ್ಯಿಕ ಚಿಂತನೆ ಹಾಗೂ ಆತನ ಸಾಹಿತ್ಯಿಕ ಕಲೆ – ಶೈಲಿ ಇವೆರಡೂ ಬೇರೆ ಬೇರೆ ಅಂಶಗಳು. ಸಾಹಿತಿಯೊಬ್ಬರ ಮೌಲ್ಯಮಾಪನ ಮಾಡುವಾಗ ಈ ಎರಡು ಅಂಶಗಳನ್ನು ಬೆರೆಸಿ ಗೊಂದಲ ಮಾಡಿಕೊಳ್ಳಬಾರದು. ಮೊದಲನೆಯದು ಚಿಂತನೆಗೆ ಸಂಬಂಧಿಸಿದ್ದರೆ, ಎರಡನೆಯದು ಅದರ ಅಭಿವ್ಯಕ್ತಿಗೆ ಸಂಬಂಧಿಸಿರುವಂತಹುದು. ಅಂದರೆ ಸೌಂದರ್ಯಾಭಿರುಚಿಯಿಂದ ಹಾಗೂ ಕಲಾತ್ಮಕವಾಗಿ ತೃಪ್ತಿಕೊಡುವಂತೆ ಎಂತಹ ಉನ್ನತ ಮಟ್ಟದ ಅಭಿರುಚಿ, ಮೌಲ್ಯಗಳನ್ನು ಅವರು ಸೃಷ್ಟಿಸಬಲ್ಲರು ಹಾಗೂ ಎಂತಹ ಸೂಕ್ಷ್ಮ ರಸವನ್ನು ನೀಡಬಲ್ಲರು ಎಂಬುದನ್ನು ಅದು ತೋರಿಸುತ್ತದೆ. ಈ ದೃಷ್ಟಿಕೋನದಿಂದ ನೋಡಿದಾಗ ಶರತ್‌ಚಂದ್ರರ ರಸಸೃಷ್ಟಿಯ ಪ್ರಕ್ರಿಯೆ ಎಷ್ಟು ಉತ್ತಮ, ಎಷ್ಟು ಕಲಾತ್ಮಕ, ಎಷ್ಟು ಕೋಮಲ ಹಾಗೂ ಸೂಕ್ಷ್ಮವಾಗಿದೆಯೆಂದರೆ ಓದುಗರು ಅದನ್ನು ಸವಿಯುತ್ತಾ ತಮಗರಿವಿಲ್ಲದಂತೆಯೇ ಕೆಲಮಟ್ಟಿಗೆ ಬದಲಾಗುತ್ತಾರೆ. ಈ ವಿಷಯದಲ್ಲಿ ಶರತ್‌ಚಂದ್ರರು ಅಂದಿನ ಎಲ್ಲಾ ಸಾಹಿತಿಗಳಲ್ಲಿ ಅಗ್ರಮಾನ್ಯರಾಗಿದ್ದರು. ಆದ್ದರಿಂದ ನಾನು ತಮ್ಮ ಸಮಕಾಲೀನ ಸಾಹಿತಿಗಳಲ್ಲಿ ಅವರು ಸರ್ವಶ್ರೇಷ್ಠರಾಗಿದ್ದರೆಂದು ಯಾವುದೇ ಸಂಕೋಚವಿಲ್ಲದೆ ಹೇಳಬಲ್ಲೆ.

...ಅಮೂರ್ತ ಸಿದ್ಧಾಂತಗಳ ಪಾಂಡಿತ್ಯಪೂರ್ಣ ಚರ್ಚೆಯಲ್ಲಿ ತೊಡಗುವುದು ಸಾಹಿತಿಗೆ ಸೂಕ್ತವಲ್ಲ. ಆತ 'ರಸ'ದ ಸೃಷ್ಟಿಕರ್ತ. ಸಾಹಿತಿಯ ನೈಜ ಮೌಲ್ಯವಿರುವುದು ಇಲ್ಲಿಯೇ. ನನ್ನ ಅಭಿಪ್ರಾಯದಲ್ಲಿ ಸದಾಕಾಲ ಉನ್ನತ ಸಿದ್ಧಾಂತಗಳನ್ನು ಕಥೆ ಕಾದಂಬರಿಗಳಲ್ಲಿ ಹುಡುಕಾಡುವವರು ಹಾಗೂ ಈ ಮಾನದಂಡದಿಂದ ಮಾತ್ರ ಕೃತಿಗಳ ಮೌಲ್ಯವನ್ನು ನಿರ್ಧರಿಸುವವರು ಸಾಹಿತ್ಯ ವಿಮರ್ಶಕರಾಗಲು ಸಂಪೂರ್ಣವಾಗಿ ಅನರ್ಹರು.

ಸಾಹಿತ್ಯದ ಯೋಗ್ಯತೆ ಅಮೂರ್ತ ಸಿದ್ಧಾಂತಗಳ ಒಣಚರ್ಚೆಯಲ್ಲಿಲ್ಲ. ಅದರ ಸಾಮಾಜಿಕ ಉಪಯುಕ್ತತೆ ಇರುವುದು ಬೇರೆ ರೀತಿಯಲ್ಲಿ. ವಿಶ್ವದಲ್ಲಿ ಅಮೂರ್ತ ಸಿದ್ಧಾಂತಗಳ ಕುರಿತು ಚರ್ಚಿಸುವ ವಿದ್ವಾಂಸರ ಕೊರತೆಯೇನೂ ಇಲ್ಲ. ಅದಕ್ಕಾಗಿ ಸಮಾಜದಲ್ಲಿ ಸಾಹಿತಿಗಳಿಗಿಂತ ಮಿಗಿಲಾದ ಜನರಿದ್ದಾರೆ–ತತ್ವಜ್ಞಾನಿಗಳು, ಆರ್ಥಿಕ ತಜ್ಞರು, ರಾಜಕೀಯ ಚಿಂತಕರು. ಆದರೆ ಇವರೆಲ್ಲರೂ ಮಾಡಲಾಗದ್ದನ್ನು ಸಾಹಿತಿ ಮಾಡುತ್ತಾನೆ. ಆದ್ದರಿಂದಲೇ ಇವರೆಲ್ಲರಿಗೂ ಸಹ ಸಾಹಿತಿಗಳು ವಂದನೀಯರು, ಪೂಜನೀಯರು, ಇವರೆಲ್ಲರ ಮೆಚ್ಚುಗೆ, ಗೌರವಕ್ಕೆ ಪಾತ್ರರು. ನಾವು ಅಸಮರ್ಥರಾದೆಡೆ ಅವರು ಪ್ರಭಾವಶಾಲಿಗಳು. ತತ್ವಜ್ಞಾನಿಗಳು ಹಾಗೂ ಚಿಂತಕರು ಯಾವ ಚಿಂತನೆ ಮತ್ತು ವಿಚಾರಗಳ ಛಾಪನ್ನು ಮೂಡಿಸಲಿಚ್ಛಿಸುತ್ತಾರೋ ಅದನ್ನು ಸಾಹಿತಿಗಳು 'ರಸ'ದ ಮೂಲಕ ವಿಭಿನ್ನ ಸ್ವರೂಪಗಳಲ್ಲಿ ಎಂತಹ ಕಲಾತ್ಮಕ ಹಾಗೂ ಸುಲಲಿತ ರೀತಿಯಲ್ಲಿ ಎಷ್ಟು ಸುಂದರವಾಗಿ ಪ್ರತಿಬಿಂಬಿಸುತ್ತಾರೆಂದರೆ ಇದನ್ನು ಒಬ್ಬ ವ್ಯಕ್ತಿ ಬುದ್ಧಿಮತ್ತೆಯ ಅಭಾವದಿಂದ ಗ್ರಹಿಸಲು ಅಸಮರ್ಥನಿದ್ದರೂ, ರಸಸ್ವಾದದ ಮೂಲಕ ಕಲಾತ್ಮಕ ಅಭಿವ್ಯಕ್ತಿಯನ್ನು ಸವಿಯುವ ಮೂಲಕ ಹಾಗೂ ಸಂಭಾಷಣೆಗಳನ್ನು ಮತ್ತೆ ಮತ್ತೆ ಮೆಲುಕು ಹಾಕಿಕೊಳ್ಳುವುದರಿಂದ ಆತನಿಗೆ ಇದು ಒಂದು ರೂಢಿಯಾಗಿ, ಆತನ ಧೋರಣೆಯಲ್ಲಿ ಪರಿವರ್ತನೆ ಉಂಟಾಗುತ್ತದೆ. ಹೀಗೆ ಮನೋಭಾವನೆಯಲ್ಲಿ ಒಂದು ಕ್ರಾಂತಿಕಾರಿ ಬದಲಾವಣೆ ತರುವಲ್ಲಿ ಹಾಗೂ ಸಮಾಜದಲ್ಲಿ ಸಾಂಸ್ಕೃತಿಕ ಕ್ರಾಂತಿಯನ್ನು ಉಂಟುಮಾಡುವಲ್ಲಿ ಸಾಹಿತಿ ಒಂದು ಪ್ರಭಾವಶಾಲಿಯಾದ, ಶಕ್ತಿಶಾಲಿಯಾದ ಅಸ್ತ್ರವಾಗಿರುತ್ತಾನೆ. ಸ್ವಾತಂತ್ರ್ಯ ಹೋರಾಟವಿರಲಿ, ಸಮಾಜವಾದಿ ಕ್ರಾಂತಿಯೇ ಇರಲಿ ಅಥವಾ ಯಾವುದೇ ಸಮಾಜದ ಮೂಲಭೂತ ಪರಿವರ್ತನೆಯ ಕುರಿತಾದ ಹೋರಾಟವೇ ಇರಲಿ, ಇಂಥ ಒಂದು ರಾಜಕೀಯ ಹೋರಾಟಕ್ಕೆ ಅವಶ್ಯವಾಗಿರುವ ಸಾಂಸ್ಕೃತಿಕ ಹಿನ್ನಲೆಯನ್ನು ರೂಪಿಸುವ ಕಾರ್ಯವನ್ನು ಚೊಕ್ಕವಾಗಿ ಮಾಡುವವರೇ ಸಾಹಿತಿಗಳು. ಸಾಹಿತಿಗಳ ಪ್ರಗತಿಪರ ಪಾತ್ರವಿರುವುದೇ ಇಲ್ಲಿ. ಈ ಹಿನ್ನೆಲೆಯಲ್ಲಿ ವಿಶ್ಲೇಷಿಸಿದಾಗ, ಅಂದು ನಡೆಯುತ್ತಿದ್ದ ನವೋದಯ ಹೋರಾಟ; ರಾಷ್ಟ್ರದ ಸ್ವಾತಂತ್ರ್ಯ ಹೋರಾಟ ಹಾಗೂ ಸಾಮಾಜಿಕ ಕ್ರಾಂತಿಯ ಹೋರಾಟ ಇವುಗಳಿಗೆ ಪೂರಕವಾದ ಸಾಹಿತ್ಯವನ್ನು ಸೃಷ್ಟಿಸಬೇಕಾದ ಕಾರ್ಯದಲ್ಲಿ ಅತ್ಯಂತ ಪ್ರಗತಿಪರ ಪಾತ್ರವನ್ನು ನಿರ್ವಹಿಸಿದವರಲ್ಲಿ ಅಗ್ರಗಣ್ಯರು ಶರತ್‌ಚಂದ್ರರು. ಅವರು ತಮ್ಮ ಕೃತಿಗಳ ಮೂಲಕ ತಮ್ಮ ಕಾಲದ ಅತ್ಯಂತ ಮುಂದುವರೆದ ಹಾಗೂ ಸೂಕ್ಷ್ಮವಾದ ಚಿಂತನೆಗಳನ್ನು ಪ್ರತಿಬಿಂಬಿಸಿದರು. ಆದರೆ ಅವರು ಅದನ್ನು 'ರಸ' ಮಾಧ್ಯಮದ ಮೂಲಕ ತಮ್ಮ ಕಥಾ ನಿರೂಪಣೆಯ ಮೂಲಕ ನಿರ್ವಹಿಸಿದರು. ತಮ್ಮ ವಿಚಾರಗಳನ್ನು ಪ್ರಚುರಪಡಿಸಲು ಅವರು ಎಂದೂ ಸೈದ್ಧಾಂತಿಕ ಚರ್ಚೆ ನಡೆಸಲಿಲ್ಲ. ಸಾಹಿತಿಗಳಾಗಿ ಅವರ ಮಹಾನ್ ಯಶಸ್ಸು ಅಡಗಿರುವುದು ಇಲ್ಲಿಯೇ.

ಪ್ರಾಯಶಃ ನಾನೂ ಸಹ ಸಿದ್ಧಾಂತಗಳ ಬಗ್ಗೆ ಚರ್ಚಿಸಬಲ್ಲೆ, ಕೇಳುವಾತ ಮೂಕವಿಸ್ಮಿತನಾಗುವಂತೆ ವಿಜ್ಞಾನ ಹಾಗೂ ಸಮಗ್ರ ವಿಜ್ಞಾನದ ವಿಭಿನ್ನ ಶಾಖೆಗಳ ಅನೇಕ ಪ್ರಶ್ನೆಗಳ ಬಗ್ಗೆಯೂ ಚರ್ಚಿಸಬಲ್ಲೆ. ಆದರೆ ನಾನೂ ಸಹ ಸಾಹಿತಿಗಳಿಗೆ ಆಭಾರಿಯಾಗಿದ್ದೇನೆ; ಭಿಕ್ಷಾ ಪಾತ್ರೆಯೊಂದಿಗೆ ಅವರ ಬಳಿ ಹೋಗುತ್ತೇನೆ. ನಾನೊಂದು ಮಾತು ಹೇಳಿದರೆ ಕೆಲವರಿಗೆ ರುಚಿಸದೆ ಹೋಗಬಹುದು, ಆದರೆ ನಿಜವಾಗಿಯೂ

ಹೇಳಬೇಕೆಂದರೆ ನಾನು ಉನ್ನತ ಚಿಂತನೆಗಾಗಿ ರವೀಂದ್ರನಾಥ್ ಟ್ಯಾಗೋರರ ಬಳಿ ಅಥವಾ ಗಯಟೆಯ ಬಳಿ ಹೋಗಬೇಕಿಲ್ಲ. ನಾವು ಅವರ ಬಳಿ ಹೋಗಬೇಕಾಗಿದ್ದು ಇನ್ನಾವುದೋ ಅಂಶಕ್ಕಾಗಿ. ಲೆನಿನ್‌ರಂಥವರೂ ಸಹ ಸಾಹಿತಿಗಳ ಬಳಿಗೆ ಹೋಗಿ ಸಹಾಯ ಕೇಳಬೇಕಾಗಿ ಬಂದಿರುವುದಿದೆ. ಹಾಗೆಯೇ ನಾನೂ ಸಹ. ಎಲ್ಲಾ ಕಾಲದ ಎಲ್ಲಾ ದೇಶಗಳ ಚಿಂತಕರ ಪರಿಸ್ಥಿತಿಯೂ ಇದೇ ಆಗಿದೆ. ಎಲ್ಲರಿಗೂ ಒಂದು ಅಭಾವ ಕಾಡುತ್ತದೆ. ಅದನ್ನು ಅವರು ಸಾಹಿತ್ಯದಿಂದ ತುಂಬಿಕೊಳ್ಳಬೇಕು. ಜೊತೆಗೆ ಯಾವ ಚಿಂತನೆ, ಆದರ್ಶ, ವಿಚಾರಗಳನ್ನು ನಾವು ಸಮಾಜದ ಅಂತರಾಳಕ್ಕೆ ತೆಗೆದುಕೊಂಡು ಹೋಗಬಯಸಿದರೂ ಅದು ಸಾಧ್ಯವಾಗದೋ, ಅದನ್ನು ಸಾಹಿತಿಗಳು ಕಲಾತ್ಮಕವಾಗಿ ಕೊಂಡೊಯ್ದು ಸಮಾಜದ ಪ್ರಜ್ಞೆಯಲ್ಲಿ ಅಚ್ಚೊತ್ತಬಲ್ಲರು. ಇಲ್ಲಿಯೇ ಸಾಹಿತಿಗಳು ನಮಗಿಂತ ಹಿರಿಮೆಯುಳ್ಳವರಾಗುವುದು. ಆದ್ದರಿಂದಲೇ ನಾವು ಅವರನ್ನು ಗೌರವಿಸುತ್ತೇವೆ, ಮೆಚ್ಚಿಕೊಳ್ಳುತ್ತೇವೆ. ಹೀಗಾಗಿ ಇತಿಹಾಸದುದ್ದಕ್ಕೂ ಪ್ರಮುಖ ಸಾಹಿತಿಗಳು ಆ ಕಾಲದ ಮಹಾನ್ ಚಿಂತಕರನ್ನು ಗೌರವಿಸುವುದನ್ನು ನೋಡುವಂತೆಯೇ, ಮಹಾನ್ ಚಿಂತಕರು ಉತ್ಕೃಷ್ಟ ಸಾಹಿತಿಗಳ ಬೆಲೆಯನ್ನು ಅರಿತು ಅವರನ್ನು ಗೌರವಿಸುವುದನ್ನೂ ಕಾಣುತ್ತೇವೆ. ಅರೆ ತಿಳುವಳಿಕೆಯುಳ್ಳ ಲೇಖಕರು ಮಾತ್ರ, ಒಣಜಂಬದಿಂದ, ಅಹಂಕಾರದಿಂದ ಮಹಾನ್ ಚಿಂತಕರ ಮಹಾನತೆಗೆ ಮಾನ್ಯತೆ ನೀಡಲು ನಿರಾಕರಿಸುತ್ತಾರೆ. ಆದರೆ ಯಾವುದೇ ದೇಶದಲ್ಲೂ ನಿಜವಾದ ಮಹಾನ್ ಸಾಹಿತಿಗಳು ತಮ್ಮ ಕಾಲದ ಮಹಾನ್ ಚಿಂತಕರನ್ನು ಎಂದೂ ಅಗೌರವದಿಂದ ಕಂಡಿಲ್ಲ. ಏಕೆಂದರೆ ಅವರು ಒಬ್ಬರು ಇನ್ನೊಬ್ಬರ ನೈಜ ಮೌಲ್ಯವನ್ನು ಗುರುತಿಸುತ್ತಾರೆ ಹಾಗೂ ಪ್ರತಿಯೊಬ್ಬರೂ ತಮ್ಮ ತಮ್ಮ ಕ್ಷೇತ್ರದಲ್ಲಿ ಹೊಂದಿರುವ ಪ್ರಾಮುಖ್ಯತೆ ಹಾಗೂ ಸಾಮರ್ಥ್ಯಕ್ಕೆ ಮನ್ನಣೆ ನೀಡುತ್ತಾರೆ.

ಒಟ್ಟಿನಲ್ಲಿ ಶರತ್‌ಚಂದ್ರರ ಸಾಹಿತ್ಯದಲ್ಲಿ ಅಮೂರ್ತ ಸಿದ್ಧಾಂತವನ್ನು ಹುಡುಕಲೆತ್ನಿಸುವವರು ಅವರನ್ನು ಅರ್ಥಮಾಡಿಕೊಳ್ಳುವಲ್ಲಿ ಸಂಪೂರ್ಣವಾಗಿ ವಿಫಲರಾಗುತ್ತಾರೆ. ಅವರ ಸಾಹಿತ್ಯ ಕೃತಿಗಳನ್ನು ಗ್ರಹಿಸಲು ವಿಫಲರಾದ ಅನೇಕ ವಿಮರ್ಶಕರು ಶರತ್‌ಚಂದ್ರರಿಗೆ ಅಡುಗೆ ಮನೆ ಸಾಹಿತಿ ಎಂಬ ಹಣೆಪಟ್ಟಿ ಅಂಟಿಸಿದ್ದಾರೆ. ಅಂಥ ವಿಮರ್ಶಕರ ಬಗ್ಗೆ ಮರುಕ ಹುಟ್ಟುತ್ತದೆ. ಹಾಗೆಯೇ ಶರತ್‌ಚಂದ್ರರನ್ನು ಪ್ರಶಂಸೆ ಮಾಡಿದವರೂ ಸಹ ಅವರ ಸಾಹಿತ್ಯದ ನೈಜ ಸಾರ ಹಾಗೂ ಮಹಾನತೆಯನ್ನು ಗ್ರಹಿಸಲಾಗದೆ ಅವರನ್ನು ಕೇವಲ ಮಧುರ ಕಥೆಗಳ ಲೇಖಕ, ಓರ್ವ ಸಹಾನುಭೂತಿಯುಳ್ಳ ಲೇಖಕ, ಮಹಾನ್ ಕಥೆಗಾರ ಇತ್ಯಾದಿಯಾಗಿ ಬಣ್ಣಿಸಿದ್ದಾರೆ.

...ಯುರೋಪಿನ ನವೋದಯದ ಇತಿಹಾಸವನ್ನು ಬಹಳ ನಿಕಟವಾಗಿ ಮತ್ತು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ಅದು ತನ್ನ ಆರಂಭದ ಹಂತದಲ್ಲಿ ತಾರುಣ್ಯದ ಹುರುಪಿನಿಂದ ಕೂಡಿದ್ದು ಮೂಲತಃ ಧರ್ಮನಿರಪೇಕ್ಷ ಹಾಗೂ ಕ್ರಾಂತಿಕಾರಿ ಧೋರಣೆಯನ್ನು ಹೊಂದಿತ್ತು ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಆ ನವೋದಯವು ಬಹುತೇಕ ಧರ್ಮದ ವಿರುದ್ಧ ಹಾಗೂ ಆಧ್ಯಾತ್ಮಿಕತೆಯ ವಿರುದ್ಧ ರಾಜಿರಹಿತ ನಿಲುವನ್ನು ಪ್ರತಿಬಿಂಬಿಸಿತ್ತು. ಆ ನವೋದಯ ಹೋರಾಟದ ಹರಿಕಾರರು, ಸತ್ಯಾನ್ವೇಷಣೆಯು ಇತಿಹಾಸ, ವೈಜ್ಞಾನಿಕ ವಿಚಾರಪರತೆ, ಜೊತೆಗೆ ಪ್ರಯೋಗ, ಪ್ರಯೋಗದ ಪುನರಾವರ್ತನೆ, ಪ್ರಮಾಣಗಳ ಮೇಲೆ ಆಧಾರಿತವಾಗಿರಬೇಕೆಂದು

ಪ್ರತಿಪಾದಿಸುತ್ತಿದ್ದರು. ಈ ಅಧ್ಯಯನದ ಪ್ರಕ್ರಿಯೆಯಲ್ಲಿ ಕೆಲವು ತಪ್ಪುಗಳು ನಡೆದರೂ ಅದರಿಂದ ಹೆಚ್ಚಿನ ತೊಂದರೆಯೇನಿಲ್ಲ. ಆದರೆ ಯಾವುದಾದರೂ ವಿಷಯ ನಿಜಕ್ಕೂ ಅಜ್ಞೇಯವೆಂದಿದ್ದರೆ (ತಿಳಿಯಲು ಸಾಧ್ಯವಾಗದ್ದು) ಅದನ್ನು ಅರಿತುಕೊಳ್ಳುವುದು ಅಸಾಧ್ಯ. ಆದ್ದರಿಂದ ಅದನ್ನು ಬೆನ್ನಟ್ಟಿಹೋಗುವುದು ನಿರರ್ಥಕ ಎಂದು ಅವರು ಭಾವಿಸಿದ್ದರು. ನಮ್ಮ ದೇಶದಲ್ಲಿ ಶರತ್‌ಚಂದ್ರರ ಸಾಹಿತ್ಯ, ಚಿಂತನೆಗಳು ಯುರೋಪಿನ ನವೋದಯದ ಪ್ರಾರಂಭಿಕ ಹಂತದ ಈ ರಾಜಿರಹಿತ ನಿಲುವನ್ನು ಪ್ರತಿಬಿಂಬಿಸಿದವು. ಆದ್ದರಿಂದಲೇ ಶರತ್‌ಚಂದ್ರರು ಮೃದುಹಾಸ್ಯದಿಂದ ನುಡಿದರು: "ಬುದ್ಧಿಗೆ ನಿಲುಕದ್ದನ್ನು ನಾನು ಸುಮ್ಮನೆ ಅದರಷ್ಟಿಗೇ ಬಿಟ್ಟು ಬಿಡುತ್ತೇನೆ, ಏಕೆಂದರೆ ಹಾಗೆ ಬಿಡುವುದೇ ವಾಸಿ. ಯಾವುದನ್ನೋ ವಿವರಣೆಗೆ ನಿಲುಕದ್ದು, ಅರ್ಥಮಾಡಿಕೊಳ್ಳಲಾಗದ್ದು, ಅಜ್ಞೇಯ ಎಂದು ಘೋಷಿಸುತ್ತಾ, ಅದೇ ಸಮಯಕ್ಕೆ ಆ ತಿಳಿಯಲಾಗದಂತಹುದನ್ನು ಅರಿಯಲು ಹಾಗೂ ವಿವರಿಸಲು ಸತತವಾಗಿ ಪ್ರಯತ್ನಿಸುತ್ತಲೇ ಇರುವುದು ಹೇಗೆ? ನಾನೆಂದೂ ಇಂಥ ಸಾಹಸಕ್ಕೆ ಕೈ ಹಾಕಲಾರೆ. ಅಲ್ಲದೆ ಹೀಗೆ ಮಾಡುವವರನ್ನು ನಾನು ಸಹಿಸಲಾರೆ. ಒಮ್ಮೆ ಅವರು ಏನನ್ನೋ ಅಜ್ಞೇಯ ಎಂದು ಘೋಷಿಸುತ್ತಾರೆ. ಮತ್ತು ಅದೇ ಉಸಿರಿನಲ್ಲಿ ಅದನ್ನು ತಾವು ಆಗತಾನೆ ಅಲ್ಲೇ ಕಂಡ ಹಾಗೆ ಅದರ ಬಗ್ಗೆ ಕಣ್ಣಿಗೆ ಕಟ್ಟುವಂತೆ ವಿವರಣೆ ನೀಡುತ್ತಾರೆ. ಯಾವುದನ್ನು ಯಾವ ರೀತಿಯಲ್ಲೂ ಅರಿಯಲಾಗದೋ ಅದನ್ನು ಅರಿಯಲು ಪುಟಗಟ್ಟಲೆ ಸಂಪುಟಗಟ್ಟಲೆ ಬರಹಗಳು ಮೂಡಿಬಂದಿವೆ. ಇದೇನಿದು! ನಿರಾಕಾರ, ನಿರ್ಲಿಪ್ತ, ನಿರ್ವಿಕಾರ – ಇವೆಲ್ಲವೂ ಅರ್ಥಹೀನ ಪದಪುಂಜಗಳು." ಇತಿಹಾಸವನ್ನು ಸೂಕ್ಷ್ಮವಾಗಿ ಅಭ್ಯಸಿಸಿ ವಿಶ್ಲೇಷಿಸಿದರೆ ಇಂತಹ ಎಲ್ಲಾ ಪರಿಕಲ್ಪನೆಗಳು ಹೆಚ್ಚು ಹೆಚ್ಚು ನಗೆಪಾಟಲಿಗೀಡಾಗುತ್ತವೆ.

ಶರತ್‌ಚಂದ್ರರನ್ನು ಅನೇಕ ಬಾರಿ ಕೇಳಲಾಗುತ್ತಿದ್ದ ಪ್ರಶ್ನೆ : "ನೀವೊಬ್ಬ ಸಾಹಿತಿ. ಆದರೆ ನಿಮ್ಮ ಪುಸ್ತಕ ಭಂಡಾರದಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಇತಿಹಾಸ, ಗಣಿತಶಾಸ್ತ್ರ, ಅರ್ಥಶಾಸ್ತ್ರಗಳ ಕುರಿತಾದ ಪುಸ್ತಕಗಳು ತುಂಬಿವೆ. ಆದರೆ ವಿಶ್ವದ ಯಾವುದೇ ಗಣ್ಯ ಕಾದಂಬರಿಕಾರರ ಒಂದೇ ಒಂದು ಕೃತಿ ಸಹ ಏಕೆ ಇಲ್ಲ?" ಒಮ್ಮೆ ಚಂದನ ನಗರದ ಸಭೆಯಲ್ಲಿ ಮತಿಬಾಬು ಹಾಗೂ ಇನ್ನಿತರರು ಸಹ ಇಂತಹುದೇ ಹಲವು ಪ್ರಶ್ನೆಗಳನ್ನು ಕೇಳಿದರು. ಅವರಿಗೆ ಉತ್ತರಿಸುತ್ತಾ ಶರತ್‌ಚಂದ್ರರು ಹೀಗೆಂದರು: "ನಾನೇ ಸ್ವತಃ ಕಥೆಗಳನ್ನು ಬರೆಯುತ್ತೇನೆ. ನಾನು ಕಥೆಗಳನ್ನು ಓದುವುದೇ ಇಲ್ಲ ಎಂದಲ್ಲ. ನೀವು ಸರಿಯಾಗಿ ಹುಡುಕಿದರೆ ನಿಮಗೆ ಕೆಲವು ಕಥೆಗಳು ಸಿಗಬಹುದು. ಆದರೆ ಕಥಾಸಾಹಿತ್ಯ ನನಗೆ ಅಷ್ಟೊಂದು ಹಿಡಿಸುವುದಿಲ್ಲ." ಇದನ್ನು ಶರತ್‌ಚಂದ್ರರು ತಮಾಷೆಗಾಗಿ ಹೇಳಿದ್ದರೂ ಅವರು ವಾಸ್ತವದಲ್ಲಿ ಹೇಳಬಯಸಿದ್ದೆಂದರೆ ಲೇಖಕನೊಬ್ಬ ಸಾಮಾಜಿಕ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಬಯಸಿದರೆ ಹಾಗೂ ಕಥೆಯ ಮೂಲಕ ಅವುಗಳ ಬಗ್ಗೆ ಏನನ್ನಾದರೂ ಹೇಳಬಯಸಿದರೆ, ಪಾತ್ರ ಮತ್ತು ಘಟನೆಗಳ ಚಿತ್ರಣದ ಮೂಲಕ ಸತ್ಯವನ್ನು ಜನತೆಯ ಮುಂದಿಡಬಯಸಿದರೆ, ಆಗ ಆತ ಜನತೆ ಹಾಗೂ ಸಮಾಜದ ಸಮಸ್ಯೆಗಳನ್ನು ನಿಜವಾಗಿ ಅರಿತಿದ್ದರೆ ಮಾತ್ರ ಈ ಕೆಲಸ ಆತನಿಂದ ಸಾಧ್ಯವಾಗುತ್ತದೆ. ವಿಜ್ಞಾನದ ಮೂಲಕ ಗಹನ ಜ್ಞಾನವನ್ನು ಗಳಿಸದೆ ಈ ಸತ್ಯವನ್ನು ಅರಿಯುವುದು

ಖಂಡಿತ ಅಸಾಧ್ಯ. ಮಾನವ ಮನಸ್ಸಿನ ರಚನೆ ಹಾಗೂ ಅದರ ವೈಚಿತ್ರ್ಯಗಳ ಸಂಕೀರ್ಣ ಪ್ರಕ್ರಿಯೆಯನ್ನು ಅರಿಯಬೇಕಾದರೆ ವಿಜ್ಞಾನದ ಸೂಕ್ಷ್ಮ ಅಧ್ಯಯನ ಬೇಕಾಗುತ್ತದೆ ಹಾಗೂ ಇತಿಹಾಸದ ಕೂಲಂಕಶ ವಿಶ್ಲೇಷಣೆ ಅಗತ್ಯವಾಗುತ್ತದೆ.

ಹೀಗೆ ಶರತ್‌ಚಂದ್ರರ ವಸ್ತುನಿಷ್ಠ ಹಾಗೂ ವೈಜ್ಞಾನಿಕ ನಿಲುವು ಮತ್ತು ಧೋರಣೆಯ ಕಾರಣದಿಂದ ಮೂಢನಂಬಿಕೆಗಳನ್ನು ಹೋರಾಡುವ ಪ್ರಶ್ನೆಯ ಬಗ್ಗೆ ರವೀಂದ್ರನಾಥ್ ಟ್ಯಾಗೋರ್ ಹಾಗೂ ಅವರ ನಡುವೆ ದೊಡ್ಡ ಭಿನ್ನಾಭಿಪ್ರಾಯ ಮೂಡಿ ಬಂತು. ಯಾವುದೇ ವಿಚಾರಶೀಲ ವ್ಯಕ್ತಿ ಮೂಢನಂಬಿಕೆಯನ್ನು ಮತ್ತು ಜಾತಿವಾದವನ್ನು ಸಾಮಾಜಿಕ ಪಿಡುಗೆಂದು ಪರಿಗಣಿಸುವುದು ಸಹಜವೇ. ಸ್ವಾತಂತ್ರ್ಯ ಹೋರಾಟದ ಅಂದಿನ ದಿನಗಳಲ್ಲಿ ನಮ್ಮ ದೇಶದ ಯಾವ ಮಹಾ ಪುರುಷರೂ ಅಂಥ ರೂಢಿಗಳನ್ನು ಬೆಂಬಲಿಸಿರಲಿಲ್ಲ. ಆದರೆ ಈ ಪ್ರಶ್ನೆಯ ಬಗ್ಗೆ ಶರತ್‌ಚಂದ್ರರು, ರವೀಂದ್ರನಾಥರೊಡನೆ ಹಾಗೂ ಉಳಿದವರೊಡನೆ ನಿರ್ದಿಷ್ಟವಾಗಿ ಎಲ್ಲಿ ಭಿನ್ನಾಭಿಪ್ರಾಯ ಹೊಂದಿದ್ದರು ಎಂಬುದರಲ್ಲೇ ಈ ಪಿಡುಗುಗಳನ್ನು ಹೋರಾಡುವ ಸರಿಯಾದ ಮಾರ್ಗ ಅಡಗಿತ್ತು. ಜನತೆಯ ಮಧ್ಯೆ ಪ್ರಚಲಿತವಾಗಿದ್ದ ಜಾತಿವಾದದ ಹಾಗೂ ಅಸ್ಪೃಶ್ಯತೆಯ ಸಾಂಪ್ರದಾಯಿಕ ರೂಢಿಗಳು ಮೂಢನಂಬಿಕೆ ಮಾತ್ರ ಎಂದು ಶರತ್‌ಚಂದ್ರರು ಅರಿತಿದ್ದರು. ಬಹಳ ಕಾಲ ಅನುಸರಿಸಿಕೊಂಡು ಬಂದ ಕೆಲವು ಅಭ್ಯಾಸಗಳು ಒಂದು ಸಾಮಾಜಿಕ ರೂಢಿಯಾಗಿ ಬೆಳೆದು ಬಂದಾಗ – ಅದು ಸರಿಯಿರಲಿ ತಪ್ಪಿರಲಿ, ಜನತೆ ಅದನ್ನು ಪಾಲಿಸುವುದಕ್ಕೆ ಹೊಂದಿಕೊಂಡಾಗ – ಅದೊಂದು ಮೂಢನಂಬಿಕೆಯಾಗುತ್ತದೆ. ಶರತ್‌ಚಂದ್ರರು ಈ ಸಮಸ್ಯೆಯನ್ನು ತಮ್ಮ ಅನೇಕ ಲೇಖನ ಹಾಗೂ ಸಣ್ಣ ಕಥೆಗಳಲ್ಲಿ ವಿವರಿಸಲು ಯತ್ನಿಸಿದರು. ಉದಾಹರಣೆಗಳನ್ನು ನೀಡುತ್ತಾ ಅವರು ಹೇಗೆ ವಾತ್ಸಲ್ಯಮಯಿ ತಾಯಿ ಸಹ ತನ್ನ ಮಗ ಎಲ್ಲಿ ಬಹಿಷ್ಕಾರಕ್ಕೆ ಒಳಗಾಗುತ್ತಾನೋ ಎಂಬ ಭೀತಿಯಿಂದ ಅವನು ವಿದೇಶಕ್ಕೆ ಹೋಗುವ ಪ್ರಸ್ತಾಪ ಬಂದಾಗ ಅತ್ಯಂತ ಹೆಚ್ಚಿನ ಕಳವಳಕ್ಕೆ ಒಳಗಾಗಿ ಕಂಬನಿ ಸುರಿಸುತ್ತಾಳೆ ಎಂಬುದನ್ನು ವಿವರಿಸುತ್ತಾರೆ. ಅವನು ವಿದೇಶದಿಂದ ಹಿಂದಿರುಗಿದ ಬಳಿಕ ಆತ ಕಾಯಿಲೆ ಬಿದ್ದಾಗ ಆಕೆ ತನ್ನ ಆಹಾರವನ್ನೂ ನಿರ್ಲಕ್ಷಿಸಿ ಗಾಢವಾದ ಮಮತೆ ಹಾಗೂ ಶ್ರಮದಿಂದ ಅವನ ಸೇವೆಯನ್ನಂತೂ ಖಂಡಿತ ಮಾಡುತ್ತಾಳೆ; ಆದರೂ ಅವಳಲ್ಲಿ ಆಳವಾಗಿ ಹುದುಗಿರುವ ಕಂದಾಚಾರದ ಕಾರಣದಿಂದ ಅವಳು ಪವಿತ್ರ ಜಲದಲ್ಲಿ ಮುಳುಗುಹಾಕದೆ ಆಹಾರ ಸೇವಿಸಲಾರಳು. ಕಣ್ಣಿನಿಂದ ನೀರು ಸುರಿಯುತ್ತಿದ್ದರೂ ಸಹ ಆಕೆ ತನ್ನ ಬಹಿಷ್ಕೃತ ಮಗ ಮುಟ್ಟಿದ ಆಹಾರ ಸೇವಿಸುವುದಿಲ್ಲ. ಮೂಢನಂಬಿಕೆ ಇಷ್ಟು ಆಳವಾಗಿ ಬೇರೂರಿರುವಾಗ ಗುರುದೇವ ರವೀಂದ್ರನಾಥರು ಮುಂದಿರಿಸಿದ ಮುಗ್ಧವಾದ ತರ್ಕದಿಂದ ಅದನ್ನು ನಿವಾರಿಸಲು ಸಾಧ್ಯವೇ? ಗುರುದೇವರು ಕೇಳುತ್ತಾರೆ "ಮಾನವ ಬೆಕ್ಕಿಗಿಂತಲೂ ಕೀಳೆ? ಒಂದು ಬೆಕ್ಕು ನಿಮ್ಮ ತಟ್ಟೆಯಿಂದ ತಿಂದರೆ ಹಾಳಾಗದ ನಿಮ್ಮ ಜಾತಿಯ ಪಾವಿತ್ರ್ಯ ಬೇರೆ ಧರ್ಮದ ಅಥವಾ ಕೆಳಜಾತಿಯ ವ್ಯಕ್ತಿ ನಿಮ್ಮನ್ನು ಮುಟ್ಟಿದರೆ ಹೇಗೆ ಹಾಳಾಗುತ್ತದೆ?" ಇಂಥ ತರ್ಕದಿಂದ ಬೇಸರಗೊಂಡ ಶರತ್‌ಚಂದ್ರರು ರವೀಂದ್ರನಾಥರಿಗೆ ಕೊಂಚ ವಿನೋದವಾಗಿಯೇ ಉತ್ತರಿಸುತ್ತಾ 'ಮನುಷ್ಯರ ಸಮಸ್ಯೆಗಳ ಕುರಿತಾದ ಚರ್ಚೆಯಲ್ಲಿ ಪ್ರಾಣಿಗಳು ಹಾಗೂ ಸಸ್ಯಗಳು ಪ್ರವೇಶಿಸಿದ್ದಾದರೂ

ಹೇಗೆ' ಎಂದು ಅಚ್ಚರಿ ವ್ಯಕ್ತಪಡಿಸಿದರು. ಅಲ್ಲದೆ "ಇಂಥ ದೃಷ್ಟಾಂತಗಳಿಂದ ಸಾಧಿಸುವುದಾದರೂ ಏನನ್ನು? ಅವು ಏನನ್ನು ತಾನೆ ಸಾಬೀತುಗೊಳಿಸುತ್ತವೆ? ಮಾನವ ನಡತೆಯ ತಪ್ಪು ಒಪ್ಪುಗಳನ್ನು, 'ಏಕೆ ಬೆಕ್ಕನ್ನು ಮಡಿಲಲ್ಲಿ ಇಟ್ಟುಕೊಳ್ಳ ಬಯಸುತ್ತಾರೆ' ಅಥವಾ 'ಏಕೆ ಊಟದ ತಟ್ಟೆಯಲ್ಲಿ ಇರುವೆ ಬಿದ್ದಾಗ ಸಹಿಸುತ್ತಾರೆ' ಎಂಬಂಥ ವಾದಗಳಿಂದ ನಿಷ್ಕರ್ಷೆ ಮಾಡಲಾಗದು. ಅದು ಕಿವಿಗೆ ಎಷ್ಟೇ ಸವಿಯಾಗಿರಲಿ, ಎಷ್ಟೇ ಕಣ್ಣುಕೋರೈಸುವಂತೆ ಕಾಣಿಸಲಿ ಇಂಥ ತರ್ಕಕ್ಕೆ ಅಂತಿಮವಾಗಿ ಬೆಲೆ ಇಲ್ಲ" ಎಂದು ನುಡಿದರು. 'ಬ್ರಾಹ್ಮಣ ಸ್ತ್ರೀಯರ ಮಡಿಲಲ್ಲಿ ಅಶುದ್ಧ ಬಾಯಿಯ ಮುದ್ದಿನ ಬೆಕ್ಕು ಕುಳಿತರೆ ಆಕೆಯ ಪಾವಿತ್ರ್ಯಕ್ಕೆ ಕುಂದು ಬರುವುದಿಲ್ಲ, ಅದಕ್ಕೆ ಅವಳ ಆಕ್ಷೇಪಣೆಯೇನೂ ಇರುವುದಿಲ್ಲ' ಎಂಬ ರವೀಂದ್ರನಾಥರ ಹೇಳಿಕೆಗೆ ಶರತ್‌ಚಂದ್ರರು ಪರಿಹಾಸಯುಕ್ತವಾಗಿ ಹೇಳಿದ್ದು "ಬಹುಶಃ ಅವಳು ಆಕ್ಷೇಪಿಸಲಾರಳು, ಆದರೆ ಇದರಿಂದ ಏನನ್ನು ಸಾಧಿಸಿದಂತಾಗುತ್ತದೆ? ಬೆಕ್ಕಿನ ಉದಾಹರಣೆ ಕೊಟ್ಟು, ಕೀಳುಪ್ರಾಣಿಯಾದ ಬೆಕ್ಕು ನಿನ್ನ ಮಡಿಲಲ್ಲಿ ಕೂತರೆ ನೀನು ಆಕ್ಷೇಪಿಸುವುದಿಲ್ಲ. ನಾನು ಅದಕ್ಕಿಂತ ಉಚ್ಚವರ್ಗದ ಪ್ರಾಣಿಯಾಗಿರುವುದರಿಂದ ಸಹಜವಾಗಿ ನಾನು ನಿನ್ನ ಮಡಿಲಲ್ಲಿ ಕೂರುವುದನ್ನು ನೀನು ನಿರಾಕರಿಸಕೂಡದು ಎಂದು ವಾದಿಸಲಾಗದು." ಇದೆಂಥ ತರ್ಕ? ಜಾತಿವಾದವನ್ನು ಸರಿಯಾಗಿ ಅರ್ಥಮಾಡಿಕೊಂಡವರಿಗೆ ಗೊತ್ತು, ಜಾತಿಭ್ರಷ್ಟರಿಂದ ಅಥವಾ ಕೆಳಜಾತಿಯವರಿಂದ ಆಹಾರವನ್ನು ತೆಗೆದುಕೊಳ್ಳಲು ನಿರಾಕರಿಸುವವರು ಅಗೌರವ ಭಾವನೆಯಿಂದ ಹಾಗೆ ನಡೆದುಕೊಳ್ಳುತ್ತಾರೆ ಎನ್ನುವಷ್ಟು ಅದು ಸರಳವಲ್ಲ. ಸ್ವಲ್ಪವೂ ಅಗೌರವವಿಲ್ಲದಿದ್ದರೂ, ಆಳವಾದ ಪ್ರೇಮ ಮತ್ತು ಮಮತೆಯಿದ್ದರೂ, ಆಗಲೂ ಕೂಡ ಆಹಾರವನ್ನು ಸ್ವೀಕರಿಸಲಿಕ್ಕೆ ಮೂಢನಂಬಿಕೆ ಅಡ್ಡ ಬರುತ್ತದೆ. ಅವರು ತಮ್ಮ 'ಗೃಹದಾಹ' ಕಾದಂಬರಿಯಲ್ಲಿ ರಾಮಬಾಬು ಎಂಬ ಪಾತ್ರದ ಮೂಲಕ ಈ ಸಮಸ್ಯೆಯ ಮೇಲೆ ಬೆಳಕು ಚೆಲ್ಲಲು ಯತ್ನಿಸಿದ್ದಾರೆ. ರಾಮಬಾಬುರಂತಹ ದಯಾಳುವೂ ಮಮತಾಮಯಿಯೂ ಆದ ವ್ಯಕ್ತಿಯೂ ಕೂಡ ಹೇಗೆ ಪೂರ್ವಗ್ರಹದಿಂದ ಕೂಡಲೇ ಕಠೋರವಾದ ಹಾಗೂ ನಿರ್ದಯಿಯಾದ ಮನುಷ್ಯನಾಗಿ ಬದಲಾದರು ಎಂಬುದನ್ನು ಅವರು ಚಿತ್ರಿಸಿದರು. ಅಚಲಳ ಬಗ್ಗೆ ಅವರಿಗಿದ್ದ ಪ್ರೇಮ ಹಾಗೂ ಮಮತೆಗಳು ರಾಮಬಾಬುಗಳನ್ನು ಧರ್ಮದ ಸಂಕುಚಿತ ಮಿತಿಯಿಂದ ಹೊರಗೆ ತಂದು ಬಿಟ್ಟಿತೇನೋ ಎನಿಸುವಷ್ಟರಲ್ಲಿ, ಅವರ ಪೂರ್ವಗ್ರಹವು ಅತ್ಯಂತ ಹೃದಯವಂತರೂ ಹಾಗೂ ಅನುಕಂಪಭರಿತರೂ ಆಗಿದ್ದ ಈ ವ್ಯಕ್ತಿಯನ್ನು ಹೇಗೆ ಇದ್ದಕ್ಕಿದ್ದಂತೆ ಮೃಗದ ಮಟ್ಟಕ್ಕಿಳಿಸಿತು ಎಂಬುದನ್ನು ಶರತ್‌ಚಂದ್ರರು ಚಿತ್ರಿಸಿದ್ದಾರೆ. ಆದ್ದರಿಂದ ಈ ರೀತಿಯ ಪಾತ್ರಗಳನ್ನು ಚಿತ್ರಿಸುತ್ತಾ ಓದುಗರ ಮನದಲ್ಲಿ ನೋವು ಹಾಗೂ ಸಂಕಟವನ್ನು ಉಂಟುಮಾಡಿ, ಶರತ್‌ಚಂದ್ರರು ಮನುಷ್ಯನನ್ನು ಅಮಾನವೀಯಗೊಳಿಸುವ, ಅವನು ತನ್ನ ಕರ್ತವ್ಯ ಹಾಗೂ ಜವಾಬ್ದಾರಿಯನ್ನು ಮರೆಯುವಂತೆ ಮಾಡುವ, ಅವನ ಭಾವನೆ ಹಾಗೂ ತುಡಿತಗಳನ್ನು ಬತ್ತಿಸುವ ರೂಢಿ, ಸಂಪ್ರದಾಯ, ಮೂಢನಂಬಿಕೆಗಳು, ಜಾತಿವಾದ ಮತ್ತು ಅಸ್ಪೃಶ್ಯತೆಯ ಪಾಲನೆ, ಇವುಗಳನ್ನು ತಿರಸ್ಕರಿಸುವುದೇ ಮೇಲು ಎಂದು ಓದುಗರು ಮನಗಾಣುವಂತೆ ಮಾಡಿದರು. ಮನುಷ್ಯರಲ್ಲಿ ವ್ಯಥೆ ಹಾಗೂ ಸಹಾನುಭೂತಿಯನ್ನು ಉದ್ದೀಪಿಸಿ ಈ ಮೂಢನಂಬಿಕೆಗಳ ವಿರುದ್ಧ ಹೋರಾಡಲು ಅವರು ಬಯಸಿದರು.

ಏಕೆಂದರೆ ಎಲ್ಲಾ ವಿಧದ ಪೂರ್ವಗ್ರಹಗಳು ಮತ್ತು ಮೂಢನಂಬಿಕೆಗಳ ವಿರುದ್ಧ ಒಂದು ಸಾಮಾಜಿಕ ಹೋರಾಟ ಬೆಳೆಸದೆ, ಈ ಸಾಮಾಜಿಕ ಅನಿಷ್ಟಗಳ ಬೇರುಗಳಿಗೆ ಕೊಡಲಿಯೇಟು ಹಾಕದೆ ಸಮಾಜವನ್ನು ಅವುಗಳ ಅಪಾಯಕಾರಿ ಪ್ರಭಾವದಿಂದ ಮುಕ್ತಗೊಳಿಸಲಾಗದು ಎಂಬುದನ್ನು ಅವರು ಚೆನ್ನಾಗಿಯೇ ಅರಿತಿದ್ದರು. ಒಮ್ಮೆ ಅವರು ನೋವಿನಿಂದ ಹೇಳಿದ್ದರು: ವಿದ್ಯಾಸಾಗರರಂತಹವರು ಸಮಾಜದ ಮನೋಭೂಮಿಕೆಯನ್ನು ಗಣನೆಗೇ ತೆಗೆದುಕೊಳ್ಳದೆ ಸಮಾಜದ ವಿರುದ್ಧ ಬಂಡಾಯವೆದ್ದು ವಿಧವಾ–ವಿವಾಹವನ್ನು ಜಾರಿಗೊಳಿಸಲು ಯತ್ನಿಸಿದರು; ಅದನ್ನು ಅವರು ಶಾಸನವನ್ನು ಜಾರಿಗೊಳಿಸುವ ಮೂಲಕ ಮಾಡಲು ಪ್ರಯತ್ನಿಸಿದರು ಮತ್ತು ಕೆಲವು ವಿಧವೆಯರಿಗೆ ಮದುವೆ ಮಾಡಿಸಿದರು. ಆದರೂ ಅವರು ವಿಧವಾ–ವಿವಾಹವನ್ನು ನೆಲೆಗೊಳಿಸುವಲ್ಲಿ ವಿಫಲರಾದರು. ಏಕೆಂದರೆ ಅದು ಒಂದು ಸಾಮಾಜಿಕ ಹೋರಾಟದ ಸ್ವರೂಪವನ್ನು ಪಡೆದುಕೊಳ್ಳಲಿಲ್ಲ. ಹಾಗಾಗಿದ್ದಲ್ಲಿ ಫಲಿತಾಂಶವು ಬೇರೆಯೇ ಆಗಿರುತ್ತಿತ್ತು. ವಿಧವಾ–ವಿವಾಹಕ್ಕೆ ಕಾನೂನಿನ ಮಾನ್ಯತೆ ದೊರಕಿದ್ದರೂ ಸಮಾಜದ ಮನೋಭೂಮಿಕೆಯಲ್ಲಿ ವಿಧವಾ–ವಿವಾಹದ ವಿರುದ್ಧ ಪೂರ್ವಗ್ರಹವು ಇನ್ನೂ ಉಳಿದೇ ಇತ್ತು. ಅಂದಿನ ಸಮಕಾಲೀನ ಲೇಖಕರಿಗೆ ಜನಮಾನಸದಲ್ಲಿ ವೇದನೆ ಮತ್ತು ಸಹಾನುಭೂತಿಯನ್ನು ಉಂಟುಮಾಡಿ ಅವರ ಮನೋಭಾವವನ್ನು, ನಿಲುವನ್ನು ಬದಲಾಯಿಸಿ ವಿಧವಾ–ವಿವಾಹದ ಬಗ್ಗೆ ಜನರ ಮನಬದಲಿಸಲು ಸಾಧ್ಯವಾಗಿದ್ದರೆ ಅದರ ಜಾರಿಯ ಬಗ್ಗೆ ಪೂರಕವಾದ ಅಭಿಪ್ರಾಯವನ್ನು ಸಮಾಜದಲ್ಲಿ ಬೆಳೆಸಬಹುದಿತ್ತೇನೋ. ಅವಶ್ಯಕತೆಯ ಬಗ್ಗೆ ಲೇಖನಗಳಲ್ಲಿ ಮತ್ತು ಭಾಷಣಗಳಲ್ಲಿ ಘೋಷಿಸುವುದರಿಂದ ಮಾತ್ರ ಅದನ್ನು ಸಾಧಿಸಲಾಗದು. ಬದಲಿಗೆ ಓದುಗರ ಮನಸ್ಸಿನಲ್ಲಿ ಸಹಾನುಭೂತಿ ಹುಟ್ಟುವಂತೆ ವಿಧವೆಯರ ವೇದನೆಯನ್ನು ಮನಮುಟ್ಟುವಂತೆ ಸುಂದರವಾಗಿ ಚಿತ್ರಿಸಿ ವಿಧವಾ–ವಿವಾಹದ ವಿಷಯವನ್ನು ಪ್ರತಿಪಾದಿಸುವುದರಿಂದ ಮಾತ್ರ ಸಾಧ್ಯ. ಇದಕ್ಕೆ ಒಳ್ಳೆಯ ಉದಾಹರಣೆ ಎಂದರೆ 'ಹಳ್ಳಿಯ ಸಮಾಜ' ಕಾದಂಬರಿಯಲ್ಲಿ ಶರತ್‌ಚಂದ್ರರು ರಮಾ–ರಮೇಶರ ಪ್ರಕರಣವನ್ನು ಅತ್ಯಂತ ಕಲಾತ್ಮಕವಾಗಿ ಚಿತ್ರಿಸಿರುವುದು.

ಶರತ್‌ಚಂದ್ರರು ತಮ್ಮ ಕೃತಿಗಳಲ್ಲಿ ವಿಧವೆಯರಿಗೆ ವಿವಾಹ ಆಗಗೊಡಲಿಲ್ಲ ಎಂಬುದರಿಂದ ಅವರು ವಿಧವಾ–ವಿವಾಹದ ಪರವಾಗಿರಲಿಲ್ಲ ಎಂಬುದಾಗಿ ಕೆಲವು ವಿಮರ್ಶಕರ ಆರೋಪವಿದೆ; 'ಚರಿತ್ರಹೀನ' ಕಾದಂಬರಿಯಲ್ಲಿ ವಿಧವೆ ಸಾವಿತ್ರಿಯ ವಿವಾಹವಾಗಲಿಲ್ಲ; 'ಹಳ್ಳಿಯ ಸಮಾಜ' ದಲ್ಲಿ ರಮಾ ಸಹ ವಿಧವೆ. ಅವಳ ವಿವಾಹವೂ ನಡೆಯಲಿಲ್ಲ; ಅಂದರೆ ಶರತ್‌ಚಂದ್ರರ ಮೂಢನಂಬಿಕೆ ಖಂಡಿತವಾಗಿ ಅಡ್ಡ ಬಂದಿರಬೇಕು! ಸಾಹಿತ್ಯದ ಕುರಿತಾದ ಯಾವುದೇ ಚರ್ಚೆಗೆ ಇಂಥ ವಿಮರ್ಶಕರು ಅನರ್ಹರೆಂದು ನಾನು ಭಾವಿಸುತ್ತೇನೆ. ಅಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ರಮೇಶ ಮತ್ತು ರಮೆಯ ವಿವಾಹವನ್ನು ಆಗಗೊಡಬೇಕಿದ್ದರೆ ಅವರನ್ನು ಸಮಾಜದಿಂದ ಹೊರತೆಗೆದು ಬೇರೆಲ್ಲಾದರೂ – ಬಹುಶಃ ಒಂದು ಹೋಟೆಲಿನಲ್ಲಿ ಇರಿಸಬೇಕಿತ್ತು ಅಥವಾ ಕಳಪೆ ಚಲನಚಿತ್ರಗಳ ನಾಯಕ ನಾಯಕಿಯರಂತೆ ಅವರನ್ನು ಚಿತ್ರಿಸಬೇಕಿತ್ತು, ಇದರ ಹೊರತಾಗಿ ತಮಗೆ ಬೇರೇನೂ ಪರ್ಯಾಯವಿಲ್ಲ ಎನ್ನುವುದನ್ನು ಶರತ್‌ಚಂದ್ರರು

ಚೆನ್ನಾಗಿ ಅರಿತಿದ್ದರು. ಏಕೆಂದರೆ ಅಂದಿನ ಗ್ರಾಮೀಣ ಪರಿಸರದಲ್ಲಿ ರಮಾ ಮತ್ತು ರಮೇಶ ಮದುವೆಯಾಗಿದ್ದರೆ ಅದು ಸಮಾಜದ ಮಾನ್ಯತೆಗೆ ಅರ್ಹವಾಗುತ್ತಿರಲಿಲ್ಲ. ಸಾಮಾಜಿಕ ಮನ್ನಣೆ ಹಾಗೂ ಮಾನ್ಯತೆ ಪಡೆಯದ ಹೊರತು ಪ್ರೇಮ ತನ್ನಿಂದ ತಾನೇ ತನ್ನ ಸೌಂದರ್ಯ ಹಾಗೂ ಮಾಧುರ್ಯವನ್ನು ಉಳಿಸಿಕೊಳ್ಳಲಾರದು. ಆದ್ದರಿಂದಲೇ ಅವರು ರಮೆಯನ್ನು ಒಬ್ಬ ವಿಧವೆಯಾಗಿ – ಎಣೆಯಿಲ್ಲದ ವ್ಯಕ್ತಿತ್ವದ ಚೆಲುವು ಹಾಗೂ ಆಕರ್ಷಣೆಯುಳ್ಳ ವಿಧವೆಯಾಗಿ ಚಿತ್ರಿಸಿದರು. ಮತ್ತು ಆಮೇಲೆ ರಮಾ ಹಾಗೂ ರಮೇಶರ ನಡುವೆ ಒಂದು ಸುಂದರವಾದ ಮನ ಮುಟ್ಟುವ ಸಂಬಂಧವನ್ನು ಚಿತ್ರಿಸುತ್ತಾ ಬಹುಶಃ ಅವರು ಕೇಳಬಯಸಿದ್ದು: "ರಮಾ ವಿಧವೆಯಾಗಿರಬಹುದು, ಆದರೆ ಈ ಸಂಬಂಧ, ಅದರಿಂದ ಅರಳಿದ ಸೌಂದರ್ಯ ಹಾಗೂ ಮಾಧುರ್ಯ ತಪ್ಪೆಂದು ನಿಮಗನಿಸುತ್ತದೆಯೇ, ಹೇಳಿ? ...ಇದು ನೀವು ಅನೇಕ ಬಾರಿ ಅನುಭವಿಸುವ ರೀತಿಯ ಪ್ರೇಮವೇ ಅಥವಾ ಅದಕ್ಕಿಂತ ಮಿಗಿಲಾದದ್ದೇ? ರಮಾ ರಮೇಶರ ಪ್ರಕರಣ ನಿಮ್ಮಲ್ಲಿ ಸಹಾನುಭೂತಿಯನ್ನು ಉಕ್ಕಿಸುತ್ತದೆಯೇ? ಈ ಎರಡು ಜೀವಗಳ ನಡುವೆ ಬೆಳೆದ ಸಂಬಂಧ ಅವರಿಬ್ಬರ ಮಿಲನದಲ್ಲಿ ಕೊನೆಗೊಳ್ಳಲೆಂದು ನೀವು ಆಶಿಸುವುದಿಲ್ಲವೇ? ಅವರಿಬ್ಬರೂ ಒಂದುಗೂಡಿ ಗೌರವಪೂರ್ಣ, ಘನತೆಯುಳ್ಳ ಜೀವನವನ್ನು ನಡೆಸಬೇಕು ಎಂದು ನೀವು ನಿಜವಾಗಿ ಬಯಸಿದರೆ ಆಗ ಈ ಹಳತಾಗಿ ಹೋದ ಹಿಂದೂ ಸಮಾಜವನ್ನು ಮೂಲಭೂತವಾಗಿ ಬದಲಾಯಿಸಬೇಕು!"

...'ಚರಿತ್ರಹೀನ'ದಲ್ಲಿ ಶರತ್‌ಚಂದ್ರರು ಚಿತ್ರಿಸಿದ ಸಾವಿತ್ರಿ ಅಂದಿನ ಸಾಮಾಜಿಕ ಪೂರ್ವಗ್ರಹ, ಮನೋಭಾವ ಹಾಗೂ ಧಾರ್ಮಿಕತೆಗಳನ್ನು ಆಧರಿಸಿದ ನೈತಿಕತೆಗಳ ಬೆಳಕಿನಲ್ಲಿ ಒಬ್ಬ ಪತಿತ ಸ್ತ್ರೀಯಂತೆ ಹಾಗೂ ಅವನತಿಗೊಂಡ ಕೆಲಸದವಳಂತೆ ಕಾಣಬಹುದು. ಆದರೆ ಸರೋಜಿನಿಯಂತಹ ಸುಸಂಸ್ಕೃತ ಮಹಿಳೆಯೊಬ್ಬಳು ಸಹ ಇಷ್ಟಪಡುವ ಸತೀಶನಂತಹವನು ಸಾವಿತ್ರಿಯನ್ನು ಪ್ರೀತಿಸುವುದು ಹೇಗೆ ಸಾಧ್ಯ? ಸಾಮಾನ್ಯವಾಗಿ ಇಂತಹ ಹೆಣ್ಣಿನೊಡನೆ ಸಂಬಂಧ ಬೆಳೆದರೂ ಅದು ಒಂದು ಹುಚ್ಚು ಹಾಗೂ ವಿಕೃತ ಸಂಬಂಧಕ್ಕಿಂತ ಉತ್ತಮವಾಗಿರಲಾರದು. ಆದರೆ ಶರತ್‌ಚಂದ್ರರು ಇಂತಹ ಮಹಿಳೆ ಹಾಗೂ ಸತೀಶರ ನಡುವೆ ಒಂದು ನಿಜವಾದ ಸುಂದರ ಹಾಗೂ ನೈತಿಕ ಸಂಬಂಧವನ್ನು ಅತ್ಯಂತ ಕಾಳಜಿಯಿಂದ ಹಾಗೂ ಸಹಾನುಭೂತಿಯಿಂದ ಚಿತ್ರಿಸಿದ್ದಾರೆ. ನವಿರಾದ ಹಾಸ್ಯಭರಿತ, ಮಧುರ ಸಂಭಾಷಣೆಗಳ ಮೂಲಕ ಈ ಸಂಬಂಧವನ್ನು ಬೆಳೆಸುತ್ತಾ, ಮೂಲ ಪ್ರವೃತ್ತಿಗಳಿಗೆ ಬಲಿಯಾಗದಂತೆ ಅವರನ್ನು ರಕ್ಷಿಸುತ್ತಾ ಉನ್ನತ ಅಭಿರುಚಿಯನ್ನು ಸೃಷ್ಟಿಸಿದ್ದಾರೆ. ಹೀಗೆ ಮಾಡಿದ ಮೇಲೆ ಇದನ್ನು ಸಂಪ್ರದಾಯಶರಣ ಓದುಗರು, ಸಾಮಾನ್ಯ ಗೃಹಿಣಿಯರು, ಶಿಕ್ಷಿತ ಹಾಗೂ ಅಶಿಕ್ಷಿತ ಜನತೆಯ ಮುಂದಿಡುತ್ತಾ ಅವರು ಕೇಳಬಯಸಿದ್ದೆಂದರೆ 'ಇದು ಅನೈತಿಕವೆಂದು ತೋರುತ್ತದೆಯೇ? ನಿಮಗಿದು ಇಷ್ಟವಾಯಿತೇ? ಈ ಸಂಬಂಧವನ್ನು ನೀವು ಹೇಗೆ ಪರಿಗಣಿಸುತ್ತೀರಿ. ಈ ಪ್ರಕರಣ ನಿಮ್ಮಲ್ಲಿ ನೋವುಂಟುಮಾಡುತ್ತದೆಯೇ? ಸಾವಿತ್ರಿಯ ಬಗ್ಗೆ ನಿಮ್ಮಲ್ಲಿ ವ್ಯಥೆಯಿದೆಯೇ? ನಿಮ್ಮಲ್ಲಿ ವೇದನೆಯುಂಟಾಗುತ್ತದೆಯೇ, ಅವರಿಬ್ಬರ ಮಿಲನ ಸಾಧ್ಯವಿಲ್ಲವೆಂಬ ಕೊರಗು ನಿಮ್ಮಲ್ಲಿದೆಯೇ?' ಎಲ್ಲರೂ ಒಕ್ಕೊರಲಿನಿಂದ ಖಂಡಿತವಾಗಿ ಹೌದೆಂದೇ ಹೇಳುತ್ತಾರೆ. 'ಹೌದು ನಮ್ಮಲ್ಲಿ ವೇದನೆಯಿದೆ. ಅವರ

ಮಿಲನವಾಗಲಿ ಎಂದು ನಾವು ಆಶಿಸುತ್ತೇವೆ.' ಈ ಪ್ರಕರಣದ ಮೂಲಕ ಶರತ್‌ಚಂದ್ರರು ತೋರಬಯಸಿದ್ದೆಂದರೆ ನೀವು ಎಷ್ಟೇ ಬಯಸಿದರೂ ಪ್ರಸಕ್ತ ಹಿಂದೂ ಸಮಾಜ ಮತ್ತು ಹಿಂದೂ ಧರ್ಮ ಅಸ್ತಿತ್ವದಲ್ಲಿರುವವರೆಗೆ ಅವರ ಮಿಲನ ಎಂದೂ ಸಾಧ್ಯವಿಲ್ಲ. ಈ ಕೃತಿಗಳ ಮೂಲಕ ಶರತ್‌ಚಂದ್ರರು ಓದುಗರ ಮನಸ್ಸಿನಲ್ಲಿ ನೋವು, ಕ್ಷೋಭೆ ಹಾಗೂ ತಹತಹಿಕೆಯ ಒಂದು ಭಾವನೆಯನ್ನು ಸೃಷ್ಟಿಸಿ ಸಾಮಾಜಿಕ ಕ್ರಾಂತಿಗಾಗಿ ಒಂದು ಪ್ರಬಲವಾದ ಕಾತರವನ್ನು ಜಾಗೃತಿಗೊಳಿಸಲು ಹಾಗೂ ಉನ್ನತ ಮೌಲ್ಯಗಳಿಗಾಗಿ ಆಕಾಂಕ್ಷೆಯನ್ನು ಉಂಟುಮಾಡಲು ಬಯಸಿದ್ದರು. ಸಾಮಾಜಿಕ ಕ್ರಾಂತಿಯ ಕುರಿತು ಪೊಳ್ಳಾದ ಉದ್ದುದ್ದ ಮಾತುಗಳನ್ನಾಡುತ್ತಾ ಅವರು ಆತ್ಮವಂಚನೆ ಮಾಡಿಕೊಳ್ಳಲಿಲ್ಲ, ಹಾಗೆಯೇ ಬೇರೆಯವರನ್ನು ಗೊಂದಲಕ್ಕೀಡುಮಾಡಲಿಲ್ಲ.

'ಚರಿತ್ರಹೀನ' ಕಾದಂಬರಿಯಲ್ಲಿನ ಕಿರಣ್ಮಯಿ, ಶರತ್‌ಚಂದ್ರರ ಇನ್ನೊಂದು ಅದ್ಭುತ ಸೃಷ್ಟಿ. ಕಿರಣ್ಮಯಿಯ ಪಾತ್ರವನ್ನು ಅಪರೂಪದ ಕೌಶಲ್ಯ ಹಾಗೂ ಕಲಾತ್ಮಕತೆಯಿಂದ ಚಿತ್ರಿಸಿದ ಶರತ್‌ಚಂದ್ರರು ಶಿಕ್ಷಿತ, ಸುಸಂಸ್ಕೃತ ಓದುಗರನ್ನು ಬಹುಶಃ ಹೀಗೆ ಕೇಳಬಯಸಿರಬೇಕು: "ಮಹಿಳೆಯರು ಹೀಗಿದ್ದರೆ ನೀವು ಇಷ್ಟಪಡುತ್ತೀರಾ? ನಿಮ್ಮ ಹಳೆಯ ಸಂಪ್ರದಾಯಕ್ಕೆ ಸೇರಿದ, ಅಂಧಶ್ರದ್ಧೆ ಅನುಸರಿಸುವ ಹಳೆಕಾಲದ, ಸಮಪ್ರದಾಯಸ್ಥ ಹೆಂಡತಿ, ಮಗಳು, ಸಹೋದರಿ ಅಥವಾ ಭಾವಿಪತ್ನಿಯೊಡನೆ ಅವಳನ್ನು ಹೋಲಿಸಿನೋಡಿ. ಆಗ ಕಿರಣ್ಮಯಿಯ ಬಗ್ಗೆ ನಿಮಗೆ ಏನನ್ನಿಸುತ್ತದೆ? ಆದರೆ ನಿಮ್ಮ ಮೂಢನಂಬಿಕೆ ತುಂಬಿದ ಹಿಂದೂ ಸಮಾಜದಲ್ಲಿ ಅತ್ಯದ್ಭುತ ವಿವೇಕ, ಜ್ಞಾನ, ಧೀಶಕ್ತಿ, ಪಾಂಡಿತ್ಯ, ಔದಾರ್ಯ ಹಾಗೂ ಸೌಂದರ್ಯವುಳ್ಳ ಕಿರಣ್ಮಯಿಯಂತಹ ಹೆಣ್ಣಿಗೆ ಮತಿಭ್ರಮಣೆಯಾಗುವುದರ ಹೊರತು ಇನ್ನಾವ ಭವಿಷ್ಯವಿದೆ? ಇಷ್ಟೊಂದು ಉನ್ನತ ಮಟ್ಟದ ಅಭಿರುಚಿ, ನೈತಿಕ ಪ್ರಜ್ಞೆ, ನಾರೀತ್ವ ಹಾಗೂ ಘನತೆಯುಳ್ಳ ಸ್ತ್ರೀ, ಸಾಧಾರಣ ಹೆಣ್ಣೊಬ್ಬಳ ಸಾಮಾನ್ಯ ಜೀವನದಿಂದ ಅಥವಾ ಪತಿತೆಯೊಬ್ಬಳ ಅವನತಿಗೊಂಡ ಜೀವನದಿಂದ ತೃಪ್ತಿಹೊಂದಲು ಸಾಧ್ಯವೇ?'

ಕಿರಣ್ಮಯಿ, ಹಡಗಿನಲ್ಲಿ ದಿವಾಕರನೊಂದಿಗೆ ಒಂದೇ ಹಾಸಿಗೆಯಲ್ಲಿ ಮಲಗಿದ್ದರೂ ಅವಳು ಅವನಿಗೆ ಶರಣಾಗಲಿಲ್ಲ. ಈ ಘಟನೆಯನ್ನು ಉದ್ಧರಿಸುತ್ತಾ ಕೆಲ ವಿಮರ್ಶಕರು ಶರತ್‌ಚಂದ್ರರು ಇದರ ಮೂಲಕ ಪುರಾತನ ಹಿಂದೂ ಧಾರ್ಮಿಕ ಪೂರ್ವಗ್ರಹಗಳನ್ನು ಪ್ರತಿಬಿಂಬಿಸಿದ್ದಾರೆ ಎನ್ನುತ್ತಾರೆ. ಆದರೆ ಮತಿಬಾಬು ಮತ್ತು ಇನ್ನಿತರರೊಂದಿಗೆ ನಡೆದ ಚರ್ಚೆಯಲ್ಲಿ ಶರತ್‌ಚಂದ್ರರು ಕಿರಣ್ಮಯಿಯಂತಹ ಮಹಿಳೆ ಏಕೆ ದಿವಾಕರನಿಗೆ ತನ್ನನ್ನು ಒಪ್ಪಿಸಿಕೊಳ್ಳಲಾರಳು ಎಂಬುದನ್ನು ಸ್ವತಃ ತಾವೇ ವಿವರಿಸಿದ್ದಾರೆ. ಚಂದನನಗರದ ಆ ಚರ್ಚೆಯಲ್ಲಿ ಮತಿಬಾಬು ಮತ್ತಿತರರು ಶರತ್‌ಚಂದ್ರರನ್ನು ಛೇಡಿಸುತ್ತಾ ಹೇಳಿದ್ದು: "ಶರತ್‌ಬಾಬು, ನಿಮ್ಮ ಲೇಖನಗಳಲ್ಲಿ ನೀವು ಎಷ್ಟೇ ಸಂಪ್ರದಾಯ ವಿರೋಧಿಯಾಗಿ ತೋರಿದರೂ ವಾಸ್ತವದಲ್ಲಿ ನೀವು ಶೀಲದ ಕುರಿತಾದ ಹಿಂದೂ ಧಾರ್ಮಿಕ ಪರಿಕಲ್ಪನೆಗೆ ಬಹಳ ಬೆಲೆ ಕೊಡುತ್ತೀರಿ; ಆದ್ದರಿಂದಲೇ ನೀವು ಕಿರಣ್ಮಯಿಯ ಶೀಲ ಕೆಡದಂತೆ ನೋಡಿಕೊಂಡಿರಿ." ಶರತ್‌ಚಂದ್ರರು ಗಹಗಹಿಸಿ ನಗುತ್ತಾ ಉತ್ತರಿಸಿದರು. "ನೀವು ಈ ಪಾತ್ರವನ್ನು ಸರಿಯಾಗಿ ಅರ್ಥಮಾಡಿಕೊಂಡೇ ಇಲ್ಲ. ಈ ಪಾತ್ರವನ್ನು ಚಿತ್ರಿಸುವಾಗ ಶೀಲದ ನಿಮ್ಮ ಹಿಂದೂ ಪರಿಕಲ್ಪನೆಯನ್ನು ಎತ್ತಿಹಿಡಿಯಬೇಕೋ, ಬೇಡವೋ ಎಂಬುದನ್ನು ನಾನು ಪರಿಗಣನೆಗೆ

ತೆಗೆದುಕೊಂಡೇ ಇರಲಿಲ್ಲ. ನಾನು ಕಿರಣ್ಮಯಿಯ ಪಾತ್ರವನ್ನು ಬಹಳ ಎಚ್ಚರಿಕೆಯಿಂದ ಚಿತ್ರಿಸಿದ್ದೇನೆ." ಇದೇ ಕಾದಂಬರಿಯಲ್ಲಿ ಸರೋಜಿನಿಯನ್ನು ಸುಸಂಸ್ಕೃತ ಪರಿಸರದ ಶಿಕ್ಷಿತ, ಜ್ಞಾನಿ ಮಹಿಳೆಯಾಗಿ ಚಿತ್ರಿಸಲಾಗಿದೆ. ಉಪೇಂದ್ರನಂತಹ ಗಂಡ ಸಹ ಯಾರ ಪ್ರೇಮದ ಮಾಧುರ್ಯದಲ್ಲಿ ಮಗ್ನನಾದನೋ ಆ ಸುರಬಾಲಳ ಚಿತ್ರಣವೂ ಇಲ್ಲಿದೆ; ಹಾಸ್ಯ, ತಮಾಷೆ, ಸೌಂದರ್ಯ ಹಾಗೂ ಗಾಂಭೀರ್ಯದಿಂದ ತುಂಬಿದ ಸಾವಿತ್ರಿಯ ಪಾತ್ರವೂ ಇಲ್ಲಿದೆ. ಈ ಎಲ್ಲ ಪಾತ್ರಗಳು ಅಲ್ಲಿಲ್ಲದಿದ್ದರೆ ಕಿರಣ್ಮಯಿ ಪಾತ್ರ ಚಿತ್ರಣ ಅಷ್ಟೊಂದು ಕಷ್ಟವಾಗುತ್ತಿರಲಿಲ್ಲ." ಈ ಪಾತ್ರಗಳ ಜೊತೆಗೆ ಕಿರಣ್ಮಯಿಯನ್ನು ಚಿತ್ರಿಸುವಾಗ ಶರತ್‌ಚಂದ್ರರು ಬಹಳ ಕಾಳಜಿ ಹಾಗೂ ಎಚ್ಚರವಹಿಸಬೇಕಾಯಿತು. ಇಂತಹ ಘನತೆಯುಳ್ಳ ಪಾತ್ರವನ್ನು ಅವರು ಅಷ್ಟೊಂದು ಕಾಳಜಿಯಿಂದ ಬೆಳೆಸಿರುವಾಗ ಆಕೆಯೇನಾದರೂ ದಿವಾಕರನಿಗೆ ತನ್ನನ್ನೊಪ್ಪಿಸಿಕೊಂಡಿದ್ದರೆ ಈ ಪಾತ್ರದ ಚಿತ್ರಣ ಸಂಪೂರ್ಣವಾಗಿ ಹಾಳಾಗಿ ಹೋಗುತ್ತಿತ್ತು.

ಜ್ಞಾನ, ವಿವೇಕ ಹಾಗೂ ನೈತಿಕ ಮಟ್ಟಕ್ಕೆ ಹೋಲಿಸಿದರೆ ಕಿರಣ್ಮಯಿ ಎಂತಹ ಸ್ತ್ರೀ ಎಂದರೆ ಅವಳ ಮುಂದೆ ದಿವಾಕರ ಎಳೆಯ ಹುಡುಗನಂತೆ ಕಾಣುತ್ತಾನೆ. ಅಸಾಮಾನ್ಯ ವ್ಯಕ್ತಿತ್ವ, ಚಾರಿತ್ರ್ಯ ಹಾಗೂ ಸಂಸ್ಕೃತಿಯನ್ನು ಹೊಂದಿರುವ ಮಹಿಳೆ ಇಂತಹ ಹುಡುಗನಿಗೆ ತನ್ನನ್ನೊಪ್ಪಿಸಿಕೊಳ್ಳುವುದು ಸಾಧ್ಯವೇ? ಉಪೇಂದ್ರನ ಮೇಲೆ ಸೇಡು ತೀರಿಸಿಕೊಳ್ಳುವ ಉತ್ಕಟ ಆಕಾಂಕ್ಷೆಯಿಂದ ಅವಳು ದಿವಾಕರನನ್ನು ಮನೆಯಿಂದಾಚೆಗೆ ಸೆಳೆದುಕೊಂಡಿದ್ದೇನೋ ನಿಜವೇ. ಉಪೇಂದ್ರನಿಗೆ ದಿವಾಕರನಲ್ಲಿ ಅಪರಿಮಿತ ಪ್ರೇಮವಿದ್ದುದನ್ನು ಅವಳು ಬಲ್ಲಳು; ಆದ್ದರಿಂದ ಅವಳು ಈ ರೀತಿಯಾಗಿ ಉಪೇಂದ್ರನನ್ನು ಪ್ರತಿರೋಧಿಸಲು ಯತ್ನಿಸಿದಳು. ಅಂತಿಮವಾಗಿ ಉಪೇಂದ್ರನಿಗಿಂತ ಹೆಚ್ಚಾಗಿ ತಾನೇ ನೋವುಣ್ಣಬೇಕಾಯಿತೆಂಬುದನ್ನು ಅವಳು ಮನಗಂಡಳು. ಅವಳು ತಪ್ಪೆಸಗಿದ್ದು ನಿಜ. ಆದರೆ ಆಕೆ ನವಿರಾದ ಅಭಿರುಚಿಯುಳ್ಳ, ಘನತೆಯ ಉನ್ನತ ಪ್ರಜ್ಞೆಯುಳ್ಳ ಸ್ತ್ರೀ. ತತ್ಪರಿಣಾಮವಾಗಿ ತನ್ನ ಕೊನೆಯ ದಿನಗಳ ತನಕ ಆಕೆ ತನ್ನ ಕೃತ್ಯಗಳ ಫಲಕ್ಕೆ ಅಂತಃಸಾಕ್ಷಿಯೊಂದಿಗೆ ಮುಖಾಮುಖಿಯಾಗಬೇಕಾಯಿತು. ಉಪೇಂದ್ರನ ಮೇಲೆ ಹುಟ್ಟಿದ ಸೇಡಿನ ಭಾವನೆಯಿಂದ ದಿವಾಕರನಲ್ಲಿ ಪ್ರೀತಿಯಿದೆ ಎಂಬಂತೆ ತೋರಿಸುತ್ತಾ ಅವನಲ್ಲಿ ಹಂಬಲವನ್ನು ಹಾಗೂ ದೈಹಿಕತೃಷೆಯನ್ನು ಬಡಿದೆಬ್ಬಿಸಿದ್ದರಿಂದ, ಅದೇ ದಿವಾಕರನಿಂದ ತನ್ನ ನಾರೀತ್ವದ ಘನತೆ ಗೌರವಗಳನ್ನು ಸಂರಕ್ಷಿಸಿಕೊಳ್ಳುವಲ್ಲಿ ಆಕೆ ಒಳಗೊಳಗೇ ಬೆಂದುಹೋದಳು. ಆದರೆ ಎಂದಿಗೂ ಅವಳು ತನ್ನ ನಾರೀತ್ವವು ಮಣ್ಣು ಪಾಲಾಗಲು ಬಿಡಲಿಲ್ಲ. ಆದ್ದರಿಂದಲೇ ಶರತ್‌ಚಂದ್ರರು ಸ್ತ್ರೀಯ ಶೀಲ ಕಲಂಕಿತವಾಯಿತೋ ಇಲ್ಲವೋ ಎಂಬುದು ತನ್ನ ಲೆಕ್ಕಾಚಾರದಲ್ಲೇ ಇರಲಿಲ್ಲ ಎಂದು ಹಾಸ್ಯದಿಂದ ಹೇಳಿದ್ದು. ಅಷ್ಟೊಂದು ಕಾಳಜಿ ಹಾಗೂ ಎಚ್ಚರಿಕೆಯಿಂದ ಚಿತ್ರಿಸಿದ ಕಿರಣ್ಮಯಿಯ ಪಾತ್ರದ ನಾರೀತ್ವ ಮಾತ್ರವೇ ಅವರಿಗೆ ಏಕೈಕ ಪರಿಗಣನೆಯಾಗಿತ್ತು.

...ಶರತ್‌ಚಂದ್ರರು ರಮಾ, ಕಿರಣ್ಮಯಿ ಹಾಗೂ ಸಾವಿತ್ರಿಯಂತಹ ಪಾತ್ರಗಳ ಸದಭಿರುಚಿಯ ಚಿತ್ರಣ ನೀಡಿ ಓದುಗರಲ್ಲಿ ವೇದನೆ ಮತ್ತು ಸಹಾನುಭೂತಿ ಮೂಡಿಸಿ ಅಂದಿನ ಸಮಾಜದ ಮೌಢ್ಯತುಂಬಿದ, ಸಾಂಪ್ರದಾಯಿಕ ಹಾಗೂ ಸಂಕುಚಿತ ನಿಲುವನ್ನು ಬದಲಾಯಿಸುವ ಅಭೀಪ್ಸೆ ಹೊಂದಿದ್ದರು. ಅವರು

ಕೇಳಬಯಸಿದ ಪ್ರಶ್ನೆಯೆಂದರೆ: "ಸ್ತ್ರೀಯರು ಕಿರಣ್ಮಯಿಯಂತಿದ್ದರೆ ನೀವು ಇಷ್ಟಪಡುತ್ತೀರಾ? ಮಹಿಳೆಯರು ಹೀಗೆ ಸುಸಂಸ್ಕೃತರೂ, ಪಾಂಡಿತ್ಯವುಳ್ಳವರೂ ಆಗಿದ್ದರೆ ಹೇಗಿರುತ್ತದೆ? ನಿಮಗದು ಇಷ್ಟವಿದ್ದರೆ ಈ ಸಮಾಜದಲ್ಲಿ ಅವರನ್ನು ನೀವು ಹೇಗೆ ಕಾಪಾಡುತ್ತೀರಿ? ನೀವು ನಿಮ್ಮೊಂದಿಗಿರುವ ಸ್ತ್ರೀಯರನ್ನು ಇಷ್ಟಪಡುತ್ತೀರೋ ಅಥವಾ ಸಾವಿತ್ರಿಯಂತೆ ವರ್ತಿಸುವ ಸ್ತ್ರೀಯರನ್ನೋ? ನೀವು ಸಾವಿತ್ರಿಯಂತಹ ಸ್ತ್ರೀಯರನ್ನು ಮೆಚ್ಚಿಕೊಳ್ಳುವುದಾಗಿದ್ದಲ್ಲಿ, ಅಂಥ ಹೆಣ್ಣುಮಕ್ಕಳು ಸಮಾಜದಲ್ಲಿ ಮೂಡಿ ಬಂದಾಗ ಅವರನ್ನು ನೀವು ಹೇಗೆ ರಕ್ಷಿಸುತ್ತೀರಿ? ಆದ್ದರಿಂದ ಒಂದೋ ನೀವು ಆಧುನಿಕತೆಯಿಲ್ಲದ ಹಿಂದೂ ಸಂಪ್ರದಾಯಗಳನ್ನು ಅನುಸರಿಸುವ, ಸ್ತ್ರೀಯರೊಂದಿಗೆ ತೃಪ್ತರಾಗಿ ಉಳಿಯಿರಿ ಅಥವಾ ಈ ಸಮಾಜವನ್ನು ಮೂಲಭೂತವಾಗಿ, ಸಂಪೂರ್ಣವಾಗಿ ಬದಲಾಯಿಸಿ. ಮಹಿಳೆಯರ ಶಿಕ್ಷಣ, ಅವರ ವಿಮುಕ್ತಿ, ಅವರ ಆತ್ಮಗೌರವ ಮತ್ತು ವ್ಯಕ್ತಿತ್ವದ ಬೆಳವಣಿಗೆ ಇವೆಲ್ಲಾ ಪುರುಷರಿಗೆ ತಮ್ಮ ಸ್ವಂತ ಉದ್ಧಾರಕ್ಕಾಗಿಯೇ ಬೇಕಾಗಿದೆ. ಆದರೆ ಅವರು ಮೂರ್ಖರೂ, ಅಲ್ಪರೂ ಆಗಿದ್ದು ತಮ್ಮ ಒಳಿತನ್ನು ತಾವು ಅರಿಯಲಾರದವರಾಗಿದ್ದಾರೆ. ಆದ್ದರಿಂದಲೇ ಮೂಢನಂಬಿಕೆಯ ಹಿಡಿತದಲ್ಲಿರುವ ಪುರುಷರು ಮಹಿಳಾ ವಿಮುಕ್ತಿಯ ಹೋರಾಟವನ್ನು ವಿರೋಧಿಸುತ್ತಾರೆ. ಹಾಗೆಯೇ ಶಿಕ್ಷಿತ ಪುರುಷರು ಅವಕಾಶ ದೊರೆತ ಕೂಡಲೇ ಮಹಿಳಾ ವಿಮುಕ್ತಿಯ ಬಗ್ಗೆ ಉತ್ಸಾಹದ ಭಾಷಣ ಮಾಡಿ ಸಭೆಗಳನ್ನು ಮಂತ್ರಮುಗ್ಧ ಮಾಡಿದರೂ ತಮ್ಮ ಪತ್ನಿಯರನ್ನು ನಾಲ್ಕು ಗೋಡೆಗಳೊಳಗೆ ಬಂಧಿಯಾಗಿರಿಸಲು ಕಾಯುತ್ತಿರುತ್ತಾರೆ – ಎಂತಹ ವಿಚಿತ್ರ ದ್ವಂದ್ವವಿದು! ಆದ್ದರಿಂದ ಮಹಿಳೆಯರ ಅವಶ್ಯಕತೆ ಒಂದು ಕಡೆ ಇರಲಿ, ಪುರುಷರ ಸ್ವಂತ ಬೆಳವಣಿಗೆ ಹಾಗೂ ಪ್ರಗತಿಗಾಗಿ, ಅವರದೇ ಸ್ವಾತಂತ್ರ್ಯಕ್ಕಾಗಿ, ಅವರ ಅಭಿರುಚಿ ಉತ್ತಮಗೊಳ್ಳಲಿಕ್ಕಾಗಿ ಹಾಗೂ ಅವರ ಸಾಂಸ್ಕೃತಿಕ ಮಟ್ಟ ಮೇಲೇರಲಿಕ್ಕಾಗಿ ಪುರುಷರಿಗೆ ಮಹಿಳಾ ವಿಮುಕ್ತಿ, ಮಹಿಳಾ ಶಿಕ್ಷಣ, ನಾರೀತ್ವ ಹಾಗೂ ಸಂಸ್ಕೃತಿಯ ಬೆಳವಣಿಗೆ ಅವಶ್ಯಕವಿದೆ ಎಂದು ಶರತ್‌ಚಂದ್ರರು ಹೇಳುತ್ತಾರೆ. ಶರತ್‌ಚಂದ್ರರು ಮಾತನಾಡುವ ಧಾಟಿ ಇದು ಹಾಗೂ ಕೇಳುವ ಪ್ರಶ್ನೆಗಳ ರೀತಿ ಇದು.

...ರಮಾ, ಕಿರಣ್ಮಯಿ, ಸಾವಿತ್ರಿ ಹಾಗೂ ರಾಜಲಕ್ಷ್ಮಿಯರ ಕುರಿತು ಅನೇಕ ವಿಮರ್ಶಕರು, ಶರತ್‌ಚಂದ್ರರ ಸಾಹಿತ್ಯದಲ್ಲಿ ದೈಹಿಕ ಸಂಬಂಧವನ್ನು ನಿರಾಕರಿಸಲಾಗಿದೆ ಎಂಬ ಟೀಕೆಯನ್ನು ಮಾಡುತ್ತಾರೆ. ಅವರು ಶರತ್‌ಚಂದ್ರರು ಮಡಿವಂತಿಕೆ ಹೊಂದಿದ್ದು ದೈಹಿಕ ಸಂಪರ್ಕವಿಲ್ಲದ ಪ್ರೇಮವನ್ನು (ಪ್ಲಾಟೊನಿಕ್ ಲವ್) ಪ್ರತಿಪಾದಿಸುತ್ತಾರೆ ಎಂದು ಆರೋಪಿಸುತ್ತಾರೆ. ತಮಾಷೆ ನೋಡಿ! ಈ ಅತ್ಯಾಧುನಿಕ ವಿಮರ್ಶಕರು ಅವರಿಗೆ ಮಡಿವಂತಿಕೆಯ ಹಣೆಪಟ್ಟಿ ಅಂಟಿಸಿದರೆ, ಅಂದಿನ ಮಡಿವಂತ, ಸಾಂಪ್ರದಾಯಿಕ ಹಿಂದೂ ಸಮಾಜ ಅವರನ್ನು ಸಡಿಲ ನೈತಿಕತೆಯವರೆಂದು ಆರೋಪಿಸಿತು. ಇವೆರಡೂ ಉದ್ದಾಮ ಪಂಡಿತರ ಗುಂಪುಗಳೇ! ಸ್ವಾತಂತ್ರ್ಯ ಕಾಲದ ಬಂಗಾಲದಲ್ಲಿ ಪೆಟ್ಟಿ–ಬೂರ್ಜ್ವಾ ಕ್ರಾಂತಿಕಾರಿ ಪ್ರಭಾವ ಗಾಢವಾಗಿದ್ದಾಗ ಶರತ್‌ಚಂದ್ರರು ನಮ್ಮ ಹೃದಯಮಂದಿರದಲ್ಲಿ ಆಸೀನರಾಗಿದ್ದರು. ಅಂದಿನ ದಿನಗಳಲ್ಲಿ ನಾವು ಶರತ್ ಸಾಹಿತ್ಯವನ್ನು ಬಹಳ ಉತ್ಕಟತೆಯಿಂದ ಓದಿದೆವು. ಈಗಲೂ ಅವಕಾಶ ದೊರೆತಾಗಲೆಲ್ಲಾ ನಾನು ಅವರ ಕೃತಿಗಳನ್ನು ಓದುತ್ತೇನೆ. ಅಲ್ಲಿನ ಸಂಭಾಷಣೆಗಳು ಇಂದಿಗೂ ನನ್ನ ಮನಸ್ಸಿನಲ್ಲಿ ಹಸಿರಾಗಿ ಉಳಿದಿವೆ. 'ಶ್ರೀಕಾಂತ' ಕಾದಂಬರಿಯ

ನಾಲ್ಕನೇ ಭಾಗದಲ್ಲಿ ಕಥಾನಾಯಕಿ ರಾಜಲಕ್ಷ್ಮಿ ನಾಯಕನಾದ ಶ್ರೀಕಾಂತನೊಂದಿಗೆ ಒಮ್ಮೆ ಹೀಗೆನ್ನುತ್ತಾಳೆ. "ನಿಮ್ಮನ್ನು ನಾನು ಯಾವುದೇ ಬೆಲೆ ತೆರದೆ ಹಾಗೇ ಪಡೆಯುತ್ತೇನೆಯೇ? ಇದರ ಋಣ ತೀರಿಸದೆ ಇರುತ್ತೇನೆಯೇ? ನಾನು ಪ್ರತಿಯಾಗಿ ಏನನ್ನೂ ಕೊಡದೆ ಇರುತ್ತೇನೆಯೇ? ನಾನು ನಿಮ್ಮ ಜೀವನದಲ್ಲಿ ನಿಜವಾಗಿ ಬಂದಿದ್ದೇನೆ ಎಂಬ ನೆನಪಿಗೆ ಯಾವ ಕುರುಹನ್ನೂ ಉಳಿಸದೆ ಹೋಗುತ್ತೇನೆಯೇ? ಈ ಪ್ರಪಂಚ ಬಿಟ್ಟು ಹೋಗುವಾಗ ನಿಷ್ಫಲವಾಗಿ ಹೋಗಲೇ, ಖಂಡಿತಾ ಇಲ್ಲ!" ಇದನ್ನು ಕೇಳಿ ಶ್ರೀಕಾಂತನಿಗೆ ಅವಳ ಬಗ್ಗೆ ಗೌರವ, ಪ್ರೇಮ, ಮಮತೆಗಳು ತುಂಬಿ ಬಂದವು. ಈ ಅಭಿವ್ಯಕ್ತಿಯ ಅಂತರಾರ್ಥ ಏನು? ಈ ಸೂಕ್ಷ್ಮ ಅಭಿವ್ಯಕ್ತಿ ಜನಸಾಮಾನ್ಯರಿಗೋ ಪಂಡಿತರಿಗೋ? ಈ ಸೂಕ್ಷ್ಮ ಸಂಕೇತವನ್ನು ಗ್ರಹಿಸಲು ಹಾಗೂ ಅತ್ಯಂತ ಕಲಾತ್ಮಕ ಸ್ವರೂಪದ ಈ ಅಭಿವ್ಯಕ್ತಿಯನ್ನು ಅರಿಯಲು ವಿಫಲರಾದವರು ಎಂತಹ ವಿದ್ವಾಂಸರು? ನವಿರಾದ ಅಭಿರುಚಿಯ ಪ್ರಜ್ಞೆಯುಳ್ಳವರು ಮಾತ್ರ ಇದನ್ನು ಗ್ರಹಿಸಬಲ್ಲರು. ದೈಹಿಕ ಸಂಬಂಧವನ್ನು ಇಲ್ಲಿ ನಿರಾಕರಿಸಲಾಗಿದೆಯೇ? ಇಲ್ಲಿ ಪ್ರೇಮ ದೈಹಿಕ ಸಂಪರ್ಕರಹಿತವಾಗಿದೆಯೇ? ಇದೇ ಕಾದಂಬರಿಯಲ್ಲಿ ಇನ್ನೊಂದೆಡೆ ರಾಜಲಕ್ಷ್ಮಿ ಶ್ರೀಕಾಂತನಿಗೆ ಹೇಳುತ್ತಾಳೆ: "ನಿನ್ನೆ ಮಾತನಾಡುತ್ತಿದ್ದಂತೆ ನೀವು ನಿದ್ದೆ ಹೋಗಿಬಿಟ್ಟಿರಿ. ನನ್ನ ಕೊರಳ ಸುತ್ತ ಇದ್ದ ನಿಮ್ಮ ಕೈಯನ್ನು ಬಿಡಿಸಿಕೊಂಡು ನಾನು ನಿಮ್ಮ ಬಳಿಯೇ ಕುಳಿತೆ. ಬೆಳಿಗ್ಗೆ ಎದ್ದು ಹೋದೆ. ಅದೃಷ್ಟವಶಾತ್ ಕುಂಭಕರ್ಣನನ್ನು ನಿದ್ದೆಯಿಂದ ಅಷ್ಟು ಸುಲಭವಾಗಿ ಎಬ್ಬಿಸಲಾಗದು. ಇಲ್ಲದಿದ್ದರೆ ಮೋಹದಿಂದ ನಾನು ನಿಮ್ಮನ್ನು ಎಬ್ಬಿಸಿಯೇ ಬಿಡುವುದರಲ್ಲಿದ್ದೆ." ಮತ್ತೆ ಇನ್ನೇನನ್ನೂ ಆಕೆ ಹೇಳಲಿಲ್ಲ. ಸಾಹಿತ್ಯಿಕ ಸಾಮರ್ಥ್ಯ ಬರೆಯುವುದರಲ್ಲಿ ಮಾತ್ರ ಅಡಗಿಲ್ಲ ಎಂಬುದನ್ನು ಶರತ್‌ಚಂದ್ರರೇ ಸ್ವತಃ ಹೇಳಿದ್ದಾರೆ. ಲೇಖನಿಯನ್ನು ಹಿಡಿತದಲ್ಲಿಟ್ಟುಕೊಂಡು ಸರಿಯಾದ ಸಮಯದಲ್ಲಿ ಅದನ್ನು ನಿಲ್ಲಿಸುವುದೂ ಸಹ ಲೇಖಕನ ಒಂದು ಬಹುಮುಖ್ಯ ಸಾಮರ್ಥ್ಯ. ಉನ್ನತ ಕಲಾಸ್ವರೂಪ ಹಾಗೂ ಸೌಂದರ್ಯಾಭಿರುಚಿಯನ್ನು ಸೃಷ್ಟಿಸಲು ಸರಿಯಾಗಿ ಯಾವಾಗ ಮತ್ತು ಎಲ್ಲಿ ನಿಲ್ಲಿಸಬೇಕೆಂಬುದನ್ನು ಲೇಖಕ ತಿಳಿದಿರಬೇಕು. ಕೀಳು ಅಭಿರುಚಿಯುಳ್ಳ ಜನ ರಾಜಲಕ್ಷ್ಮಿ ಏನು ಮಾಡಿದಳೆಂಬುದರ ವರ್ಣನೆಯನ್ನು ಪಡೆಯದೆ ತೃಪ್ತಿ ಹೊಂದಲಾರರು. ಆದರೆ ನಿಜವಾದ ಅಭಿರುಚಿಯುಳ್ಳವರು ಇಂತಹ ವರ್ಣನೆಯ ಕಲ್ಪನೆಯಿಂದಲೇ ಜಿಗುಪ್ಸೆ ಹೊಂದುತ್ತಾರೆ. ಶರತ್‌ಚಂದ್ರರು ಸದಾಕಾಲವೂ ಉತ್ತಮ ಕಲೆ ಹಾಗೂ ಅಭಿರುಚಿಯಿಂದಲೇ ಕೃತಿಗಳನ್ನು ಸೃಷ್ಟಿಸಿದರು. ಅವರ ಲೇಖನಿ ಎಂದೂ ಕೀಳು ಅಭಿರುಚಿಯನ್ನು ತಣಿಸಲೆತ್ನಿಸಲಿಲ್ಲ.

'ವೈಕುಂಠನ ಮೃತ್ಯುಪತ್ರ' ಒಂದು ಸರಳ ಕಥಾವಸ್ತುವುಳ್ಳ ಶರತ್‌ಚಂದ್ರರ ಕಥೆ. ಪಂಡಿತೋತ್ತಮರ ಅಭಿಪ್ರಾಯದಲ್ಲಿ ಇದೊಂದು ಯಾವುದೇ ವಿಚಾರ ಪ್ರಚೋದನೆ ಮಾಡುವಂತಹ ವಿಷಯವಿಲ್ಲದ ಬರಿಯ ಕಥೆ. ಆದರೆ ನನ್ನ ಅಭಿಪ್ರಾಯವನ್ನು ಹೇಳಬೇಕೆಂದರೆ ನಾನದನ್ನು ಪ್ರತಿಬಾರಿ ಓದುವಾಗಲೂ ಕಥೆಯಲ್ಲಿ ಮುಳುಗಿಹೋದಾಗ ನನ್ನಲ್ಲಿ ಉಂಟಾಗುವ ಭಾವೋದ್ವೇಗವನ್ನು ನಾನು ಹಿಡಿತದಲ್ಲಿಟ್ಟುಕೊಳ್ಳಲಾರೆ. ಏಕೆಂದರೆ ಈ ಕಥೆ ನಾವು ಕಳೆದುಕೊಂಡ, ಮತ್ತೆ ಪಡೆಯಲು ಆಕಾಂಕ್ಷಿಸುವ ಆದರೆ ಪಡೆಯಲಾರದ ವಸ್ತುವಿನ ಬಗ್ಗೆ ಇದೆ. ಈ ಕಥೆಯಲ್ಲಿ ಹಿಂದಿನ ಕಾಲದ ಅಣ್ಣ ತಮ್ಮಂದಿರ ಸಂಬಂಧದ ಒಂದು ನೈಜವಾದ ಸುಂದರವಾದ

ಚಿತ್ರಣವಿದೆ. ನಮ್ಮ ಹಳೆಯ ಸಮಾಜದಲ್ಲಿ ಅದೆಷ್ಟೇ ಕೆಟ್ಟ ಅಂಶಗಳಿದ್ದರೂ ಕೆಲವು ಒಳ್ಳೆಯ ಅಂಶಗಳಿದ್ದದ್ದೂ ಸಹ ನಿಜ. ಊಳಿಗಮಾನ್ಯ ಆರ್ಥಿಕತೆಯ ಅಂದಿನ ದಿನಗಳಲ್ಲಿ ಅವಿಭಕ್ತ ಕುಟುಂಬಗಳಲ್ಲಿ ಸಹೋದರ ಸಹೋದರಿಯರ ನಡುವೆ ಸುಂದರ, ಮನೋಜ್ಞ ಸಂಬಂಧಗಳು ಕಂಡುಬರುತ್ತಿದ್ದವು. ಈಗ ಊಳಿಗಮಾನ್ಯ ಆರ್ಥಿಕತೆ ಇಲ್ಲ, ಅವಿಭಕ್ತ ಕುಟುಂಬಗಳು ಛಿದ್ರವಾಗಿವೆ, ಗಂಡಹೆಂಡಿರೇ ಕೇಂದ್ರ ಬಿಂದುವಾಗಿರುವ ಕುಟುಂಬಗಳು ಹೊರಹೊಮ್ಮಿವೆ. ಇವೆಲ್ಲವೂ ಸಾಮಾಜಿಕ ಪ್ರಗತಿಯ ಗತಿಯಲ್ಲಿ ನಡೆದಿವೆಯೆಂಬುದಂತೂ ಸರಿಯೇ. ಆದರೆ ಆ ಅವಿಭಕ್ತ ಕುಟುಂಬದಲ್ಲಿನ ಸಂಬಂಧಗಳಲ್ಲಿ ಇರುತ್ತಿದ್ದ ಭಾವೋದ್ವೇಗ ಮತ್ತು ತುಮುಲಗಳ ಸಂಘರ್ಷದಿಂದ ಪ್ರವಹಿಸುವ ಸೌಂದರ್ಯವನ್ನು, ನವಿರಾದ ಮಾಧುರ್ಯವನ್ನು ಯಾರಾದರೂ ಕಲಾತ್ಮಕವಾಗಿ ಚಿತ್ರಿಸಿದರೆ ಇಂದಿಗೂ ಸಹ ನಾವು ಅದರ ಸ್ವಾದವನ್ನು ಆನಂದಿಸಬಹುದು. ಗೋಕುಲನ ಪಾತ್ರವನ್ನು ಅರಿತ ಮೇಲೆ ನಮಗೂ ಅಂತಹ ಸಹೋದರನಿದ್ದರೆ ಎಂದು ನಾವೆಲ್ಲರೂ ಬಯಸುತ್ತೇವೆ. ಆತ ಅಶಿಕ್ಷಿತನಾಗಿದ್ದರೂ, ಅಜ್ಞಾನಿಯಾಗಿದ್ದರೂ ಪರವಾಗಿಲ್ಲ ಎನ್ನಿಸುತ್ತದೆ.

ಗೋಕುಲನ ಚಿತ್ರಣದಿಂದ ಶರತ್‌ಚಂದ್ರರು ಬೆಳಕು ಚೆಲ್ಲಬಯಸುವ ಇನ್ನೊಂದು ಪ್ರಮುಖ ಅಂಶವೆಂದರೆ ಸಂಸ್ಕೃತಿಯ ನಿಜವಾದ ಸಾರ ಮತ್ತು ಸತ್ವವನ್ನು ಕೇವಲ ಪುಸ್ತಕ ಜ್ಞಾನ ಹಾಗೂ ವಿಶ್ವವಿದ್ಯಾನಿಲಯದ ಪದವಿಗಳಿಂದ ಪಡೆಯಲಾಗದು ಎಂಬುದು. ಗೋಕುಲನ ತಮ್ಮ ವಿನೋದ ವಿಶ್ವವಿದ್ಯಾನಿಲಯದಲ್ಲಿ ಪ್ರಥಮ ದರ್ಜೆ ಪಡೆದಿದ್ದಾನೆ, ಚಿನ್ನದ ಪದಕವನ್ನೂ ಗಳಿಸಿದ್ದಾನೆ, ಇದರ ಬಗ್ಗೆ ಗೋಕುಲನಿಗೆ ಬಹಳ ಅಭಿಮಾನವಿದೆ. ಆದರೂ ಇವೆಲ್ಲ ಇದ್ದರೂ ವಿನೋದ ಸಂಸ್ಕೃತಿಯ ಸಾರವನ್ನು ಗ್ರಹಿಸಲು ಸಮರ್ಥನಾಗಿದ್ದಾನೆಯೇ? ಅವನಲ್ಲಿ ಎಷ್ಟು ತಿಳುವಳಿಕೆಯಿದೆ? ಆದರೆ ಗೋಕುಲ ಶಿಕ್ಷಣವಿಲ್ಲದೆ ಇರುವುದರಿಂದ ಸ್ವಲ್ಪ ಎಡವಟ್ಟಾಗಿ ಮಾತನಾಡಿದರೂ ಸಂಸ್ಕೃತಿಯ ನೈಜ ಸಾರವನ್ನು ಗ್ರಹಿಸಿದ್ದಾನೆ ಹಾಗೂ ಆತ್ಮಗೌರವವನ್ನು ಹೊಂದಿದ್ದಾನೆ. ಆದ್ದರಿಂದಲೇ ತನ್ನ ತಾಯಿ ಮತ್ತು ತಮ್ಮನನ್ನು ಹೇಗೆ ಗೌರವಿಸಬೇಕು, ಇತರರನ್ನು ಹೇಗೆ ಗೌರವಿಸಬೇಕು ಎಂಬುದು ಅವನಿಗೆ ತಿಳಿದಿದೆ. ಆದರೆ ಪದವೀಧರನಾಗಿದ್ದರೂ ವಿನೋದ ಇದನ್ನು ಅರಿತಿಲ್ಲ.

ಗೋಕುಲನ ಪಾತ್ರ ಚಿತ್ರಣದ ಮೂಲಕ ಶರತ್‌ಚಂದ್ರರು ಇದೇ ಸತ್ಯವನ್ನು ಮುಂದಿಡಲು ಯತ್ನಿಸಿದ್ದಾರೆ. ಅದರ ಜೊತೆಗೆ ನಿಜವಾದ ಭ್ರಾತೃತ್ವ – ಅಣ್ಣತಮ್ಮಂದಿರ ಸಂಬಂಧ ಎಂದರೆ ಏನು ಎಂಬುದನ್ನು ಸಹ ಚಿತ್ರಿಸಲು ಬಯಸಿದ್ದಾರೆ. ಈ ಕಥೆಯಲ್ಲಿ ಚಿತ್ರಿತವಾದ ಇಂತಹ ಭ್ರಾತೃತ್ವದ ಸೌಂದರ್ಯ ಹಾಗೂ ಮಾಧುರ್ಯಗಳು ಅರಳಿಕೊಂಡಿದ್ದಂತಹ ಆ ಕಳೆದುಹೋದ ಸಾಮಾಜಿಕ ಹಂದರ ಎಂದಿಗೂ ಮರಳಿಬರಲಾರದೆಂಬುದಂತೂ ನಿಜ. ಇಂದಿನ ಬದಲಾದ ಸಮಾಜದಲ್ಲಿ ಅವಿಭಕ್ತ ಕುಟುಂಬದ ಬದಲಿಗೆ ವೈಯಕ್ತಿಕ ಕುಟುಂಬಗಳು ಬಂದಿವೆ. ಆದರೆ ಅಣ್ಣತಮ್ಮಂದಿರ ನಡುವೆ ಇದ್ದ ಆ ಕೋಮಲವಾದ, ಸೊಗಸಾದ ಸಂಬಂಧ ಏಕೆ ಉಳಿಯಬಾರದು? ಹಾಗೆ ನೋಡಿದರೆ ಒಬ್ಬರ ಮೇಲೆ ಇನ್ನೊಬ್ಬರು ಆರ್ಥಿಕವಾಗಿ ಅವಲಂಬಿತವಾಗಿಲ್ಲದಿರುವಾಗ ಪ್ರೇಮ ಮತ್ತು ಮಮತೆಯ ಭಾವನೆ ಇನ್ನೂ ಉನ್ನತ ಸ್ವರೂಪವನ್ನು

ಪಡೆಯಬೇಕಲ್ಲವೇ? ಹಾಗಿದ್ದಲ್ಲಿ ಕ್ಷುಲ್ಲಕ ಸ್ವಾರ್ಥ ಮತ್ತು ಹಿಂದಿಗಿಂತಲು ಕೀಳಾದ ಅಭಿರುಚಿ ಈಗ ಏಕೆ ಬಂದಿದೆ? ಅವನ ಮೇಲೆ ಅವಲಂಬಿತರಾದವರು ಸಹ ಗೋಕುಲನನ್ನು ಸಾವಿರಾರು ಬಾರಿ ಅಪಮಾನಕ್ಕೀಡು ಮಾಡಿದರೂ ಆತ ಎಂದಿಗೂ ಇತರರನ್ನು ಅವಮಾನಿಸಲಾರದ ವ್ಯಕ್ತಿ ಎಂಬುದಾಗಿ ಶರತ್‌ಚಂದ್ರರು ಚಿತ್ರಿಸಿದ್ದಾರೆ. ಅವನು ನಿಜವಾಗಿಯೂ ಮನುಷ್ಯರನ್ನು ಪ್ರೀತಿಸುತ್ತಾನೆ, ಅಶಿಕ್ಷಿತನಾದರೂ ಇತರರನ್ನು ಪ್ರೀತಿಸುವುದನ್ನು ಆತ ಬಲ್ಲ. ಇದು ಅವನು ಎಂಥ ನೈತಿಕತೆ ಮತ್ತು ಸಂಸ್ಕೃತಿಯ ಅಂತಃಸತ್ವವನ್ನು ಗಳಿಸಿದ್ದಾನೆ ಎಂಬುದನ್ನು ಎತ್ತಿ ತೋರಿಸುತ್ತದೆ. ತನ್ನ ತಾಯಿಯ ಗೌರವ, ಘನತೆಗಳನ್ನು ರಕ್ಷಿಸುವುದು ಹೇಗೆ ಎಂಬುದು ಅವನಿಗೆ ಗೊತ್ತು. ಅವನ ಮಾವ ಎಷ್ಟೇ ಸತತವಾಗಿ ಪ್ರಯತ್ನಿಸಿದರೂ ತನ್ನ ತಾಯಿಯ ಇಚ್ಛೆಗೆ ವಿರುದ್ಧವಾಗಿ ಗೋಕುಲ ಏನನ್ನೂ ಮಾಡಲು ಸಿದ್ದನಾಗಲಿಲ್ಲ. ಮಾವ ಅವನನ್ನು ಪ್ರಚೋದಿಸಲೆತ್ನಿಸಿ ವಿಫಲನಾದ. ಗೋಕುಲನ ಪತ್ನಿಗೂ ಅದು ಸಾಧ್ಯವಾಗಲಿಲ್ಲ. ಆದರೆ ತಮ್ಮ ಪತ್ನಿಯರನ್ನು ಸಂತೋಷಪಡಿಸಲೋಸುಗ ಶಿಕ್ಷಿತರಾಗಿದ್ದು, ರವೀಂದ್ರ ಸಂಸ್ಕೃತಿಯ ವಕ್ತಾರರೆಂದು ಕರೆಸಿಕೊಳ್ಳುವ ಅನೇಕರು ಇಂದು ಏನು ಮಾಡಲೂ ಹೇಸುವುದಿಲ್ಲ! ಆದರೆ ಇಲ್ಲಿ ನೋಡಿ ಈ ಅಶಿಕ್ಷಿತ ವ್ಯಕ್ತಿ, ಅವನಿಂದ ಏನನ್ನು ಬೇಕಾದರೂ ಸುಲಭವಾಗಿ ಮಾಡಿಸಬಹುದೆಂಬಂತೆ ಮೇಲ್ನೋಟಕ್ಕೆ ಕಂಡರೂ ವಾಸ್ತವದಲ್ಲಿ ಅದೆಂಥ ಉತ್ಕೃಷ್ಟವಾದ ಘನತೆಯ ಪ್ರಜ್ಞೆಯನ್ನು ಹೊಂದಿದ್ದಾನೆ. ಆತ ಇಂಥ ವಿಷಯದಲ್ಲಿ ಒಂದಿಂಚು ಕದಲುವಂತೆ ಮಾಡಲು ಸಹ ಯಾರಿಗೂ ಸಾಧ್ಯವಿಲ್ಲ.

...ಗೋಕುಲನ ಮಾವ ತನ್ನ ಮಗಳ ನೆರವಿನಿಂದ ಗೋಕುಲನ ಮನ ಒಲಿಸಿ ಅವನಿಂದ ಬೀಗದಕೈ ವಶಪಡಿಸಿಕೊಂಡು ಹಳೆಯ ಕೆಲಸಗಾರ ಚಕ್ರವರ್ತಿಯನ್ನು ಅಂಗಡಿಯಿಂದಾಚೆಗೆ ಹಾಕುವುದಕ್ಕೆ ತೀರ್ಮಾನಿಸಿದ. ತಾವು ಹಾಳಾಗುವುದನ್ನು ತಪ್ಪಿಸಲು ಚಕ್ರವರ್ತಿಯನ್ನು ಹೊರಹಾಕುವುದು ಅನಿವಾರ್ಯ ಎಂದು ಗೋಕುಲನನ್ನು ನಂಬಿಸಿ ತನ್ನ ಕುತಂತ್ರದಲ್ಲಿ ಅವನು ಇನ್ನೇನು ಯಶಸ್ವಿಯಾಗುವುದರಲ್ಲಿದ್ದ. ತನ್ನ ಅಜ್ಞಾನ ಹಾಗೂ ಮುಗ್ಧತೆಯಿಂದ ಈ ಕುತಂತ್ರಕ್ಕೆ ಬಲಿಯಾದ ಗೋಕುಲ, ಇದನ್ನು ವಿರೋಧಿಸಿದ ತನ್ನ ತಾಯಿಯ ಬಗ್ಗೆ ಹೀಗೆಂದುಕೊಂಡ: 'ಈಕೆ ನನ್ನ ಮಲತಾಯಿಯೆಂಬುದಂತೂ ನಿಜ. ಆಕೆ ನನ್ನ ಒಳಿತನ್ನು ಹೇಗೆ ಆಶಿಸುತ್ತಾಳೆ?' ಮಾವ ಮತ್ತು ಹೆಂಡತಿಯ ಉಪದೇಶದಂತೆ ಅವನು ಚಕ್ರವರ್ತಿಯಿಂದ ಅಂಗಡಿಯ ಬೀಗದ ಕೈ ವಶಪಡಿಸಿಕೊಂಡ. ಗೋಕುಲನ ಮಾವನಿಗೆ ಈಗ ಎಲ್ಲವೂ ಸರಿಹೋಗಿದೆ, ಗೋಕುಲ ಈಗ ಸಂಪೂರ್ಣವಾಗಿ ತನ್ನ ಹಿಡಿತದಲ್ಲಿದ್ದಾನೆ ಎಂಬುದು ಖಚಿತವಾಯಿತು. ಗೋಕುಲನ ಪತ್ನಿಯೂ ಬಹಳ ಉಲ್ಲಾಸದಿಂದಿದ್ದಳು. ಅವಳೂ ಸಹ ತನ್ನ ಗಂಡನನ್ನು ಅವನ ತಾಯಿಯ ಕಪಿಮುಷ್ಟಿಯಿಂದ ಮುಕ್ತಗೊಳಿಸಿ ಕೊನೆಗೂ ಗಂಡನ ಮೇಲೆ ತನ್ನ ಹತೋಟಿಯನ್ನು ಸ್ಥಾಪಿಸಿಕೊಂಡಿದ್ದೇನೆ ಎಂದೇ ಭಾವಿಸಿದಳು. ತನ್ನ ಗೆಲುವಿನಿಂದ ಉಬ್ಬಿಹೋದಳು.

ಆದರೆ ಗೋಕುಲನ ಪತ್ನಿ, ಮಾವ, ಕಡೆಗೆ ಅವನ ತಾಯಿ ಕೂಡಾ ಸರಿಯಾಗಿ ಅರ್ಥಮಾಡಿಕೊಳ್ಳದಿದ್ದ ಗೋಕುಲನನ್ನು ಅಂಗಡಿಯ ಸಾಮಾನ್ಯ ಕೆಲಸಗಾರನಾದ ಚಕ್ರವರ್ತಿ ಬಲು ಚೆನ್ನಾಗಿ ಅರ್ಥಮಾಡಿಕೊಂಡಿದ್ದ.

ಅವನು ಯಾವುದೇ ಪ್ರತಿರೋಧ ತೋರಿಸದೆ ಮೌನವಾಗಿ ಜಾಗ ಖಾಲಿ ಮಾಡಿ ಗೋಕುಲನ ತಾಯಿಯ ಬಳಿ ಹೋಗಿ ಅವಳ ಮುಂದೆ ಎಲ್ಲವನ್ನೂ ನಿವೇದಿಸಿಕೊಂಡ. ತಾಯಿ ಬಂದು "ಗೋಕುಲ" ಎಂದು ಕರೆದಳು. ಎಲ್ಲವನ್ನೂ ಒಮ್ಮೆಗೇ ಮರೆತು ಗೋಕುಲ ಕೂಡಲೇ ಉತ್ತರಿಸಿದ "ಏನಮ್ಮಾ". ತಾಯಿ ಹೇಳಿದ್ದಿಷ್ಟೇ: "ಚಕ್ರವರ್ತಿ ಬಹಳ ಕಾಲದಿಂದ ನಮ್ಮೊಂದಿಗಿದ್ದವನು. ಅವನು ಬದುಕಿರುವವರೆಗೆ ನಮ್ಮೊಂದಿಗಿರಲಿ ಎಂದು ನಾನು ಬಯಸುತ್ತೇನೆ. ಸಂದೂಕದ ಬೀಗದಕ್ಕೆ ಹಾಗೂ ಲೆಕ್ಕದ ಪುಸ್ತಕಗಳೊಡನೆ ಅವನು ಅಂಗಡಿಗೆ ಹೋಗಲಿ." ಗೋಕುಲ ಕೂಡಲೆ ಬೀಗದಕ್ಕೆಯನ್ನು ನೆಲದ ಮೇಲೆ ಹಾಕಿದ. ಚಕ್ರವರ್ತಿ ಮುಗುಳ್ನಗುತ್ತಾ ಅದನ್ನು ಎತ್ತಿಕೊಂಡು ಹೊರಟುಹೋದ. ತದನಂತರ ಗೋಕುಲನ ಮೇಲೆ ನಿಂದನೆ ಹಾಗೂ ಬೈಗುಳಗಳ ಸುರಿಮಳೆಯಾಯಿತು. ಗೋಕುಲ ಎಲ್ಲವನ್ನೂ ಮೌನವಾಗಿ ಭರಿಸಿದ. ನಾಚಿಕೆಯಿಂದ, ವ್ಯಥೆಯಿಂದ ಕಣ್ಣಲ್ಲಿ ನೀರುತುಂಬಿ ಗದ್ಗದಿತನಾದ ಗೋಕುಲನಿಗೆ ಹೇಳಲಾಗಿದ್ದು ಇಷ್ಟೇ. "ಅಮ್ಮ ವೈರಿಯಂತೆ ಹೀಗೆ ಆಜ್ಞಾಪಿಸುತ್ತಾಳೆಂದು ನನಗೇನು ಗೊತ್ತಿತ್ತು." ಎಂತಹ ಅದ್ಭುತ ನೋಡಿ! ಎಲ್ಲವೂ ತೀರ್ಮಾನವಾಗಿದೆಯೆಂದು ಅಂದುಕೊಳ್ಳುತ್ತಿರುವಾಗಲೇ, ಗೋಕುಲನ ತಾಯಿ ಕುತಂತ್ರ ನಡೆಸಿ ಅವನ ವಿರುದ್ಧ ಪಿತೂರಿ ನಡೆಸುತ್ತಿದ್ದಾಳೆ ಎಂದು ಗೋಕುಲನನ್ನು ನಂಬಿಸಿದ್ದರೂ, ತಾಯಿ ಚಕ್ರವರ್ತಿಗೆ ಬೀಗದಕ್ಕೆ ಹಿಂದಿರುಗಿಸಲು ಕೇಳಿದೊಡನೆ ಅವರ ಇಡೀ ಷಡ್ಯಂತ್ರ ತಲೆಕೆಳಗಾಯಿತು. ಅಂಗಡಿಯ ವ್ಯವಹಾರದಲ್ಲಿ ಇನ್ನೆಂದೂ ಅವರು ಮೂಗು ತೂರಿಸುವ ಹಾಗಿಲ್ಲ ಎಂಬಂತಾಯಿತು. ಗೋಕುಲನ ಪತ್ನಿಯ ಅಥವಾ ಮಾವನ ಮಾತು ಇನ್ನೆಂದೂ ನಡೆಯದ ಹಾಗಾಯಿತು. ಇದು ಗೋಕುಲನ ಪಾತ್ರದ ಚಿತ್ರಣ.

ಈ ಸರಳ ಕಥೆಯ ಮೂಲಕ ಶರತ್‌ಚಂದ್ರರು ಹೇಳಬಯಸಿದ್ದೇನೆಂದರೆ ನಿಸ್ಸಂದೇಹವಾಗಿ ಶಿಕ್ಷಣ ಬಹಳ ಮುಖ್ಯವಾದುದು. ಆದರೆ ಕೇವಲ ವಿಶ್ವವಿದ್ಯಾನಿಲಯಗಳಿಂದ ಉನ್ನತ ಪದವಿಗಳನ್ನು ಪಡೆಯುವುದರಿಂದ ಸಂಸ್ಕೃತಿಯ ಸಾರ ಮತ್ತು ಸತ್ವವನ್ನು ಗ್ರಹಿಸುವುದು ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಸುವರ್ಣ ಪದಕ ಪಡೆದ ವಿನೋದನಿಗೆ ಗ್ರಹಿಸಲು ಸಾಧ್ಯವಾಗದ್ದನ್ನು ಅಶಿಕ್ಷಿತ ಗೋಕುಲ ಗ್ರಹಿಸಿದ. ಅದನ್ನು ವ್ಯಕ್ತಪಡಿಸಲು ಅವನಿಗೆ ಗೊತ್ತಿಲ್ಲ ಅಷ್ಟೇ. ಸರಿಯಾದ ಸಮಯಕ್ಕೆ ಸರಿಯಾದುದನ್ನು ಹೇಳಲಾಗದ್ದಕ್ಕೆ ಅವನನ್ನು ಹಲವು ಬಾರಿ ತಪ್ಪಾಗಿ ಅರ್ಥ ಮಾಡಿಕೊಳ್ಳಲಾಯಿತು; ಎಷ್ಟೋ ಜಟಿಲತೆಗಳು ಉಂಟಾದಾಗ ಅವನು ತನಗೆ ಬೇಕಾದುದನ್ನು ಸಾಧಿಸಲಾರ – ಅವನ ಎಲ್ಲಾ ಪ್ರಯತ್ನಗಳು ನಿರರ್ಥಕವಾಗುತ್ತವೆ. ಇಲ್ಲಿ ಶರತ್‌ಚಂದ್ರರು ಹೇಳಹೊರಟಿರುವುದೇನು? ಶಿಕ್ಷಣದ ಅಭಾವದಿಂದ ಅನೇಕ ಸಂಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಅದರಿಂದ ಒಳಿತೇನೂ ಆಗಲಾರದು. ಆದರೆ ಬರಿಯ ವಿಶ್ವವಿದ್ಯಾನಿಲಯದ ಅರ್ಹತೆಯಿಂದ ಅಥವಾ ಪದವಿಗಳನ್ನು ಗಳಿಸುವುದರಿಂದ ನಾವು ಸಂಸ್ಕೃತಿಯ ಸಾರವನ್ನು, ಪ್ರಮುಖ ತಿರುಳನ್ನು ಗ್ರಹಿಸಲಾದೀತೆ? ಉನ್ನತ ಮಾನವೀಯ ಗುಣಗಳನ್ನು ಹಾಗೂ ಉನ್ನತ ಸಂಸ್ಕೃತಿಯನ್ನು ಯಾರು ಉತ್ತಮವಾಗಿ ಗಳಿಸಿದ್ದಾರೆ, ಶಿಕ್ಷಿತ ವಿನೋದನೋ, ಅಶಿಕ್ಷಿತ ಗೋಕುಲನೋ ಸರಿಯಾಗಿ ನೋಡಿ ಹೇಳಿ. ಶಿಕ್ಷಣ ಪಡೆದು ಗೋಕುಲನಂತಾಗಿ, ವಿನೋದನ ಹಾಗೆ ಆಗಬೇಡಿ. ಆಗ ಮಾತ್ರವೇ ಶಿಕ್ಷಣ ನಿಜವಾಗಿ

ಅರ್ಥಪೂರ್ಣವಾಗುತ್ತದೆ. ಶಿಕ್ಷಣ ಪಡೆಯದಿದ್ದರೂ, ನೀವು ಗೋಕುಲನಂತಾದರೂ ಆಗಲು ಸಾಧ್ಯವಾದರೆ ನೀವು ಸಮಾಜಕ್ಕೆ ವಿನೋದನಿಗಿಂತ ಹೆಚ್ಚು ಒಳಿತನ್ನು ಮಾಡಲು ಸಾಧ್ಯ. ಗೋಕುಲ ತನ್ನ ತಾಯಿಯನ್ನು ಹೇಗೆ ಗೌರವಿಸಬೇಕು, ಅವಳ ಘನತೆಯನ್ನು ಹೇಗೆ ಎತ್ತಿಹಿಡಿಯಬೇಕು ಎಂಬುದನ್ನು ಅರಿತಿದ್ದಾನೆ. ಅವನು ಲೈಂಗಿಕ ತೃಷೆಗೆ ದಾಸನಲ್ಲ. ಹೆಂಡತಿಗೆ ಅಡಿಯಾಳಾಗಿ ಅವನೆಂದೂ ತನ್ನ ತಾಯಿ ಹಾಗೂ ತಮ್ಮನ ಕುರಿತಾದ ಕರ್ತವ್ಯವನ್ನು ನಿರ್ಲಕ್ಷಿಸಿ ಅವರನ್ನು ಕಷ್ಟಕ್ಕೀಡು ಮಾಡಲಾರ. ಆದರೂ ನನ್ನ ದೀರ್ಘ ಅನುಭವದಲ್ಲಿ ತಮ್ಮ ಅಸಹಾಯಕ ತಾಯಂದಿರನ್ನು ಹೊರದೂಡಿ ತಮ್ಮ ಹೆಂಡತಿಯರೊಡನೆ ಬೇರೆಯಾಗಿ, ಆಧುನಿಕ ಜೀವನ ನಡೆಸಲು ಹೇಸದ ನಾಮಕಾವಾಸ್ತೆ ಕಮ್ಯುನಿಸ್ಟರು ಹಾಗೂ ಪ್ರಗತಿಪರರನ್ನು ನಾನು ಎಷ್ಟೋ ಬಾರಿ ಕಂಡಿದ್ದೇನೆ. ಶರತ್‌ಚಂದ್ರರು ಈ ಅಂಶಗಳನ್ನು 'ರಸ' ಮಾಧ್ಯಮದ ಮೂಲಕ ಮುಂದಿಟ್ಟಿದ್ದಾರೆ. ಎಂದಿಗೂ ಅವರು ತತ್ವಗಳನ್ನು ಸಾರಲಿಕ್ಕೆ ಅಥವಾ 'ಇಲ್ಲಿ ನಾನಿದನ್ನು ಚರ್ಚಿಸಿದ್ದೇನೆ' ಎಂದು ವಿವರಿಸಲಿಕ್ಕೆ ಪ್ರಯತ್ನ ಮಾಡಿಲ್ಲ. ಈ ಒಂದು ಅಂಶದಲ್ಲಿಯೇ ಅವರು ಸಾಹಿತಿಯಾಗಿ ಪಡೆದ ಯಶಸ್ಸಿನಲ್ಲಿ ಬೇರೆಲ್ಲರನ್ನೂ ಮೀರಿಸಿದ್ದಾರೆ. ಇಂದು ಎಡವಾದಿ ಚಳುವಳಿಗಳನ್ನೂ ಕಾಡುತ್ತಿರುವ, ದೇಶವ್ಯಾಪಿಯಾಗಿರುವ ನೈತಿಕತೆ ಹಾಗೂ ಸಂಸ್ಕೃತಿಯ ಅವನತಿಯ ಸಂದರ್ಭದಲ್ಲಿ, ಶರತ್‌ಚಂದ್ರರನ್ನು ಸೂಕ್ಷ್ಮವಾಗಿ ಅಭ್ಯಸಿಸಿ ಸರಿಯಾಗಿ ಅವರ ಮೌಲ್ಯಮಾಪನ ಮಾಡಿಕೊಂಡಲ್ಲಿ ವಿಚಾರ, ನೈತಿಕತೆ ಮತ್ತು ಸಂಸ್ಕೃತಿಯ ಒಂದು ನೂತನ ಪರಿಕಲ್ಪನೆ ಮೂಡಿಬರುತ್ತದೆ. ತನ್ಮೂಲಕ ಅದು ಒಂದು ಬೃಹತ್ ಪರಿವರ್ತನೆಯನ್ನೇ ತರುತ್ತದೆ.

ಬೂರ್ಜ್ವಾ ಕ್ರಾಂತಿಕಾರಿ ಚಿಂತನೆ ಮತ್ತು ಮೌಲ್ಯಗಳಿಗಿಂತ ಎಷ್ಟೋ ಉನ್ನತವಾದ ಕಾರ್ಮಿಕವರ್ಗದ ವೈಚಾರಿಕತೆಯು ಮಾನವ ಸಮಾಜದ ಪ್ರಗತಿಯ ಪಥದಲ್ಲಿ, ಹಂತಹಂತವಾಗಿ ಬೆಳೆದು ಬಂದ ಉದಾತ್ತ ಚಿಂತನೆಗಳ ಹಾಗೂ ವ್ಯಕ್ತಿತ್ವಗಳ ಮುಂದುವರಿಕೆಯಾಗಿ ಇತಿಹಾಸದಲ್ಲಿ ಮೂಡಿಬಂತು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಹಾಗಿದ್ದಲ್ಲಿ ಬೂರ್ಜ್ವಾ ಪ್ರಜಾತಾಂತ್ರಿಕ ಕ್ರಾಂತಿಯ ಅತ್ಯುತ್ತಮ ಫಲಗಳಾದ ಮಾನವತಾವಾದಿ ಅಥವಾ ಬೂರ್ಜ್ವಾ ಕ್ರಾಂತಿಕಾರಿಗಳಿಗಿಂತ ಕಾರ್ಮಿಕವರ್ಗದ ಕ್ರಾಂತಿಕಾರಿ ಹೋರಾಟದಲ್ಲಿ ಮೂಡಿಬರುವ ವ್ಯಕ್ತಿಗಳು – ವ್ಯಕ್ತಿತ್ವಗಳು, ಎಷ್ಟೋ ಮೇಲ್ಮಟ್ಟವನ್ನು ಸಾಧಿಸಿರುತ್ತಾರೆ ಎಂದು ನಿರೀಕ್ಷಿಸಬಹುದು ತಾನೇ? ಆದರೆ ಇಂದು ನಮ್ಮ ಸಮಾಜದಲ್ಲಿ ವಾಸ್ತವವಾಗಿ ನಾವು ಕಾಣುತ್ತಿರುವುದೇನು? ಶರತ್‌ಚಂದ್ರರ ಕಾಲದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟ ದೌರ್ಬಲ್ಯಗಳಿಂದ ತುಂಬಿತ್ತು. ಅದು ಧಾರ್ಮಿಕತೆಯಿಂದ ಮುಕ್ತವಾಗಿರಲಿಲ್ಲ ಹಾಗೂ ಸ್ವಾತಂತ್ರ್ಯಹೋರಾಟದ ಪ್ರಮುಖಧಾರೆಯು (ಗಾಂಧೀಜಿ ನೇತೃತ್ವದ ಕಾಂಗ್ರೆಸ್–ಸಂ) ಸಾಮ್ರಾಜ್ಯವಾದದ ವಿರುದ್ಧ ಸಹ ರಾಜಿರಹಿತ ಧೋರಣೆಯನ್ನು ಹೊಂದಿರಲಿಲ್ಲ. ಈ ಪ್ರಮುಖಧಾರೆಯ ನಾಯಕರು ಹೇಗಾದರೂ ಮಾಡಿ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವ ಆತುರದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ರಾಂತಿಯ ಪತಾಕೆಯನ್ನು ಗಾಳಿಗೆ ತೂರಿದ್ದರು; ಅವರೊಳಗಿನ ಪ್ರಗತಿಪರರು, ರಾಜಕೀಯ ಹೋರಾಟದ ಪ್ರಮುಖರೂ ಸಹ ಧರ್ಮ ಮತ್ತು ಸಂಪ್ರದಾಯಗಳೊಡನೆ, ಸಾಮಾಜಿಕ ರೂಢಿಗಳ ಕ್ಷೇತ್ರದಲ್ಲಿ, ವೈಯಕ್ತಿಕ ನಡತೆ ಹಾಗೂ ಕೌಟುಂಬಿಕ ಸಂಬಂಧದಲ್ಲಿ ರಾಜಿ ಮಾಡಿಕೊಂಡಿದ್ದರು. ಇಷ್ಟೆಲ್ಲಾ ಆದರೂ,

ಸ್ವಾತಂತ್ರ್ಯ ಹೋರಾಟದ ಮೇಲೆ ಶರತ್‌ಚಂದ್ರರ ಅದ್ಭುತ ಪ್ರಭಾವದ ಕಾರಣದಿಂದ ಬಂಗಾಲದ ಅಂದಿನ ಕ್ರಾಂತಿಕಾರಿಗಳು ಹಾಗೂ ಯುವಜನತೆ ಬಹಳ ದೃಢವಾದ ಹಾಗೂ ಅವಿಚಲವಾದ ವ್ಯಕ್ತಿತ್ವವನ್ನು ಪಡೆದುಕೊಂಡಿದ್ದರು ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಆದರೆ ಕಮ್ಯುನಿಸ್ಟರು* ಎನಿಸಿಕೊಂಡವರು ಭಾಷಣ ಶೂರರಾದರೂ, ಕ್ಲಿಷ್ಟ ಸಮಸ್ಯೆಗಳ ಬಗ್ಗೆ ಚರ್ಚಿಸಬಲ್ಲವರಾದರೂ ವಿಭಿನ್ನ ಪ್ರಶ್ನೆಗಳ ಬಗ್ಗೆ ವಿವರಣೆ ನೀಡಬಲ್ಲವರಾದರೂ ಈ ಮಟ್ಟವನ್ನು ಸಹ ಉಳಿಸಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ಇಂದಿನ ಕಮ್ಯುನಿಸ್ಟರು, ದೇಶಬಂಧು ಚಿತ್ತರಂಜನದಾಸ್‌ರಿಗಿಂತ, ಕ್ರಾಂತಿಕಾರಿ ಯುವಕ ಖುದಿರಾಮ್‌ನಿಗಿಂತ ಉನ್ನತ ಮಟ್ಟವನ್ನು ಪಡೆಯಬೇಕೆಂಬ ನಿರೀಕ್ಷೆ ಸಹಜ. ಆದರೆ ಈ ಮಟ್ಟವನ್ನು ತಲುಪುವುದಿರಲಿ, ಈ ಕಮ್ಯುನಿಸ್ಟರು ಎಂದು ತಮ್ಮನ್ನೇ ಕರೆದುಕೊಳ್ಳುವವರು ವಾಸ್ತವದಲ್ಲಿ ಅವನತಿ ಹೊಂದಿದ್ದಾರೆ...

ಹೀಗಾಗಿ ಭೂತಕಾಲದಿಂದ ಬೇರ್ಪಟ್ಟು ಮುನ್ನಡೆಯುವಾಗ ನಾವು ನಿರಂತರತೆಯ ಕೊಂಡಿಯನ್ನು ಕಳೆದುಕೊಂಡು ತತ್ಫಲವಾಗಿ ಬೇರುಗಳಿಲ್ಲದವರಾಗುವಂತಾಗಿದೆ. ಗೋಕುಲನನ್ನು ಅರಿಯಲಾಗದವರು, ಅವನ ಅರ್ಥಹೀನವೆನಿಸುವ ನಡತೆ ಹಾಗೂ ಮಾತುಗಳ ಹಿಂದೆ ಅವನಲ್ಲಿ ಅಂತರ್ಗತವಾಗಿ ಬಂದಿರುವ ಉತ್ತಮ ಸಾಂಸ್ಕೃತಿಕ ಮಟ್ಟವಿದೆ ಹಾಗೂ ನೈತಿಕ ನೆಲೆಗಟ್ಟಿದೆ ಎಂಬುದನ್ನು ಗಮನಿಸುವಲ್ಲಿ ವಿಫಲರಾದವರು, ಎಂದಿಗಾದರೂ ಕಮ್ಯುನಿಸ್ಟರಾಗಬಲ್ಲರೇ? ಕನಿಷ್ಠ ಗಿರೀಶ ಅಥವಾ ಯಾದವನಂತಾದರೂ ಆಗಲಾಗದವರು ಎಂದಿಗೂ ಕಮ್ಯುನಿಸ್ಟರಾಗಲಾರರು. ನಮ್ಮ ಸಮಾಜದಲ್ಲಿ ಯಾದವ, ಗಿರೀಶ** ಮತ್ತು ಗೋಕುಲರ ಮೌಲ್ಯ ಮತ್ತು ಇತಿಮಿತಿ ಇವೆರಡನ್ನೂ ಗ್ರಹಿಸಬಲ್ಲವರು, ಆ ವ್ಯಕ್ತಿತ್ವಗಳ ಸೌಂದರ್ಯವನ್ನು ಅರಗಿಸಿಕೊಳ್ಳುತ್ತಾ, ಜೊತೆಗೆ ಅವರನ್ನು ಮೀರಿ ಮುನ್ನಡೆಯಬಲ್ಲವರು ಮಾತ್ರ ಒಂದು ದಿನ ಕಮ್ಯುನಿಸ್ಟರಾಗುವ ಸಾಧ್ಯತೆ ಇದೆ. ಆದರೆ ಗೋಕುಲನ ವ್ಯಕ್ತಿತ್ವದಲ್ಲಿ ಅಂತರ್ಗತವಾಗಿರುವ ಸಾಂಸ್ಕೃತಿಕ ಎಳೆಯ ಅಭಾವವಿರುವವರು ಹಾಗೂ ವಿನೋದ ಮತ್ತು ಹರೀಶರ ಗುಂಪಿಗೆ ಸೇರಿದವರು ಕೇವಲ ಮಾರ್ಕ್ಸ್‌ವಾದಿ ಪದಪುಂಜಗಳನ್ನು ಉದ್ಧರಿಸುವುದರಿಂದ ಕಮ್ಯುನಿಸ್ಟರಾಗುವುದಿಲ್ಲ. ಯಾದವ, ಗೋಕುಲ, ಗಿರೀಶರಂತಹ ಜನ ಉನ್ನತ ಮಟ್ಟವನ್ನು ಪಡೆಯುವ ಹಾದಿಯಲ್ಲಿ ನಡೆದರೆ ಕಮ್ಯುನಿಸ್ಟರಾಗಬಹುದು. ಅಂತೆಯೇ ಸರಿಯಾದ ಅವಕಾಶ ದೊರೆತರೆ ಬಿಂದು, ನಾರಾಯಣಿ, ಹೇಮಾಂಗಿನಿ, 'ನಿಷ್ಕೃತಿ' ಕಾದಂಬರಿಯ ಹಿರಿಯ ಸೊಸೆ, ಕಿರಿಯ ಸೊಸೆ ಇವರು ಮುಂದುವರೆಯುತ್ತಾ ಒಂದು ಹಂತದಲ್ಲಿ ನೈಜ ಕಮ್ಯುನಿಸ್ಟರಾಗಬಹುದು.

ತಮ್ಮ ಕೃತಿಗಳನ್ನು ಪೊಳ್ಳಾದ ದೊಡ್ಡದೊಡ್ಡ ಮಾತುಗಳಿಂದ ತುಂಬಿಸುವ ಲೇಖಕರು ಹಾಗೂ ಇಂತಹ ಪದಪುಂಜಗಳು ಇವೆ ಎಂಬ ಕಾರಣದಿಂದ ಕೃತಿಗಳನ್ನು ಬಹಳ ಪ್ರಗತಿಪರವೆಂದು ವಿಮರ್ಶಿಸುವ ವಿಮರ್ಶಕರು ವಾಸ್ತವದಲ್ಲಿ 'ವೈಕುಂಠನ ಮೃತ್ಯುಪತ್ರ'ದಲ್ಲಿ ಬರುವ ವಿನೋದ, ಹರೀಶ, ಹಾಗೂ 'ನಿಷ್ಕೃತಿ'ಯಲ್ಲಿ ಬರುವ

*ಇದು ಸಿಪಿಐನಂಥ ನಾಮ್‌ಕಾವಸ್ತೆ ಪಕ್ಷಗಳ ಕುರಿತು ಕಾಮ್ರೇಡ್ ಶಿವದಾಸ್ ಘೋಷ್ ನೀಡಿರುವ ಅಭಿಪ್ರಾಯ–ಸಂ

ಮಧ್ಯದ ಸೊಸೆ ಇಂಥವರ ಗುಂಪಿಗೆ ಸೇರಿದವರು. ಈ ಲೇಖಕರು ಹಾಗೂ ವಿಮರ್ಶಕರು ಶರತ್‌ಚಂದ್ರರ ಕೃತಿಗಳಲ್ಲಿನ ಪಾತ್ರಗಳನ್ನು ಅರಿಯುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ.

ನಾನು ಈ ಮುನ್ನ ಹೇಳಿದಂತೆ ನಾರಾಯಣಿಯಂತಹ ಸ್ತ್ರೀಯರು ಮಾತ್ರ ಕಮ್ಯುನಿಸ್ಟರಾಗಬಲ್ಲರೇ ವಿನಃ ಶಿಕ್ಷಿತರಾಗಿದ್ದರೂ ನಾರಾಯಣಿಯ ತಾಯಿಯಂಥವರು ಅಥವಾ 'ನಿಷ್ಕೃತಿ'ಯ ಮಧ್ಯದ ಸೊಸೆಯಂತಹವರು ಆಗಲಾರರು. ಅವರು ಶಿಕ್ಷಣದಿಂದ ಹೆಚ್ಚೆಂದರೆ 'ಶೇಷಪ್ರಶ್ನೆ' ಕಾದಂಬರಿಯ ಬೇಲಾಳ ಪಾತ್ರದಂತಹವರಾಗಬಹುದೇ ಹೊರತು ಅದೇ ಕಾದಂಬರಿಯ ಕಮಲಳಂತಲ್ಲ. ಕಮಲಳಂತಹ ಸ್ತ್ರೀಯರು ಜ್ಞಾನ ಹಾಗೂ ಅನುಭವ ಪಡೆಯುತ್ತಾ ಆ ಪ್ರಕ್ರಿಯೆಯಲ್ಲಿ ಒಂದು ದಿನ ಕಮ್ಯುನಿಸ್ಟರಾಗುವಷ್ಟು ಬೆಳೆಯುತ್ತಾರೆ. ಬೇಲಾಳಂತಹ ಸ್ತ್ರೀಯರಿಗೆ ಸ್ವಾತಂತ್ರ್ಯವೆಂದರೆ ಗಂಡನೊಂದಿಗೆ ಹೊಂದಾಣಿಕೆ ಇಲ್ಲದಿದ್ದರೆ ಅವನ ಮೇಲೆ ದಾವಾ ಹಾಕಿ ಅವನ ಆಸ್ತಿಯಲ್ಲಿ ಎಷ್ಟು ಹೆಚ್ಚು ಪಾಲನ್ನು ಪಡೆಯಬಹುದೋ ಅಷ್ಟನ್ನು ಗಿಟ್ಟಿಸಿಕೊಳ್ಳುವ ಹಕ್ಕು ಅಷ್ಟೇ. ಅವರ ವಾದ: "ನೀನು ನನ್ನನ್ನು ಮದುವೆಯಾಗಿದ್ದೀಯ. ಈಗ ನಮ್ಮ ವಿಚ್ಛೇದನವಾಗಿರುವುದರಿಂದ ನನಗೆ ನೀನು ಜೀವನಾಂಶ ಕೊಡಲೇಬೇಕು?' ......ಪ್ರೇಮ, ಮಮತೆ, ನಾರೀತ್ವದ ಘನತೆ, ಜೀವನ ಮೌಲ್ಯಗಳು – ಇವುಗಳ ಅರ್ಥವಾದರೂ ಏನು? ಏಕೆ ಇಂತಹ ಪರಿಕಲ್ಪನೆಗಳ ಬಗ್ಗೆ ಇಂದಿನ ಜನಾಂಗಕ್ಕೆ ಆಳವಾದ ತಿಳುವಳಿಕೆಯೇ ಇಲ್ಲ? ಆದರೆ ನಾವು ಶರತ್‌ಚಂದ್ರರನ್ನು ಸರಿಯಾಗಿ ಅರ್ಥಮಾಡಿಕೊಂಡರೆ ನಮ್ಮ ಚಿಂತನಾಧಾರೆ ಹಾಗೂ ಆಲೋಚನಾ ಲಹರಿ ಹೊಸ ದಿಕ್ಕಿನಲ್ಲಿ ಸಾಗಬಲ್ಲದು; ಆತ್ಮಗೌರವ ಬಲಿಕೊಟ್ಟು ಏನನ್ನಾದರೂ ಪಡೆಯುವುದು ಮಾನವ ಘನತೆಗೆ ಕುಂದುತರುವಂಥಾದ್ದು ಎಂದು ಪ್ರತಿಯೊಬ್ಬರೂ ಆಗ ಮನಗಾಣಬಲ್ಲರು. ಮಹಿಳೆಯರೂ ಸಹ ಇದನ್ನು ತಿಳಿದುಕೊಳ್ಳಬಲ್ಲರು. ಮನುಷ್ಯರಿಗೆ ಬದುಕಿನಲ್ಲಿ ನಿಸ್ಸಂದೇಹವಾಗಿಯೂ ಆಹಾರ, ನೆಲೆ, ಸುಖ, ಸಂಪತ್ತು, ಪ್ರೇಮ– ಕಾಮ, ಮಮತೆ, ಅನುಕಂಪ ಬಹಳ ಮುಖ್ಯವಾದವುಗಳೇ. ಆದರೆ ಘನತೆ ಮತ್ತು ಆತ್ಮಗೌರವಗಳನ್ನು ಬಲಿಕೊಟ್ಟು ಯಾರಾದರೂ ಇದನ್ನು ಪಡೆದರೆ ಉಳಿಯುವುದಾದರೂ ಏನು? ನಮ್ಮ ಇಂದಿನ ಸಾಮಾಜಿಕ ಜೀವನದಲ್ಲಿ ಈ ಮೌಲ್ಯ ಪ್ರಜ್ಞೆ ಕಳೆದುಹೋಗಿದೆ. ಶರತ್ ಸಾಹಿತ್ಯದ ವಿಚಾರಧಾರೆ ಇವುಗಳನ್ನು ಮತ್ತೆ ಗಳಿಸಿಕೊಳ್ಳಲು ನೆರವು ನೀಡಬಲ್ಲದು.

...ತಮ್ಮ 'ವಿಪ್ರದಾಸ' ಕಾದಂಬರಿಯಲ್ಲಿ ಶರತ್‌ಚಂದ್ರರು ಹಿಂದೂ ಪುನರುತ್ಥಾನವಾದಕ್ಕೆ ಪೋಷಣೆ ನೀಡಿದ್ದಾರೆಂದು ಹೇಳುವ ಅನೇಕ ಕಮ್ಯುನಿಸ್ಟರು ಹಾಗೂ ಪ್ರಗತಿಪರರೆನಿಸಿಕೊಂಡಿರುವ ವಿಮರ್ಶಕರನ್ನು ನಾನು ಬಲ್ಲೆ. ನಾನು ಅವರೊಂದಿಗೆ ಸಂಪೂರ್ಣ ಸಹಮತ ಹೊಂದಿಲ್ಲ. ಅವರು ಈ ಕಾದಂಬರಿಯ ಕುರಿತು ಕೇವಲ ಮೇಲ್ಮೈ ಅಭಿಪ್ರಾಯವನ್ನು ರೂಪಿಸಿಕೊಂಡಿದ್ದಾರೆಂದು ನನಗನ್ನಿಸುತ್ತದೆ. ಅದನ್ನವರು ಕೂಲಂಕಷವಾಗಿ ಓದಿರಲಿಕ್ಕಿಲ್ಲ ಅಥವಾ ಓದಿದ್ದರೂ ಈ ಕಾದಂಬರಿಯಲ್ಲಿ ಪ್ರತಿಬಿಂಬಿತವಾದ ಶರತ್‌ಚಂದ್ರರ

**'ನಿಷ್ಕೃತಿ' ಕಥೆಯ ಒಂದು ಮುಖ್ಯಪಾತ್ರ

ಚಿಂತನೆಯ ಪ್ರಮುಖ ಧಾರೆಯನ್ನು ಗ್ರಹಿಸುವಲ್ಲಿ ವಿಫಲರಾಗಿದ್ದಾರೆ. ನಮ್ಮ ಸ್ವಾತಂತ್ರ್ಯ ಹೋರಾಟದ ಮೇಲೆ ಪ್ರಭಾವ ಬೀರಿದ್ದ ಹಿಂದೂ ಪುನರುತ್ಥಾನವಾದವು, ಅವರ 'ವಿಪ್ರದಾಸ' ಕಾದಂಬರಿಯಲ್ಲಿ – ಅದರಲ್ಲಿ ಮಾತ್ರ –ಪ್ರತಿಬಿಂಬಿತವಾಗಿದೆ ಎಂಬುದೇನೋ ನಿಜ. ಇದರ ಬಗ್ಗೆ ಚರ್ಚಿಸುವ ಮುನ್ನ ವಿಭಿನ್ನ ಸಾಮಾಜಿಕ ವಿಚಾರಗಳು, ಅವುಗಳ ಮಧ್ಯದ ಸಂಘರ್ಷ, ದ್ವಂದ್ವಗಳು ಲೇಖಕರ ಮೇಲೂ ಪ್ರಭಾವ ಬೀರುತ್ತವೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಒಬ್ಬ ಲೇಖಕರ ಸಾಹಿತ್ಯಕ ಚಿಂತನೆಯನ್ನು ಸರಿಯಾಗಿ ಮೌಲ್ಯಮಾಪನ ಮಾಡಲು, ನಾವು ಮೊಟ್ಟಮೊದಲಿಗೆ ಅವರಲ್ಲಿ ಪ್ರಬಲವಾಗಿರುವ ಚಿಂತನಾಧಾರೆ ಯಾವುದೆಂದು ಗುರುತಿಸಿಕೊಳ್ಳಬೇಕು. ಒಬ್ಬ ಮನುಷ್ಯನಲ್ಲಿ ಒಳಿತು ಕೆಡಕು ಎರಡೂ ಇರುತ್ತವೆ ಎಂಬುದು ನಿಜ ತಾನೆ? ನಾವು ಒಬ್ಬ ವ್ಯಕ್ತಿಯನ್ನು ಒಳ್ಳೆಯವನು ಎಂದು ಕರೆದರೆ, ಆತನಲ್ಲಿ ಒಂದು ಚೂರೂ ಕೆಡಕು ಇಲ್ಲವೆಂದು ಅರ್ಥವೇ? ಅಂದಮೇಲೆ ಒಳಿತು ಕೆಡಕು ಎರಡೂ ಇರುವ ವ್ಯಕ್ತಿ ಒಳ್ಳೆಯವನು ಅಥವಾ ಕೆಟ್ಟವನು ಎಂದು ನಿರ್ಧರಿಸುವುದು ಹೇಗೆ? ಮನುಷ್ಯನ ಚಾರಿತ್ರ್ಯದಲ್ಲಿ ಯಾವ ಅಂಶ ಪ್ರಾಧಾನ್ಯ ಪಡೆದಿದೆ ಎಂಬ ಆಧಾರದಲ್ಲಿ ಇದನ್ನು ನಾವು ನಿರ್ಧರಿಸುತ್ತೇವೆ. ಯಾರಲ್ಲಿ ಕೆಟ್ಟದ್ದು ಪ್ರಬಲವಾಗಿದೆಯೋ ಅವನನ್ನು ಕೆಟ್ಟವನೆನ್ನುತ್ತೇವೆ. ಯಾರಲ್ಲಿ ಒಳಿತು ಪ್ರಬಲ ಅಂಶವಾಗಿದೆಯೋ ಅವನನ್ನು ಒಳ್ಳೆಯವನೆನ್ನುತ್ತೇವೆ. ಆದ್ದರಿಂದ ಪ್ರತಿಯೊಂದು ಪ್ರಕ್ರಿಯೆಯ ಅಥವಾ ವಿದ್ಯಮಾನದ ಗುಣಲಕ್ಷಣ ಅದರ ಪ್ರಧಾನ ಅಂಶದಿಂದ ನಿರ್ಧಾರಿತವಾಗುತ್ತದೆ. ಈ ದೃಷ್ಟಿಕೋನದಿಂದ ನಿರ್ಧರಿಸಿದರೆ ನಾವು 'ವಿಪ್ರದಾಸ' ಕುರಿತಾದ ಈ ಹಿಂದೆ ಹೇಳಿದ ವಿಮರ್ಶಕರ ಅಭಿಪ್ರಾಯವನ್ನು ಸಂಪೂರ್ಣವಾಗಿ ಅನುಮೋದಿಸಿದರೂ ಸಹ ಶರತ್‌ಚಂದ್ರರ ಸಾಹಿತ್ಯ ಚಿಂತನೆಯಲ್ಲಿ ಪ್ರಾಧಾನ್ಯ ಪಡೆದಿರುವುದು ರಾಜಿರಹಿತವಾದ ಧರ್ಮನಿರಪೇಕ್ಷವಾದ ಕ್ರಾಂತಿಕಾರಿ ಮಾನವತಾವಾದ ಎಂಬುದನ್ನು, ಅದರ ತುಂಬಾ ಯೌವನಸಹಜ ಉತ್ಸಾಹವಿದೆ ಎಂಬುದನ್ನು ನಿರಾಕರಿಸಲು ಸಾಧ್ಯವಿಲ್ಲ.

'ವಿಪ್ರದಾಸ'ದ ಬಗ್ಗೆ ಗಾಢ ಪರಿಗಣನೆಯ ನಂತರ ನಾನು ವ್ಯಕ್ತಪಡಿಸುವ ಅಭಿಪ್ರಾಯವೆಂದರೆ ಶರತ್‌ಚಂದ್ರರು ನಮ್ಮ ಸ್ವಾತಂತ್ರ್ಯ ಹೋರಾಟದ ಮೇಲೆ ಹಿಂದೂ ಪುನರುತ್ಥಾನವಾದ ಬೀರಿದ ಗಾಢವಾದ ಪ್ರಭಾವದಿಂದ ಸಂಪೂರ್ಣವಾಗಿ ಹೊರಗುಳಿಯಲಾಗಲಿಲ್ಲ, ಆದ ಕಾರಣ, ಅವರು ವಿಪ್ರದಾಸ ಮತ್ತು ದಯಾಮಯಿಯ ಪಾತ್ರ ಚಿತ್ರಣವನ್ನು ಅದಕ್ಕನುಗುಣವಾಗಿ ಬಹಳ ಕಾಳಜಿ ಮತ್ತು ಎಚ್ಚರಿಕೆಯಿಂದ ಮಾಡಲು ಯತ್ನಿಸಿದರು. ತಮ್ಮ ಶಕ್ತಿಶಾಲಿ ಲೇಖನಿಯಿಂದ, ಅತ್ಯದ್ಭುತ ಕೌಶಲ್ಯದಿಂದ ಶರತ್‌ಚಂದ್ರರು ಮೊದಲಿಗೆ ಇವೆರಡೂ ಪಾತ್ರಗಳನ್ನು ಚಿತ್ರಿಸುವಲ್ಲಿ ಕೆಲಮಟ್ಟಿಗೆ ಯಶಸ್ವಿಯಾದರೂ ಈ ಪಾತ್ರಗಳ ಮಾಧುರ್ಯ, ಸೌಂದರ್ಯಗಳು ಕಾದಂಬರಿಯಲ್ಲಿ ಅಂತಿಮವಾಗಿ ಕಾಣೆಯಾದವು. ಶರತ್‌ಚಂದ್ರರಂತಹ ಪ್ರಭಾವಶಾಲಿ ಕಾದಂಬರಿಕಾರರ ಲೇಖನಿ ವಿಪ್ರದಾಸನನ್ನು ಚಿತ್ರಿಸುವಾಗ ತನ್ನ ಮಾಧುರ್ಯವನ್ನು ಲಾಲಿತ್ಯವನ್ನು ಕಳೆದುಕೊಂಡಿದೆ ಎಂಬುದನ್ನು ಸೂಕ್ಷ್ಮ ದೃಷ್ಟಿಯಿರುವ ಯಾರೇ ಆಗಲಿ ಗಮನಿಸದೆ ಇರಲಾರರು. ವಿಪ್ರದಾಸ ಮತ್ತು ದಯಾಮಯಿಯರ ಪಾತ್ರಚಿತ್ರಣದಲ್ಲಿ ಅವರಿಗೆ ಸಹಜವಾದ ಕಲಾತ್ಮಕ ಹಾಗೂ ಮಧುರ ಅಭಿವ್ಯಕ್ತಿಯ

ಶೈಲಿಯಲ್ಲಿ ಕೊರತೆ ಕಂಡು ಬರುತ್ತದೆ. ಕೆಲವು ಆಯ್ದ ಸಂಭಾಷಣೆಯನ್ನು ಹೊಂದಿಸಿ, ಒಂದು ಗಂಭೀರ ಪರಿಸರ ಸೃಷ್ಟಿಸಿ ಅವರು ವಿಪ್ರದಾಸನನ್ನು ಬಹಳ ಸುಂದರವಾಗಿ ಚಿತ್ರಿಸಲು ತುಂಬಾ ಪ್ರಯತ್ನಿಸಿದ್ದಾರೆ. ಆದರೆ ಅವರು ದ್ವಿಜದಾಸ, ವಂದನಾ ಪಾತ್ರಗಳನ್ನು ಚಿತ್ರಿಸುವಾಗ ಅಥವಾ ಕಾದಂಬರಿಯಲ್ಲಿ ಬಹಳ ಗೌಣವಾದ ಪಾತ್ರವುಳ್ಳ ಶ್ರೀ ರೇಯವರನ್ನು ಚಿತ್ರಿಸಿದಾಗಲೆಲ್ಲಾ ಅವರ ಲೇಖನಿ ಜೀವಂತವೂ, ರಸಪೂರ್ಣವೂ ಆಗಿದ್ದು ಅದು ಸಹಜವಾಗಿ ಪ್ರವಹಿಸಿದೆ ಹಾಗೂ ಶೈಲಿ ಕಲಾತ್ಮಕವಾಗಿದೆ. ಈ ಅಂಶದಿಂದ ಸ್ಪಷ್ಟವಾಗುವುದೆಂದರೆ ಎರಡು ಪುನರುತ್ಥಾನವಾದಿ ಪಾತ್ರಗಳಾದ ವಿಪ್ರದಾಸ ಹಾಗೂ ಆತನ ತಾಯಿಯನ್ನು ಚಿತ್ರಿಸುವ ಪ್ರಯತ್ನದಲ್ಲಿ ಶರತ್‌ಚಂದ್ರರು ಎಷ್ಟೇ ಪ್ರಯಾಸಪಟ್ಟರೂ ಅವರ ಶಕ್ತಿಯುತ ಲೇಖನಿಯೂ ಈ ಪಾತ್ರಗಳನ್ನು ಜೀವಂತವಾಗಿಡುವಲ್ಲಿ ಯಶಸ್ವಿಯಾಗದೆ ಹೋಯಿತು. ಉದಾತ್ತ ವ್ಯಕ್ತಿತ್ವಗಳಾಗಿ ಮುಂದೆ ಬಂದವರು ಕೊನೆಗೆ ವಿಪ್ರದಾಸನೂ ಅಲ್ಲ, ಆತನ ತಾಯಿಯೂ ಅಲ್ಲ – ಆದರೆ ದ್ವಿಜದಾಸ, ವಂದನಾ ಹಾಗೂ ಅವಳ ನಿಸ್ವಾರ್ಥಿ ಹಾಗೂ ಅನ್ಯಮನಸ್ಕ ತಂದೆ. ಈ ಕಾದಂಬರಿಯನ್ನು ನಾವು ಈ ರೀತಿ ಅರ್ಥಮಾಡಿಕೊಂಡರೆ ಈ ಕೃತಿಯಲ್ಲೂ ಸಹ ಶರತ್‌ಚಂದ್ರರ ಧರ್ಮನಿರಪೇಕ್ಷ ಮಾನವತಾವಾದಿ ಧೋರಣೆ ಹಾಗೂ ಮೌಲ್ಯ ಪ್ರಜ್ಞೆಯು, ಬಹುಶಃ ಅವರ ಅರಿವಿಲ್ಲದೆಯೇ, ಪ್ರಾಧಾನ್ಯತೆ ಪಡೆದಿರುವುದನ್ನು ಕಾಣುತ್ತೇವೆ.

...ಮೂಲತಃ ಶರತ್‌ಚಂದ್ರರು ತಮ್ಮ ಸಾಹಿತ್ಯ ಚಿಂತನೆಯಲ್ಲಿ ಒಬ್ಬ ಧರ್ಮನಿರಪೇಕ್ಷ ಮಾನವತಾವಾದಿಯಾಗಿದ್ದರು, ಮಾರ್ಕ್ಸ್‌ವಾದಿಯಾಗಿರಲಿಲ್ಲ. ನಾವು ಕಮ್ಯುನಿಸ್ಟರು ಇಂದು ಬಹಳ ಪ್ರೀತಿಸುವ ಚಿಂತನೆ ಮತ್ತು ವಿಚಾರಗಳು ಶರತ್‌ಚಂದ್ರರ ಸಾಹಿತ್ಯದಲ್ಲಿ ಪ್ರತಿಬಿಂಬಿತವಾಗಿಲ್ಲ. ಆದ್ದರಿಂದ ಶರತ್‌ಚಂದ್ರರ ಸಾಹಿತ್ಯದ ಮೌಲ್ಯಮಾಪನ ಮಾಡುವಾಗ ಅವರು ಕಾರ್ಮಿಕವರ್ಗದ ಸಂಸ್ಕೃತಿಯನ್ನು ಪ್ರತಿಬಿಂಬಿಸಿದ್ದರೇ ಇಲ್ಲವೇ ಹಾಗೂ ಕಾರ್ಮಿಕವರ್ಗ ಕ್ರಾಂತಿಯ ವಿಚಾರವನ್ನು ಧ್ವನಿಸಿದ್ದರೇ ಇಲ್ಲವೇ ಎಂಬುದನ್ನು ಚರ್ಚಿಸುವುದು ಅರ್ಥಹೀನವಾಗುತ್ತದೆ. ಶರತ್ ಸಾಹಿತ್ಯವನ್ನು ಮೌಲ್ಯಮಾಪನ ಮಾಡುವಾಗ ಇಂತಹ ಪ್ರಶ್ನೆಗಳನ್ನು ಮತ್ತೆ ಮತ್ತೆ ಕೇಳುವವರು ಅಪ್ರಸ್ತುತ ಅಂಶಗಳನ್ನು ಎತ್ತಿ ಇಡೀ ವಿಷಯವನ್ನು ಗೋಜಲಾಗಿಸುತ್ತಾರೆ. ಇಲ್ಲಿ ಮುಖ್ಯ ಅಂಶವೆಂದರೆ: ನಮ್ಮ ದೇಶದ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಮಾನವತಾವಾದಿ ಚಿಂತನೆಯ ಅತ್ಯಂತ ಪ್ರಗತಿಪರ ಧಾರೆಯನ್ನು ಪ್ರತಿನಿಧಿಸಿದವರು ಯಾರು? ಅವರು ಪೆಟ್ಟಿ–ಬೂರ್ಜ್ವಾ ಕ್ರಾಂತಿಕಾರಿಗಳಲ್ಲವೆ? ಅಂದಿನ ದಿನಗಳಲ್ಲಿ ಪೆಟ್ಟಿ–ಬೂರ್ಜ್ವಾ ಕ್ರಾಂತಿಕಾರಿ ಚಿಂತನೆ ಬೂರ್ಜ್ವಾ ಮಾನವತಾವಾದದ ಅತ್ಯಂತ ಪ್ರಗತಿಪರ ಚಿಂತನಾಧಾರೆಯಾಗಿತ್ತು ಹಾಗೂ ಶರತ್‌ಚಂದ್ರರು ತಮ್ಮ ಸಾಹಿತ್ಯದಲ್ಲಿ ಪ್ರತಿಬಿಂಬಿಸಿದ್ದು ಮುಖ್ಯವಾಗಿ ಇದೇ ಚಿಂತನಾಧಾರೆಯನ್ನೇ. ಅದರ ಅತ್ಯುನ್ನತ ಮಟ್ಟವು ಪ್ರತಿಬಿಂಬಿತವಾಗಿದ್ದು ಶರತ್‌ಚಂದ್ರರ ಸಾಹಿತ್ಯದಲ್ಲಿಯೇ. ಆದರೂ ಅವರು ಕಾರ್ಮಿಕವರ್ಗ ಚಿಂತನೆ ಹಾಗೂ ವಿಚಾರಗಳಿಗೆ ಎಷ್ಟು ಹತ್ತಿರ ಬಂದಿದ್ದರು! ಅವರ ಜೀವನದ ಅಂತಿಮ ದಿನಗಳಲ್ಲಿ ನಮ್ಮ ದೇಶದಲ್ಲಿ ಕಾರ್ಮಿಕವರ್ಗ ಹೋರಾಟವು ಆ ಹೊತ್ತಿಗೆ ಬೆಳೆದಿತ್ತು. ಆದ್ದರಿಂದ ರಷ್ಯಾದಲ್ಲಿ ಗೋರ್ಕಿಯವರಿಗೆ ಸಿಕ್ಕಹಾಗೆ ನಮ್ಮ ಸಾಹಿತ್ಯಕ್ಕೂ ಸರಿಯಾದ ಮಾರ್ಗದರ್ಶನ ನೀಡಲು ಇಲ್ಲಿ ಲೆನಿನ್‌ರವರಂತಹ ಮಾರ್ಕ್ಸ್‌ವಾದಿ ನಾಯಕರು ಇದ್ದಿದ್ದರೆ

ಶರತ್‌ಚಂದ್ರರ ಮೂಲಕ ನಮ್ಮ ದೇಶದಲ್ಲೂ ಕಾರ್ಮಿಕವರ್ಗದ ಸಾಹಿತ್ಯ ಬೆಳೆಯುವುದು ಅಸಂಭವವಾಗಿರಲಿಲ್ಲ. ಹಾಗೇನಾದರೂ ಆಗಿದ್ದಲ್ಲಿ ಆ ಸಾಹಿತ್ಯ ಗೋರ್ಕಿಯವರ ಸಾಹಿತ್ಯಕ್ಕಿಂತ ಉನ್ನತ ಮಟ್ಟದಲ್ಲಿರುತ್ತಿತ್ತು. ಏಕೆಂದರೆ ಕಲಾಕೌಶಲ್ಯದಲ್ಲಿ ಶರತ್‌ಚಂದ್ರರು ನಿಸ್ಸಂದೇಹವಾಗಿ ಗೋರ್ಕಿಯವರಿಗಿಂತ ಎಷ್ಟೋ ಮುಂದಿದ್ದರು.

ಈ ಸಂಬಂಧದಲ್ಲಿ ಶರತ್ ಸಾಹಿತ್ಯದಿಂದ ನಾನು ಇನ್ನೂ ಕೆಲವು ನಿದರ್ಶನಗಳನ್ನು ಉಲ್ಲೇಖಿಸಬಯಸುತ್ತೇನೆ. ಅಂದಿನ ದಿನಗಳ ಮಾನವತಾವಾದಿ ಮೌಲ್ಯಗಳು ಮತ್ತು ಉನ್ನತ ಸಾಂಸ್ಕೃತಿಕ –ನೈತಿಕ ಮಟ್ಟವನ್ನು ಪ್ರತಿಬಿಂಬಿಸುವ ದೃಷ್ಟಿಯಿಂದ 'ಶ್ರೀಕಾಂತ' ಕಾದಂಬರಿಯ ಸಾಹಿತ್ಯಿಕ ಮೌಲ್ಯವು ಏನೇ ಆಗಿರಲಿ, ಕಾರ್ಮಿಕ ವರ್ಗದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ದೃಷ್ಟಿಯಿಂದ ಅದರ ಮಹತ್ವವೆಷ್ಟೇ ಆದರೂ ಕೂಡ 'ಶ್ರೀಕಾಂತ' ಕಾದಂಬರಿಯ ಮೂರನೇ ಭಾಗದಲ್ಲಿ ಒಂದು ಕಡೆ ರೈಲುಮಾರ್ಗದ ನಿರ್ಮಾಣದ ವಿವರಣೆ ಇದೆ. ಅಲ್ಲಿ ಕೊಳಚೆ ಪ್ರದೇಶದಲ್ಲಿ ಒಂದು ರಾತ್ರಿಯನ್ನು ಆ ಕಾರ್ಮಿಕರ ಜೊತೆಗೆ ಕಳೆಯಬೇಕಾದಾಗ ಅವರ ಶೋಚನೀಯ ಪರಿಸ್ಥಿತಿಯನ್ನು ಕಂಡು ಶ್ರೀಕಾಂತ ಒಮ್ಮಿಂದೊಮ್ಮೆಲೇ ಆಕ್ರೋಶದಿಂದ ಸ್ಫೋಟಗೊಳ್ಳುತ್ತಾನೆ. ಆಗ ಅವನು ವ್ಯಕ್ತಪಡಿಸುವ ಚಿಂತನೆಯನ್ನು ಮಾನವತಾವಾದಿ ಚಿಂತನೆಯೆನ್ನಲಾಗದು, ಅದು ಅದಕ್ಕಿಂತ ಹೆಚ್ಚಿನದನ್ನು – ಇನ್ನೂ ಉನ್ನತವಾದ ಚಿಂತನೆ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಉದಾಹರಣೆಗೆ, ಕಾರ್ಮಿಕರ ಚಿಂತಾಜನಕವಾದ ಹಾಗೂ ಅಮಾನವೀಯವಾದ ದುಸ್ಥಿತಿ ಕಂಡು ಶ್ರೀಕಾಂತ ಅಂದುಕೊಳ್ಳುತ್ತಾನೆ: "ನೀವು, ಆಧುನಿಕ ನಾಗರಿಕತೆಯನ್ನು ಹೆಗಲ ಮೇಲೆ ಹೊತ್ತಿ ನಡೆಯುತ್ತಿರುವ ನೀವು, ಸಾಯುವುದು ನಿಜ, ಆದರೆ ಸಾಯುವಾಗ ನಿಮ್ಮ ಬದುಕನ್ನು ಈ ಮಟ್ಟಕ್ಕಿಳಿಸಿದ ಈ ಕ್ರೂರ ನಾಗರಿಕತೆಯನ್ನು ಎಳ್ಳಷ್ಟೂ ಕ್ಷಮಿಸಬೇಡಿ. ಇದನ್ನು ನೀವು ಇನ್ನು ಮುಂದೆಯೂ ಹೊತ್ತುಕೊಂಡು ಸಾಗುವುದಾದರೆ ಅದನ್ನು ತ್ವರಿತವಾಗಿ ಅದರ ರಸಾತಳದ ಗೋರಿಗೆ ಹೊತ್ತೊಯ್ಯಿರಿ."

'ಅಧಿಕಾರ' ಕಾದಂಬರಿಯಲ್ಲಿಯೂ ಕಾರ್ಮಿಕ ಹೋರಾಟದ ಬಗ್ಗೆ ಶರತ್‌ಚಂದ್ರರು ವ್ಯಕ್ತಪಡಿಸಿದ ಧೋರಣೆ ಸಂಪೂರ್ಣವಾಗಿ ಮಾರ್ಕ್ಸ್‌ವಾದಿ ತಿಳಿವಳಿಕೆಯೊಂದಿಗೆ ಸಹಮತವನ್ನು ಹೊಂದಿಲ್ಲದಿದ್ದರೂ ಕಾರ್ಮಿಕ ಹೋರಾಟದಲ್ಲಿನ ಆರ್ಥಿಕವಾದ ಹಾಗೂ ಸುಧಾರಣಾವಾದದ ವಿರುದ್ಧ ಒಂದು ಪ್ರಬಲ ಪ್ರತಿರೋಧದ ಧ್ವನಿಯನ್ನು ನಿಸ್ಸಂದೇಹವಾಗಿ ಪ್ರತಿಬಿಂಬಿಸುತ್ತದೆ. ಅಲ್ಲಿ ಅವರು ಬರಿಯ ವೇತನ ಹೆಚ್ಚಳ ಹಾಗೂ ಸುಧಾರಣೆಗಾಗಿ ಕಾರ್ಮಿಕ ಹೋರಾಟವನ್ನು ಸಂಘಟಿಸುವವರು, ಅನುಕಂಪದ ಮುಖವಾಡದಡಿಯಲ್ಲಿ ಕಾರ್ಮಿಕರ ಚಳುವಳಿಯ ಉದ್ದೇಶಕ್ಕೆ ಹೆಚ್ಚಿನ ಹಾನಿಯನ್ನುಂಟು ಮಾಡುತ್ತಾರೆ ಹಾಗೂ ತತ್ಪರಿಣಾಮವಾಗಿ ವಾಸ್ತವದಲ್ಲಿ ಅವರು ಕ್ರಾಂತಿಯನ್ನೇ ವಿರೋಧಿಸುತ್ತಾರೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

'ಅಧಿಕಾರ'ದಲ್ಲಿ ಶರತ್‌ಚಂದ್ರರು ತತ್ವಶಾಸ್ತ್ರಕ್ಕೆ ಸಂಬಂಧಿಸಿದ ತಮ್ಮ ದೃಷ್ಟಿಕೋನದ ಕೆಲವು ಅಂಶಗಳನ್ನು ವ್ಯಕ್ತಪಡಿಸಿದ್ದಾರೆ. ಅದನ್ನು ಗಮನಿಸಿದಾಗ ಅವರು ಮಾನವತಾವಾದಿ ಚಿಂತನೆಯ ಎಲ್ಲೆಗಳನ್ನು ಮೀರಿ ಇನ್ನೂ ಎತ್ತರಕ್ಕೆ ಸಾಗುತ್ತಿದ್ದರು ಎಂಬ ಭಾವನೆ ಬರುತ್ತದೆ. ಇಂದು ಮಾನವತಾವಾದಿ ಮೌಲ್ಯಗಳು ಜಡವಾಗಿ

ನಿಂತಿವೆ. ಬೂರ್ಜ್ವಾ ಮಾನವತಾವಾದವು ಒಳಿತು ಕೆಡಕುಗಳ ಬಗ್ಗೆ, ನೈತಿಕತೆ ಹಾಗೂ ಅಭಿರುಚಿಯ ಬಗ್ಗೆ ಇರುವ ಪರಿಕಲ್ಪನೆಗಳನ್ನು ಕೆಲವು ಬದಲಾಗದ, ಶಾಶ್ವತ ಪರಿಕಲ್ಪನೆಗಳ ಮಟ್ಟಕ್ಕೆ ಇಳಿಸಿಬಿಟ್ಟಿದೆ. ಬಂಡವಾಳಶಾಹಿ ಉತ್ಪಾದನೆಯ ಕ್ರಾಂತಿಕಾರಿ ಪರಿವರ್ತನೆಯ ಅವಶ್ಯಕತೆಯನ್ನು ಪೂರೈಸಲು ಹಿಂದೆ ಬೂರ್ಜ್ವಾ ಕ್ರಾಂತಿ ಜರುಗಿತು. ಆ ಕ್ರಾಂತಿಯ ಅಗತ್ಯತೆಗಳನ್ನು ಪೂರೈಸಲು ಕೆಲವೊಂದು ಚಿಂತನೆ ಮತ್ತು ಪರಿಕಲ್ಪನೆಗಳು ಬೆಳೆದು ಅಭಿವೃದ್ಧಿ ಹೊಂದಿದವು. ತದನಂತರ ಮಾನವತಾವಾದಿಗಳು ಇವುಗಳಿಗೆ ಶಾಶ್ವತ ಹಾಗೂ ಅಮರ ಎಂಬ ಸ್ಥಾನವನ್ನು ಕೊಟ್ಟು ಈ ಚಿಂತನೆಗಳ ಪ್ರಗತಿಯನ್ನು ಕುಂಠಿತಗೊಳಿಸಿದ್ದರಿಂದ ಇಂದು ಇವು ಉಪಯೋಗಿಸಲಾಗದ ಲುಪ್ತ ಸ್ಥಿತಿಯನ್ನು ಮುಟ್ಟಿವೆ. ನೀತಿ, ನೈತಿಕತೆ ಹಾಗೂ ಅಭಿರುಚಿಗೆ ಸಂಬಂಧಿಸಿದಂತೆ ಮಾರ್ಕ್ಸ್‌ವಾದಿ ಪರಿಕಲ್ಪನೆಗಳು ನಿಸ್ಸಂದೇಹವಾಗಿ ಮಾನವತಾವಾದಿ ಪರಿಕಲ್ಪನೆಗಳ ಐತಿಹಾಸಿಕ ಮುಂದುವರಿಕೆಯಾಗಿದ್ದರೂ ಇವೆರಡೂ ವಿಶಿಷ್ಟವಾಗಿ ಎರಡು ವಿಭಿನ್ನ ವೈಚಾರಿಕ ವರ್ಗಕ್ಕೆ ಸೇರಿದವುಗಳಾಗಿರುವುದರಿಂದ ಇವುಗಳ ನಡುವೆ ಒಂದು ವಿಚ್ಛೇದವಿದೆ.

ದ್ವಂದ್ವಾತ್ಮಕ ವಸ್ತುವಾದದ ಅಥವಾ ಮಾರ್ಕ್ಸ್‌ವಾದಿ ಪರಿಕಲ್ಪನೆಯ ಪ್ರಕಾರ ಅವಶ್ಯಕತೆಯೆಂದರೆ ತಾತ್ಕಾಲಿಕ ಅವಶ್ಯಕತೆ ಅಥವಾ ಒಬ್ಬ ವ್ಯಕ್ತಿಯ ಕ್ಷುಲ್ಲಕ ಹಿತಾಸಕ್ತಿಯಲ್ಲ; ಅವಶ್ಯಕತೆ ಎಂಬುದು ವಸ್ತುನಿಷ್ಠವಾದಂಥ ವಾಸ್ತವಿಕತೆಯಿಂದ ಬೆಳೆಯುತ್ತಾ, ಅದರ ಬೆಳಕಿನಲ್ಲಿ ಯಾವುದೇ ಸಾಮಾಜಿಕ ಚಿಂತನೆ, ವಿಚಾರ ಅಥವಾ ವೈಚಾರಿಕತೆ ಸರಿಯೋ ತಪ್ಪೋ ಎಂಬುದನ್ನು ನಿರ್ಧರಿಸಲಾಗುತ್ತದೆ. 'ಅಧಿಕಾರ'ದಲ್ಲಿ ಹೆಚ್ಚು ಕಡಿಮೆ ಈ ಪರಿಕಲ್ಪನೆಯನ್ನು ಹೋಲುವ ಚಿಂತನಾಧಾರೆ ಹಾಗೂ ವೈಚಾರಿಕತೆಯ ವೈಖರಿಯನ್ನು ನಾವು ಕಾಣಬಹುದು. ಶರತ್‌ಚಂದ್ರರಲ್ಲಿ ಪ್ರಾಧಾನ್ಯತೆ ಪಡೆದ ಚಿಂತನೆ ನಮ್ಮ ದೇಶದ ಅಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಅರಾಜಕತಾವಾದದ ಮೂಲಕ ಅಭಿವ್ಯಕ್ತಿ ಪಡೆದುಕೊಂಡ ಬೂರ್ಜ್ವಾ ಕ್ರಾಂತಿವಾದ ಮತ್ತು ಸಮರಶೀಲ ಮಾನವತಾವಾದವಾಗಿತ್ತೆಂಬುದೇನೋ ನಿಜ. ಆದರೂ ಈ ಕಾದಂಬರಿಯಲ್ಲಿ ಅವರು ಅಲ್ಲಲ್ಲಿ ಬೂರ್ಜ್ವಾ ಮಾನವತಾವಾದಿ ಚಿಂತನೆಗಳನ್ನೂ ಸಹ ಮೀರಿ ಮುನ್ನಡೆಯುವ ಹಾದಿಯಲ್ಲಿದ್ದಾರೆ ಹಾಗೂ ಕಮ್ಯುನಿಸ್ಟ್ ಚಿಂತನೆ ಮತ್ತು ವಿಚಾರಗಳ ಕೆಲವೊಂದು ಅಂಶಗಳು ಆರಂಭದ ಕಿಡಿಗಳಂತೆ ಅವರಲ್ಲಿ ಬೆಳಗುತ್ತವೆ. 'ಅಧಿಕಾರ' ಕಾದಂಬರಿಯಲ್ಲಿ ಸವ್ಯಸಾಚಿ ಏನು ಹೇಳುತ್ತಾರೆ ನೋಡಿ: "ಸದಾ ಬದಲಾಗುತ್ತಿರುವ ಈ ವಿಶ್ವದಲ್ಲಿ ಶಾಶ್ವತ ಅಥವಾ ಚಿರಂತನ ಎಂಬುದು ಯಾವುದೂ ಇಲ್ಲ. ಸತ್ಯ ಅಸ್ತಿತ್ವಕ್ಕೆ ಬರುತ್ತದೆ, ಹಾಗೆಯೇ ಅಸ್ತಿತ್ವದಿಂದ ಹೊರಟುಹೋಗುತ್ತದೆ. ಒಂದು ಯುಗದಿಂದ ಇನ್ನೊಂದು ಯುಗಕ್ಕೆ ಕಾಲ ಬದಲಾದಂತೆ ಸತ್ಯವೂ ಬದಲಾಗುತ್ತದೆ ಹಾಗೂ ಮಾನವ ಸಮಾಜದ ಬದಲಾಗುವ ಅವಶ್ಯಕತೆಗಳಿಗೆ ತಕ್ಕಂತೆ ಹೊಸಹೊಸ ರೂಪವನ್ನು ಧರಿಸುತ್ತದೆ. ಹಿಂದೆ ಸತ್ಯ ಎನಿಸಿಕೊಂಡಿದ್ದನ್ನು ಈಗಲೂ ಸತ್ಯವೆಂದು ಪಾಲಿಸಬೇಕೆಂಬ ನಂಬಿಕೆ ತಪ್ಪು. ಇಂತಹ ವಿಚಾರ ಮೌಢ್ಯವಾಗುತ್ತದೆ. ಶರತ್‌ಚಂದ್ರರ ಸತ್ಯದ ಕುರಿತಾದ ಈ ಪರಿಕಲ್ಪನೆ ಹಾಗೂ ವಿಚಾರಧಾರೆಯ ಕ್ರಮವು, ಅವರ ಮೇಲೆ ದ್ವಂದ್ವಾತ್ಮಕ ವಸ್ತುವಾದದ, ಕಮ್ಯುನಿಸ್ಟ್ ಚಿಂತನೆ ಮತ್ತು ವಿಚಾರಧಾರೆಯ ಗಾಢವಾದ ಪ್ರಭಾವವಿತ್ತೆಂಬುದನ್ನು ಎತ್ತಿತೋರಿಸುತ್ತದೆ.

'ಅಧಿಕಾರ' ಕಾದಂಬರಿಯಲ್ಲಿ ಸವ್ಯಸಾಚಿ ಇದನ್ನೂ ಹೇಳಿದ್ದಾರೆ. 'ನನಗೆ 'ಪಥೇರ್ ದಾಬಿ' (ಒಂದು ಕ್ರಾಂತಿಕಾರಿ ಸಂಘಟನೆ – ಸಂ) ಯ ಹೊರತಾಗಿ ಸತ್ಯ ಅಥವಾ ಅಸತ್ಯ, ಒಳಿತು ಅಥವಾ ಕೆಡಕು ಇವೆಲ್ಲಕ್ಕೂ ಯಾವುದೇ ಪ್ರತ್ಯೇಕ ಅರ್ಥವಿಲ್ಲ, ಅಸ್ತಿತ್ವವಿಲ್ಲ. ನನ್ನ ಜೀವನದ ನಂಬಿಕೆ, ಮಾರ್ಗದರ್ಶಕ ಸೂತ್ರ ಇದೇ. ಇದೇ ನನ್ನ ಅಸ್ತಿತ್ವದ ರೂಪ, ನಾನಿರುವುದೇ ಹೀಗೆ, ಇದೇ ಸ್ಪಷ್ಟವಾಗಿ ನನ್ನ ತಿಳಿವಳಿಕೆಯ ಸಾಕ್ಷಾತ್ಕಾರ. ನೀವು ಅಂತಿಮ ಸತ್ಯ, ಚಿರಂತನ ಸತ್ಯದ ಬಗ್ಗೆ ಮಾತನಾಡುತ್ತೀರಿ – ನಿಮಗೆ ಈ ಅರ್ಥಹೀನ ಪೊಳ್ಳು ಪದಗಳು ಬಹಳ ಅಮೂಲ್ಯವಾಗಿರಬಹುದು, ನೀವು ಇದನ್ನು ಬಹಳ ಉನ್ನತ ಸ್ಥಾನದಲ್ಲಿ ಇಟ್ಟುಕೊಂಡಿರಬಹುದು, ಅದನ್ನು ಬಹಳ ಪೂಜ್ಯತೆಯಿಂದ ಕಾಣಬಹುದು. ಆದರೆ ಅಜ್ಞಾನಿಗಳನ್ನು ಮೋಸಗೊಳಿಸಲು ಇದಕ್ಕಿಂತ ಹೆಚ್ಚಿನ ಚಮತ್ಕಾರ ಇರಲಾರದು. ನಾನು ಸುಳ್ಳು ಹೇಳುವುದಿಲ್ಲ, ಅವಶ್ಯಕತೆಗೆ ಅನುಗುಣವಾಗಿ ಸತ್ಯವನ್ನು ಸೃಷ್ಟಿಸುತ್ತೇನೆ." ಇದರ ಮೂಲಕ ಅವರು ಹೇಳ ಹೊರಟಿರುವುದೇನೆಂದರೆ 'ಪಥೇರ್ ದಾಬಿ'ಯ ಅವಶ್ಯಕತೆ ರಾಷ್ಟ್ರೀಯ ಸ್ವಾತಂತ್ರ್ಯದ ಉದ್ದೇಶದೊಂದಿಗೆ ಬೇರ್ಪಡಿಸಲಾಗದಂತೆ ಸೇರಿಕೊಂಡಿದೆ. ಮತ್ತು ದೇಶದ ಸರ್ವಾಂಗೀಣ ಪ್ರಗತಿ ರಾಷ್ಟ್ರೀಯ ಸ್ವಾತಂತ್ರ್ಯದ ಪ್ರಶ್ನೆಯೊಂದಿಗೆ ಅವಿಚ್ಛಿನ್ನವಾಗಿ ಬೆಸೆದುಕೊಂಡಿದೆ. ಆದ್ದರಿಂದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಏನು ಅವಶ್ಯಕವೋ ಅದು 'ಪಥೇರ್ ದಾಬಿ'ಯ ಅವಶ್ಯಕತೆಯೂ ಹೌದು. ಆದ್ದರಿಂದ ಸವ್ಯಸಾಚಿಗೆ ಅದೇ ಸತ್ಯ.  ಹೀಗೆ ಹೇಳಿದ ಸವ್ಯಸಾಚಿ ಆನಂತರ ಕೂಡಲೇ ಏನು ಹೇಳಿದರೆಂಬುದನ್ನು ನೋಡಿ, "ಸವ್ಯಸಾಚಿ ಹಾಗೂ ವ್ರಜೇಂದ್ರರ ಅವಶ್ಯಕತೆ ಒಂದೇ ಅಲ್ಲ." ಇಲ್ಲಿ ಅವರು ನಿರ್ವ್ಯೆಯಕ್ತಿಕ ಅಥವಾ ಸಾಮಾಜಿಕ ಅವಶ್ಯಕತೆ ಹಾಗೂ ಒಬ್ಬ ವ್ಯಕ್ತಿಯ ಕ್ಷುಲ್ಲಕ ಅವಶ್ಯಕತೆಯನ್ನು ಬೇರೆ ಬೇರೆ ಎಂದು ತೋರಿಸಲು ಬಯಸುತ್ತಾರೆ. ಇಲ್ಲದಿದ್ದರೆ ಯಾರಾದರೂ ತನ್ನ ಕ್ಷುಲ್ಲಕ ವೈಯಕ್ತಿಕ ಅವಶ್ಯಕತೆಯನ್ನು ಸಾಮಾಜಿಕ ಅವಶ್ಯಕತೆ ಎಂದೇ ಎಲ್ಲರನ್ನೂ ನಂಬಿಸಲು ಯತ್ನಿಸಬಹುದು. ಆದ್ದರಿಂದ ಅವರು 'ಅವಶ್ಯಕತೆ'ಯೆಂದರೆ ವೈಯಕ್ತಿಕ ಅವಶ್ಯಕತೆ ಎಂಬರ್ಥದಲ್ಲಿ ಹೇಳುವುದಿಲ್ಲ. ಅವರು ಜೀವನದ ಹಾಗೂ ಸಮಾಜದ ನೈಜ, ನಿರ್ವೈಯಕ್ತಿಕ ಹಾಗೂ ಐತಿಹಾಸಿಕ ಅವಶ್ಯಕತೆಯತ್ತ ಬೊಟ್ಟು ಮಾಡಿ ತೋರಿಸಲು ಬಯಸುತ್ತಾರೆ. ಆದ್ದರಿಂದ ಸವ್ಯಸಾಚಿ ಭಾರತಿಗೆ ಹೇಳುತ್ತಾರೆ "ಸ್ವಾತಂತ್ರ್ಯಕ್ಕಾಗಿ ಜೀವಹರಣ ಮಾಡುವುದು ಅನಿವಾರ್ಯವಾದರೆ ನಾನು ರಕ್ತಸ್ನಾನ ಮಾಡಲು ಸಹ ಹಿಂಜರಿಯಲಾರೆ. ಆದರೆ ಸವ್ಯಸಾಚಿಯ ಹಾಗೂ ವ್ರಜೇಂದ್ರನ ಅವಶ್ಯಕತೆ ಒಂದೇ ಅಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊ." ವ್ರಜೇಂದ್ರನ ಅವಶ್ಯಕತೆಯ ಅರಿವು ಸವ್ಯಸಾಚಿಯ ಅವಶ್ಯಕತೆಯ ಅರಿವು ಒಂದೇ ಅಲ್ಲವಾದ್ದರಿಂದ ವ್ರಜೇಂದ್ರ ವೈಯಕ್ತಿಕ ಸೇಡಿಗಾಗಿ ಪ್ರಾಣ ತೆಗೆಯುತ್ತಾನೆ. ತನಗೆ ಅಪಾಯವಿದ್ದರೂ, ಇಲ್ಲದಿದ್ದರೂ ಕೊಲ್ಲುವ ಅವಕಾಶವನ್ನು ಅವನು ಕಳೆದುಕೊಳ್ಳುವುದಿಲ್ಲ. ಆದರೆ ಅಪೂರ್ವನ ವಿಶ್ವಾಸಘಾತಕತನದಿಂದ ಸವ್ಯಸಾಚಿಯ ಪ್ರಾಣಕ್ಕೇ ಅಪಾಯ ಒದಗಿದ್ದರೂ ಅವನ ಬಗ್ಗೆ ಎಲ್ಲರಿಗಿಂತ ಹೆಚ್ಚಿನ ಉದಾರತೆ ತೋರುವುದು ಸವ್ಯಸಾಚಿಯೇ. ಶಿಸ್ತು ಎಂಬುದು ಸಹ ಅವಶ್ಯಕತೆಯಿಂದಲೇ ಉದ್ಭವವಾಗುತ್ತದೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಅದು ಬದಲಾಯಿಸುತ್ತದೆ ಎಂಬುದನ್ನು ಅರಿಯುವುದರಲ್ಲಿ ಎಲ್ಲರೂ ವಿಫಲರಾಗಿ ಶಿಸ್ತಿನ ಕುರುಡಾದ ಹಾಗೂ ಯಾಂತ್ರಿಕ ಪ್ರಜ್ಞೆಗೆ

ಅಂಟಿಕೊಂಡಿರುವಾಗ, ಅಪೂರ್ವನನ್ನು ಮೃತ್ಯುವಿನ ಬಾಯಿಗೆ ದೂಡಲು ಕಾತರದಿಂದಿರುವಾಗ, ಯಾರ ಜೀವಕ್ಕೆ ಅಪೂರ್ವನಿಂದ ಅತ್ಯಂತ ಹೆಚ್ಚಿನ ಅಪಾಯ ಸೃಷ್ಟಿಯಾಯಿತೋ ಅದೇ ಸವ್ಯಸಾಚಿಯೇ ಅವನನ್ನು ಉಳಿಸಲು ಮುಂದೆ ಬರುತ್ತಾರೆ. ಆತನ ಧೋರಣೆ ಮತ್ತು ತರ್ಕ ಎಷ್ಟು ಅದ್ಭುತವೆಂದು ನೋಡಿ: ಆತ ಹೇಳುತ್ತಾರೆ: "ಅಪೂರ್ವ ಬಾಬು ಮಾಡಿದ್ದನ್ನು ಸರಿಪಡಿಸಲಾಗುವುದಿಲ್ಲ. ಅವನನ್ನು ನಾವು ಶಿಕ್ಷಿಸಲಿ, ಬಿಡಲಿ (ಅವನು ಮಾಡಿದ ಕಾರ್ಯದ) ಪರಿಣಾಮವನ್ನು ನಾವು ಎದುರಿಸಲೇಬೇಕು." ದ್ವಂದ್ವಾತ್ಮಕ ಪ್ರಕ್ರಿಯೆಯನ್ನು ಅನುಸರಿಸಿ ನಾವಿಂದು ತೀರ್ಮಾನಿಸುವಂತೆ ಅವರೂ ತೀರ್ಮಾನಿಸಿದ್ದಾರೆ: ಒಬ್ಬ ಗೊಂದಲಕ್ಕೀಡಾದ ವ್ಯಕ್ತಿಯಿಂದ ನಮಗೆ ಅತ್ಯಂತ ಹೆಚ್ಚಿನ ಹಾನಿಯಾಗಬಹುದು. ಅಂತೆಯೇ ವೈರಿಯ ಏಜೆಂಟ್ ಎಂದು ಸಾಬೀತಾದ ವ್ಯಕ್ತಿಯಿಂದಲೂ ಹಾನಿಯಾಗಬಹುದು. ಆದರೆ ಇವರಿಬ್ಬರನ್ನೂ ಒಂದೇ ಮಾನದಂಡದಿಂದ ಅಳೆಯಲಾಗದು. ಅಂತೆಯೇ, ಸವ್ಯಸಾಚಿ ಅಪೂರ್ವನನ್ನು ಉಳಿಸಿದ್ದು ಏಕೆಂದರೆ ಅವರು ಒಬ್ಬ ದೇಶದ್ರೋಹಿ ಹಾಗೂ ಒಬ್ಬ ನಿಜವಾಗಿ ಗೊಂದಲಕ್ಕೊಳಗಾದ ದುರ್ಬಲ ವ್ಯಕ್ತಿಯ ನಡುವೆ ಇರತಕ್ಕಂಥ ವ್ಯತ್ಯಾಸವನ್ನು ಗುರುತಿಸಿದ್ದರು. ಆದ್ದರಿಂದ ಅವರು ಅಪೂರ್ವನ ಬಗ್ಗೆ ಭಾರತಿಗೆ ಹೇಳುತ್ತಾರೆ. "ನನ್ನನ್ನು ನಂಬು. ಅವನು ನಿಜವಾಗಿಯೂ ಅಷ್ಟು ಕ್ಷುದ್ರನಲ್ಲ, ಅಷ್ಟು ಅಲ್ಪನಲ್ಲ.....ಅವನು ವಿದ್ಯಾವಂತ, ಮೃದುಮನಸ್ಸಿನವನು. ಅವನಲ್ಲಿ ವಿದೇಶೀ ಆಡಳಿತದ ಬಗ್ಗೆ ಅಪಮಾನದ ಪ್ರಜ್ಞೆಯಿದೆ. ಅವನೂ ಸಹ ಬಹುತೇಕ ಬಂಗಾಲಿ ಯುವಕರಂತೆ ಪ್ರಾಮಾಣಿಕವಾಗಿ ದೇಶದ ಸ್ವಾತಂತ್ರ್ಯವನ್ನು, ಒಳಿತನ್ನು ಬಯಸುತ್ತಾನೆ." ಮುಂದುವರೆದು ಅವರು ಹೇಳುತ್ತಾರೆ: "ಅಪೂರ್ವ ದೇಶದ್ರೋಹಿಯಲ್ಲ. ಆತ ಹೃದಯಾಂತರಾಳದಿಂದ ತಾಯ್ನಾಡನ್ನು ಪ್ರೀತಿಸುತ್ತಾನೆ. ಆದರೆ ಬಹುತೇಕ ಜನರಂತೆ – ನನ್ನವರನ್ನೇ ನಾನು ಟೀಕಿಸುವುದು ಬೇಡ – ಆತ ಬಹಳ ದುರ್ಬಲ." ಉತ್ತಮ ಗುಣಗಳಿದ್ದರೂ ಅಪೂರ್ವ ಬಹಳ ದುರ್ಬಲ ವ್ಯಕ್ತಿ ಎಂದು ಸವ್ಯಸಾಚಿ ಹೇಳಬಯಸುತ್ತಾರೆ. ಅನೇಕ ಬಂಗಾಲಿಗಳಂತೆ ಅವನಲ್ಲೂ ದೌರ್ಬಲ್ಯವಿದೆ. ಆದರೂ ಅಪೂರ್ವ ಮತ್ತು ಭಾರತಿಯರ ಬದುಕಿನಲ್ಲಿ ಮೂಡಿರುವ ಸೊಬಗು ಹಾಗೂ ರಮ್ಯತೆಗೆ ಬೆಲೆ ಇಲ್ಲವೇ? ಆದ್ದರಿಂದಲೇ ಸವ್ಯಸಾಚಿ ಭಾರತಿಗೆ ಹೇಳುತ್ತಾರೆ "ನಿಮ್ಮಿಬ್ಬರ ಸಂಬಂಧಕ್ಕೆ, ಗಂಡು ಮತ್ತು ಹೆಣ್ಣಿನ ನಡುವೆ ಅರಳಿರುವ ಸಂಬಂಧಕ್ಕೆ ಏನೂ ಬೆಲೆ ಇಲ್ಲವೇ. ಬ್ರಜೇಂದ್ರನಂಥ ಪಶು ಅದನ್ನು ಹಾಳು ಮಾಡಲು ನಾನು ಬಿಡಬೇಕೆ? ಆದ್ದರಿಂದಲೇ ಭಾರತಿ, ಅದಕ್ಕಾಗಿ ಮಾತ್ರವೇ (ನಾನು ಅವನನ್ನು ತಡೆದದ್ದು) – ಇಲ್ಲದಿದ್ದರೆ ನಾವು ಕೇವಲ ಒಂದು ಜೀವಕ್ಕೆ ಬೆಲೆ ಕೊಡುತ್ತೇವೆಯೇ? ಇಲ್ಲ, ಖಂಡಿತಾ ಇಲ್ಲ." ನಮ್ಮ ದೇಶದ ಸಾಹಿತ್ಯದಲ್ಲಿ ಇಂತಹ ಪರಿಕಲ್ಪನೆಗಳನ್ನು ಮೊಟ್ಟಮೊದಲ ಬಾರಿಗೆ ತಂದವರು ಶರತ್‌ಚಂದ್ರರೇ.

...ಶರತ್‌ಚಂದ್ರರ ಸಾಹಿತ್ಯ ಕೃತಿಗಳು ಪ್ರಮುಖವಾಗಿ ಕಾರ್ಮಿಕರ ಜೀವನದ ಕುರಿತಾಗಿ ಇರಲಿಲ್ಲ ಎಂಬುದು ನಿಜ. ಆದರೆ ಅವರು ಕಾರ್ಮಿಕರ ಮತ್ತು ರೈತರ ಬಗ್ಗೆ ಯೋಚಿಸಿರಲಿಲ್ಲ ಹಾಗೂ ಅವರ ಸಮಸ್ಯೆಗಳ ಕುರಿತು ಬರೆಯಲಿಲ್ಲ ಎಂಬುದು ಸತ್ಯವಲ್ಲ. ಈ ವಿಷಯಗಳ ಬಗ್ಗೆ ಅವರು ಕೆಲವು ಕಾದಂಬರಿಗಳಲ್ಲಿ ಬರೆದಿದ್ದಾರೆ ಹಾಗೂ 'ಅಧಿಕಾರ' ಕಾದಂಬರಿಯಲ್ಲಿ ಕಾರ್ಮಿಕ ವರ್ಗದ ಹೋರಾಟ ಬಹಳ

ಪ್ರಾಮುಖ್ಯತೆಯನ್ನು ಪಡೆದಿದೆ. ಅಂದಿನ ದಿನಗಳಲ್ಲಿ ಅವರು ಕಲ್ಕತ್ತೆಯ ಆಜುಬಾಜಿನಲ್ಲಿ ಒಂದು 'ಸಮಾಜವಾದಿ ವೃಂದ' ವನ್ನು ಸಂಘಟಿಸಿದ್ದರೆಂಬುದು ಗಮನಾರ್ಹವಾಗಿದೆ. ...ಒಮ್ಮೆ ಅವರು ಕಾರ್ಮಿಕರ ಹೋರಾಟದ ಕುರಿತು ನಡೆಸಿದ ಚರ್ಚೆಯಲ್ಲಿ ಒಂದು ಎಚ್ಚರಿಕೆಯನ್ನು ನೀಡಿದರು. "ನೋಡಿ, ನಮ್ಮ ದೇಶದ ಕಾರ್ಮಿಕರು ಇನ್ನೂ ಜಾಗೃತರಾಗಿಲ್ಲ, ಸಂಘಟಿತರಾಗಿಲ್ಲ. ಅವರ ಮೇಲೆ ಅನಿಯಂತ್ರಿತವಾದ ಶೋಷಣೆ ಹಾಗೂ ಕ್ರೂರ ದಬ್ಬಾಳಿಕೆಯನ್ನು ಹರಿಬಿಡಲಾಗಿದೆ. ಅವರನ್ನು ಜಾಗೃತಗೊಳಿಸಲು, ಪ್ರೇರಣೆ ನೀಡಲು, ಸಂಘಟಿಸಲು ನಿಮ್ಮ ಸೇವೆ ಇಂದು ಅನಿವಾರ್ಯ. ಆದರೆ ಅವರು ಎದ್ದು ನಿಂತ ದಿನ, ಅವರು ಸಂಘಟಿತರಾದ ದಿನ ಅವರ ನಾಯಕತ್ವ ಅವರ ಒಳಗಿನಿಂದಲೇ ಮೂಡಿಬರುತ್ತದೆ ಎಂಬುದನ್ನು ನೆನಪಿಡಿ. ಅಂದಿನಿಂದ ನಿಮ್ಮ ಸೇವೆ ಅವರಿಗೆ ಬೇಕಾಗುವುದಿಲ್ಲ. ಅವರ ಹೋರಾಟಗಳನ್ನು ನಡೆಸುವ ಕರ್ತವ್ಯವನ್ನು ಅವರದೇ ಆದ ನಾಯಕರಿಗೆ ಸಂತೋಷದಿಂದ, ಸ್ವಇಚ್ಛೆಯಿಂದ ವರ್ಗಾಯಿಸಲು ನೀವು ಮಾನಸಿಕವಾಗಿ ಸಿದ್ಧರಾಗಬೇಕು. ನೆನಪಿಡಿ, ಅವರನ್ನು ಸಂಘಟಿಸುವ ಕೆಲಸದಲ್ಲಿ ನೀವು ತೊಡಗಿರುವಾಗ ಅವರನ್ನು ಎಂದೆಂದಿಗೂ ಮುನ್ನಡೆಸುವ ಆಕಾಂಕ್ಷೆ ನಿಮ್ಮಲ್ಲಿ ಉಂಟಾಗದಿರಲಿ."

'ಅಧಿಕಾರ'ದಲ್ಲಿ ಶರತ್‌ಚಂದ್ರರು ಕಾರ್ಮಿಕರ ವರ್ಗ ಹೋರಾಟದ ಉದ್ದೇಶದ ಕುರಿತು ಮಾರ್ಕ್ಸ್‌ವಾದಿ ಪರಿಕಲ್ಪನೆಯಂತಹುದೇ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೂ ವಾಸ್ತವದಲ್ಲಿ ಅವರು ಮೂಲತಃ ಪೆಟ್ಟಿ ಬೂರ್ಜ್ವಾ ಕ್ರಾಂತಿವಾದ ಹಾಗೂ ಬೂರ್ಜ್ವಾ ಮಾನವತಾವಾದದ ಪ್ರತಿಪಾದಕರು. ಅದೇನೇ ಇರಲಿ ಶರತ್‌ಚಂದ್ರರು ಕ್ರಾಂತಿಕಾರಿ ಮಾನವತಾವಾದದ ಅಗ್ರಗಾಮಿ ಧೀಪಧಾರಿಯಾಗಿದ್ದುದರಿಂದ, ಅಂದಿನ ದಿನಗಳಲ್ಲಿ ನಮ್ಮ ದೇಶದ ರಾಷ್ಟ್ರೀಯ ವಿಮುಕ್ತಿ ಹೋರಾಟಗಳಲ್ಲಿ ಪ್ರವೇಶಿಸುತ್ತಿದ್ದ ಮಾರ್ಕ್ಸ್‌ವಾದಿ ಚಿಂತನೆ ಮತ್ತು ವಿಚಾರಗಳ ಹತ್ತಿರಕ್ಕೆ ಬಂದರು. ಆದ್ದರಿಂದ ಅವರು ಧರ್ಮದ ಬಗ್ಗೆ ಸವ್ಯಸಾಚಿಯ ಮೂಲಕ ಹೀಗೆ ಹೇಳಿದ್ದಾರೆ: "ಎಲ್ಲಾ ಧರ್ಮಗಳೂ ವಂಚನೆಗಳೇ..........ಪುರಾತನ ಕಾಲದ ಮೌಢ್ಯಗಳು. ಮಾನವತೆಗೆ ಇದಕ್ಕಿಂತ ದೊಡ್ಡ ವೈರಿ ಇನ್ನಾವುದೂ ಇಲ್ಲ." ಪೆಟ್ಟಿ ಬೂರ್ಜ್ವಾ ಕ್ರಾಂತಿಕಾರಿಗಳಿಗೂ ಇಂತಹ ಪರಿಕಲ್ಪನೆ ಊಹಾತೀತವಾಗಿತ್ತು. ಆದರೆ ವಿದ್ವಾಂಸರೆನಿಸಿಕೊಂಡವರು, ದೊಡ್ಡ ದೊಡ್ಡ ಮಾತನ್ನಾಡುವವರು, ಶರತ್‌ಚಂದ್ರರ ಸಾಹಿತ್ಯದಲ್ಲಿನ ಈ ಚಿಂತನೆಗಳ ಹಿಂದಿನ ಮಹತ್ವವನ್ನು ಗ್ರಹಿಸಲಾಗದಂತಹವರು, ಮಾತ್ರ ಅಪ್ಪಣೆ ಕೊಡಿಸುತ್ತಾರೆ: "ಶರತ್‌ಚಂದ್ರರು ಜಮೀನ್ದಾರರ ಬಗ್ಗೆ ಕಥೆ ಬರೆದಿದ್ದಾರೆ, ಅವರು ಅಡುಗೆ ಮನೆ ಸಾಹಿತಿ, ಶರತ್‌ಚಂದ್ರರ ಸಾಹಿತ್ಯದಲ್ಲಿ ಯಾವುದೇ ಉನ್ನತ ಅಭಿರುಚಿ ಇಲ್ಲ" ಇತ್ಯಾದಿ. ಇದೇ ವಿಮರ್ಶಕರು, ಪಂಡಿತರೆನಿಸಿಕೊಂಡವರು, ಸಾರ್ವಜನಿಕ ಸಭೆಗಳಲ್ಲಿ ದೊಡ್ಡ ದೊಡ್ಡ ಮಾತನ್ನಾಡುತ್ತಾರೆ; ಆದರೆ ಬೇಕೆನಿಸಿದಲ್ಲಿ ಒಂದು ಕ್ಷಣದಲ್ಲಿ ತಮ್ಮ ಸೋದರರನ್ನು ಎಲ್ಲಾ ಆಸ್ತಿಯಿಂದ ವಂಚಿಸಲು, ತಮ್ಮ ವಿಧವೆ ಸೋದರಿಯರಿಗೆ ಜೀವನಾಂಶವನ್ನು ಸಹ ನಿರಾಕರಿಸಲು ಕೊಂಚವೂ ನಾಚಿಕೆಪಡುವುದಿಲ್ಲ, ತಮ್ಮ ತಾಯಂದಿರನ್ನು ತಮ್ಮ ಹೆಂಡತಿಯರಿಂದ ಅಪಮಾನಪಡಿಸಲು ಹಿಂಜರಿಯುವುದಿಲ್ಲ.

ಶರತ್‌ಚಂದ್ರರ ಸಾಹಿತ್ಯದಲ್ಲಿ ಇನ್ನಿತರ ಸುಂದರ ಅಂಶಗಳೂ ಇವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಚರ್ಚಿಸುವ ಅವಶ್ಯಕತೆಯಿದೆಯೆಂದು ನನಗನ್ನಿಸುತ್ತದೆ. ಉದಾಹರಣೆಗೆ ಬೂರ್ಜ್ವಾ ಪ್ರಜಾತಾಂತ್ರಿಕ ಕ್ರಾಂತಿಯ ಆರಂಭದ ಹಂತದಲ್ಲಿ ಬೆಳೆದಂತಹ ಪ್ರೇಮದ ಸ್ವಾತಂತ್ರ್ಯದ ಪರಿಕಲ್ಪನೆ. ಶರತ್‌ಚಂದ್ರರು ತಮ್ಮ ಕಾದಂಬರಿ 'ಶೇಷಪ್ರಶ್ನೆ'ಯಲ್ಲಿ ಈ ಪರಿಕಲ್ಪನೆಗೆ ಒಂದು ಅಭಿವ್ಯಕ್ತಿ ನೀಡಲು ಪ್ರಯತ್ನಿಸಿದರು. ಆದರೆ ಪ್ರೇಮದ ಸ್ವಾತಂತ್ರ್ಯದ ಬಗ್ಗೆ ಈ ಬೂರ್ಜ್ವಾ ಪರಿಕಲ್ಪನೆ ಏಕಮುಖದಿಂದ ಬಳಲುತ್ತದೆ. ಸ್ವಾತಂತ್ರ್ಯದ ಹೆಸರಿನಲ್ಲಿ ಯುರೋಪಿನ ಬೂರ್ಜ್ವಾಗಳು ತಾವು ಬದುಕನ್ನು ನಡೆಸುವ ರೀತಿಯಲ್ಲಿ ಈ ಪರಿಕಲ್ಪನೆಯನ್ನು ಒಂದು ಸವಲತ್ತು, ಒಂದು ಪರವಾನಗಿಯ ಮಟ್ಟಕ್ಕೆ ಇಳಿಸಿಬಿಟ್ಟರು.

ಇದಕ್ಕೆ ಸಂಬಂಧಿಸಿದಂತೆ, ಶರತ್‌ಚಂದ್ರರು ತಮ್ಮ ಕಾದಂಬರಿ 'ಶೇಷಪ್ರಶ್ನೆ'ಯಲ್ಲಿ ಹಳೆಯ ಅಂಧಶ್ರದ್ಧೆಯ ವಿರುದ್ಧ ಹಾಗೂ ವಿಧಿ ನಿಷೇಧಗಳ ಮೂಲಕ ಎಲ್ಲದಕ್ಕೂ ಒಂದು ಶಾಶ್ವತತೆಯನ್ನು ನೀಡುವ ಮನೋಭಾವನೆಯ ವಿರುದ್ಧ ಒಂದು ಜೀವಂತ ಪ್ರತಿಭಟನೆಯಾಗಿ ಕಮಲಳನ್ನು ಗಾಢವಾದ ಕಾಳಜಿ ಮತ್ತು ಅನುಕಂಪದಿಂದ ಬಹಳ ಸುಂದರವಾಗಿ ಚಿತ್ರಿಸಿದ್ದಾರೆ. ಆದರೆ ಅವರು ಜೊತೆಜೊತೆಗೆ ರಾಜೇಂದ್ರನನ್ನೂ ಚಿತ್ರಿಸಿ ಕಮಲಳ ಧೋರಣೆಯ ಏಕಮುಖವಾದವನ್ನು ತೋರಿಸಿದ್ದಾರೆ. ಆದರೆ ಯೂರೋಪಿನ ನವೋದಯದ ಸಾಹಿತ್ಯದಲ್ಲಾಗಲಿ, ಅಭಿಜಾತ ಮಾನವತಾವಾದಿ ಸಾಹಿತ್ಯದಲ್ಲಾಗಲೀ ಈ ಪರಿಕಲ್ಪನೆ ನಮಗೆ ಸಿಗುವುದಿಲ್ಲ. ಇದು ಶರತ್‌ಚಂದ್ರರ ಸಾಹಿತ್ಯದ ಅನನ್ಯವಾದ ವೈಶಿಷ್ಟ್ಯ ಎನ್ನುವುದನ್ನು ಗಮನಿಸಿ.

'ಶೇಷಪ್ರಶ್ನೆ'ಯಲ್ಲಿ ರಾಜೇಂದ್ರ ತಾನು ಹರೇಂದ್ರನ 'ಆಶ್ರಮ'ವನ್ನು ತ್ಯಜಿಸುವುದಾಗಿ ಕಮಲಳಿಗೆ ಹೇಳುತ್ತಾನೆ. ಕೊಡುವ ಕಾರಣ: "ಏಕೆಂದರೆ ನಮ್ಮ ದೃಷ್ಟಿಕೋನದಲ್ಲಾಗಲೀ ಅಥವಾ ಕೆಲಸದ ವೈಖರಿಯಲ್ಲಾಗಲೀ ಯಾವುದರಲ್ಲೂ ಒಮ್ಮತವಿಲ್ಲ; ನಮ್ಮ ನಡುವಿನ ಬಂಧನವೆಂದರೆ ಪ್ರೇಮ ಮತ್ತು ವಾತ್ಸಲ್ಯವೊಂದೇ." ಪ್ರತಿಯಾಗಿ ಕಮಲ ಉತ್ತರಿಸುತ್ತಾಳೆ: "ರಾಜೇಂದ್ರ ಇದಕ್ಕಿಂತ ಮಿಗಿಲಾಗಿ ಇನ್ನೇನು ತಾನೇ ಇರಲು ಸಾಧ್ಯ? ಮನಸ್ಸುಗಳು ಕೂಡಿದಾಗ ಅಭಿಪ್ರಾಯ ಭೇದವಿರಲಿ, ದೃಷ್ಟಿಕೋನಗಳು ಬೇರೆ ಇರಲಿ ಅಥವಾ ಕಾರ್ಯವೈಖರಿ ಭಿನ್ನವಿರಲಿ ಅದರಿಂದ ಆಗಬೇಕಾದದ್ದೇನು? ಎಲ್ಲರೂ ಒಂದೇ ರೀತಿ ಆಲೋಚಿಸಲು ಸಾಧ್ಯವಾದಾಗ, ಎಲ್ಲರೂ ಒಂದೇ ರೀತಿಯ ಕಾರ್ಯ ಮಾಡಲು ಸಾಧ್ಯವಾದಾಗ, ಆಗ ಮಾತ್ರ ಅವರು ಒಟ್ಟಾಗಿ ಜೀವಿಸುವುದು ಸಾಧ್ಯ – ಇದು ಹೀಗೇ ಏಕಿರಬೇಕು? ಒಬ್ಬರ ಅಭಿಪ್ರಾಯವನ್ನು ಇನ್ನೊಬ್ಬರು ಗೌರವಿಸುವುದು ಸಾಧ್ಯವಾಗದಿದ್ದರೆ ಶಿಕ್ಷಣದ ಪ್ರಯೋಜನವಾದರೂ ಏನು?" ರಾಜೇಂದ್ರ ಉತ್ತರಿಸುತ್ತಾನೆ: "ನಾನು ಮನಸ್ಸಿನ ಮಿಲನವನ್ನು ಕಡೆಗಣಿಸುವುದಿಲ್ಲ. ಆದರೆ ಗಟ್ಟಿಯಾದ ದನಿಯಲ್ಲಿ ಅದೊಂದೇ ಮುಖ್ಯವೆಂದು ಘೋಷಿಸುವುದು ಇಂದಿನ ದಿನಗಳಲ್ಲಿ ಬುದ್ಧಿಜೀವಿಗಳ ಒಂದು ಫ್ಯಾಶನ್ ಆಗಿಬಿಟ್ಟಿದೆ......ವಿಶ್ವದಲ್ಲಿ ಬರಿಯ ಮನಸ್ಸು ಮಾತ್ರ ಅಸ್ತಿತ್ವದಲ್ಲಿದ್ದು ಮಿಕ್ಕಿದ್ದೆಲ್ಲಾ ಅವಾಸ್ತವಿಕ – ಬರಿಯ ಭ್ರಾಂತು ಎನ್ನುವ ಹಾಗೆ. ಇದು ಸಂಪೂರ್ಣವಾಗಿ ತಪ್ಪು." ತನ್ನ ಅಲ್ಲಗಳೆಯಲಾರದ ತರ್ಕಗಳಿಂದ ಎಲ್ಲರನ್ನೂ ಒಬ್ಬೊಬ್ಬರನ್ನಾಗಿ ಸೋಲಿಸಿದ ಕಮಲ ರಾಜೇಂದ್ರನಿಂದ ಹೇಗೆ ಸೋಲೊಪ್ಪಿಕೊಳ್ಳಬೇಕಾಯಿತು ಎಂಬುದನ್ನು ನೋಡಿ. ಕಮಲಳ

ಅಭಿಪ್ರಾಯದಲ್ಲಿ ಮನಸ್ಸೇ ಎಲ್ಲಾ ಎಂಬಂತೆ ಹಾಗೂ ಸಾಮಾಜಿಕ ರೂಢಿ, ಅಭಿಪ್ರಾಯಗಳು – ಇವೆಲ್ಲವೂ ಅರ್ಥಹೀನ ಎಂಬಂತೆ ಕಾಣುತ್ತದೆ. ರಾಜೇಂದ್ರ ಕಮಲಳಿಗೆ ಹೇಳುತ್ತಾನೆ: “ವಿಭಿನ್ನ ಅಭಿಪ್ರಾಯಗಳನ್ನು ಗೌರವಿಸುವ ಸಾಮರ್ಥ್ಯವೇ ಶಿಕ್ಷಣದ ಮುಖ್ಯ ಹೆಗ್ಗುರುತು ಎಂದು ನೀವು ಹೇಳುತ್ತಿದ್ದೀರಿ. ಆದರೆ ಯಾರು ಎಲ್ಲಾ ಅಭಿಪ್ರಾಯಗಳನ್ನು ಗೌರವಿಸಬಲ್ಲರೆಂಬುದು ನಿಮಗೆ ತಿಳಿದಿದೆಯೇ? ತನ್ನ ಸ್ವಂತ ಅಭಿಪ್ರಾಯವಿಲ್ಲದವನು ಮಾತ್ರ. ಶಿಕ್ಷಣವು ಒಬ್ಬಾತ, ತನ್ನ ಅಭಿಪ್ರಾಯಕ್ಕೆ ವಿರುದ್ಧವಾದ ಅಭಿಪ್ರಾಯಗಳನ್ನು ಸಹಿಸಿಕೊಂಡು ಬದುಕುವಂತೆ ಮಾಡಬಹುದೇ ವಿನಃ ಗೌರವಿಸುವಂತೆ ಮಾಡಲಾಗದು.” ನಾವು ತಾತ್ವಿಕ ಸಹನೆ ಎಂದು ಕರೆಯುವ ಪರಿಕಲ್ಪನೆಗೆ ಈ ತಿಳಿವಳಿಕೆ ಎಷ್ಟು ಹತ್ತಿರವಾಗಿದೆ ನೋಡಿ!...

ಮತ್ತೆ ಅವನು ಮನಸ್ಸಿನ ಮಿಲನ ಮಾತ್ರ ಸಾಲದು ಎಂದು ಹೇಳುತ್ತಿದ್ದಾನೆ – ಸಾಮಾಜಿಕ ವಿಧಿಗಳಿಗೂ ಬೆಲೆಯಿದೆ; ಆದ್ದರಿಂದ ಅವನು, ಶಿವನಾಥ ಹಾಗೂ ಕಮಲಳ ಮಧ್ಯದ ಪ್ರೇಮ ಇಷ್ಟು ಸುಲಭವಾಗಿ ಸಾಯಲು ಕಾರಣ ಬಹುಶಃ ಅಸ್ತಿತ್ವದಲ್ಲಿರುವ ವಿವಾಹದ ಸಾಮಾಜಿಕ ವಿಧಿಗಳನ್ನು ಅವರು ಉಪೇಕ್ಷಿಸಿದ್ದರಿಂದ ಇರಬೇಕು ಎಂದು ಹೇಳುತ್ತಾನೆ. ಆದ್ದರಿಂದ ಅವನು ಕಮಲಳನ್ನು ಕೇಳುತ್ತಾನೆ: “ಮದುವೆಗೆ ಸಂಬಂಧಿಸಿದಂತೆ ಮನಸ್ಸುಗಳ ಮಿಲನವೇ ಅಂತಿಮ ಸತ್ಯ ಎಂದು ನೀವು ತೀರ್ಮಾನಿಸಿದ್ದಿರಿ ಹಾಗಾಗಿ ಬಾಹ್ಯ ವಿಧಿಗಳಲ್ಲಿನ ಲೋಪಗಳು ಲೆಖ್ಖಕ್ಕಿಲ್ಲ ಎಂದು ಉಪೇಕ್ಷಿಸಿಬಿಟ್ಟಿರಿ. ಆದರೆ ಅದು ನಿಜವಲ್ಲ ಆದ್ದರಿಂದಲೇ ನಿಮ್ಮ ನಡುವಿನ ಸಂಬಂಧವೇ ಇಂದು ಅಸತ್ಯವಾಗಿಹೋಯಿತು.” ಏಕೆಂದರೆ ಈ ವಿಧಿಗಳಿಗೂ ಒಂದು ಪಾತ್ರವಿದೆ. ಈ ವಿಧಿಗಳನ್ನು ಸರಿಯಾಗಿ ನಡೆಸಿದ್ದರೆ ಪ್ರೇಮ ಸಾಯುತ್ತಿರಲಿಲ್ಲವೆಂದಲ್ಲ. ಆದರೂ ಅವರ ಪ್ರೇಮ ಸಾಯಲಿಕ್ಕೆ ಮದುವೆಯ ವಿಧಿಗಳಲ್ಲಿ ನಡೆಸಿದ ಮೋಸ ಸಹ ಒಂದು ಕಾರಣವಾಗಿಯೇ ಇರಲಿಲ್ಲ ಎಂದು ಹೇಳಲಾಗುವುದಿಲ್ಲ.

ಮುಂದುವರೆದು ರಾಜೇಂದ್ರ ಹೀಗೆ ತನ್ನದೇ ಆದ ರೀತಿಯಲ್ಲಿ ವಾದಿಸುತ್ತಾನೆ: “ನನ್ನ ಒಂದೇ ಕಾಳಜಿಯೆಂದರೆ ಅಭಿಪ್ರಾಯಗಳಲ್ಲಿ ಒಮ್ಮತ ಹಾಗೂ ಗುರಿಯಲ್ಲಿನ ಐಕ್ಯತೆ. ಮನಸ್ಸುಗಳು ಮಿಲನವಾಗುತ್ತವೋ ಇಲ್ಲವೋ ಎಂಬುದರ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ.” ಆದರೆ ಇದು ಸಹ ಒಂದು ರೀತಿಯ ಯಾಂತ್ರಿಕ ವಸ್ತುವಾದಿ ಚಿಂತನೆ....ಹಾಗೆಯೇ ‘ಅಧಿಕಾರ’ದಲ್ಲಿ ಶರತ್‌ಚಂದ್ರರು ಇದೇ ಧಾಟಿಯಲ್ಲಿ ಸವ್ಯಸಾಚಿಯನ್ನು ಚಿತ್ರಿಸಿದರು. ಯಾವುದು ಉದಾತ್ತವೋ, ಕೋಮಲವೋ ಅದು ಸವ್ಯಸಾಚಿಯ ಗಮನವನ್ನು ಸೆಳೆದು ಗೌರವಕ್ಕೆ ಪಾತ್ರವಾಗುತ್ತಿತ್ತು. ಆದರೆ ಮಾನವ ಮನಸ್ಸಿನ ಮೃದು ಭಾವನೆಗಳ ಬಗ್ಗೆ ಚಿಂತಿಸಲು ಅವರಿಗೆ ಸಮಯವೇ ಇರುತ್ತಿರಲಿಲ್ಲ. ಆದ್ದರಿಂದ ಸುಮಿತ್ರಾ ಒಳಗೆ ಪ್ರಜ್ವಲಿಸುವ ಬೆಂಕಿ ತುಂಬಿದ್ದು, ಹೊರಗೆ ತಣ್ಣಗೆ, ಶಾಂತವಾಗಿರುವ ಒಂದು ಕುದಿಕಡಾಯಿ (ಬಾಯ್ಲರ್)ಯೊಂದಿಗೆ ಅವರನ್ನು ಹೋಲಿಸುತ್ತಾಳೆ. ಒಂದು ದಿನ ಸುಮಿತ್ರಾ ಭಾರತಿಯೊಂದಿಗೆ ಒಂದು ಕಾರ್ಯಾಗಾರದ ಬಳಿ ಹೋಗುತ್ತಿದ್ದಳು. ಇದ್ದಕ್ಕಿದ್ದಂತೆ ಕುದಿಕಡಾಯಿಯ ಮುಚ್ಚಳವನ್ನು ತೆರೆಯಲಾಯಿತು. ಒಳಗೆ ಧಗಧಗಿಸುವ ಬೆಂಕಿ ಇತ್ತು. ಅದನ್ನು ನೋಡಿ ದೀರ್ಘವಾಗಿ ನಿಟ್ಟುಸಿರು ಬಿಡುತ್ತಾ ಸುಮಿತ್ರಾ ನುಡಿದಳು: “ಈ ಯಂತ್ರವನ್ನು ಗಮನಿಸು ಭಾರತಿ, ಇದರಿಂದ

ನೀನು ನಿನ್ನ ಡಾಕ್ಟರ್ ಬಾಬುವನ್ನು ಅರ್ಥಮಾಡಿಕೊಳ್ಳಬಲ್ಲೆ." ಅವಳ ಮಾತಿನ ಅರ್ಥವೇನೆಂದರೆ ಆ ಕಡಾಯಿಯ ತರಹ ಅವರಲ್ಲಿ ಬರಿಯ ಸ್ವಾತಂತ್ರ್ಯಕ್ಕಾಗಿ ಬೆಂಕಿ ಮಾತ್ರ ಉರಿಯುತ್ತಿತ್ತು. ಪ್ರೇಮ, ವಾತ್ಸಲ್ಯ, ಕೋಮಲತೆ – ಉಳಿದ ಎಲ್ಲವೂ ಭಸ್ಮವಾಗಿ ಹೋಗಿವೆ. ಆದರೆ ಅವರು ಅಪೂರ್ವನ ಜೀವವನ್ನು ಉಳಿಸಿದ ರೀತಿಯಿಂದ ಅವರಲ್ಲಿದ್ದ ಎಲ್ಲವೂ ಭಸ್ಮವಾಗಿ ಹೋಗಿಲ್ಲ ಎಂಬುದೇನೋ ಸ್ಪಷ್ಟವಾಗುತ್ತದೆ. ಭಾರತಿಯೊಡನೆ ಅವರ ಅತ್ಯಂತ ಮಧುರವಾದ, ವಾತ್ಸಲ್ಯಪೂರ್ಣ ಸಂಬಂಧ ಸಹ ಇದಕ್ಕೆ ಸಾಕ್ಷಿಯಾಗಿದೆ. ಆದರೆ ಇವುಗಳ ಬಗ್ಗೆ ಅವರಿಗೆ ಸಮಯವೇ ಇರಲಿಲ್ಲ. ಅವರಿಗೆ ಇಂತಹ ಯೋಚನೆ ಒಂದು ಅನವಶ್ಯಕ ಭೋಗದಂತೆ. ರಾಜೇಂದ್ರ ಸಹ ಇಂತಹವನೇ. ಶರತ್‌ಚಂದ್ರರು ಇಂತಹ ವ್ಯಕ್ತಿತ್ವಗಳನ್ನು ನಿರೂಪಿಸಿರುವಲ್ಲಿ ನಾವು ಒಂದು ಯಾಂತ್ರಿಕ ಧೋರಣೆಯ ಪ್ರಭಾವವನ್ನು ಕಾಣಬಹುದು. ಆದರೂ ಯುರೋಪಿನ ಸಾಹಿತಿಗಳು ಹೋರಾಡಿದಂತಹ ಪ್ರೇಮದ ಸ್ವಾತಂತ್ರ್ಯದ ಪರಿಕಲ್ಪನೆಯ ಏಕಮುಖವಾದದಿಂದ ಶರತ್‌ಚಂದ್ರರು ಮುಕ್ತರಾಗಿದ್ದರೆಂದು ನಾನು ಪ್ರತಿಪಾದಿಸಬಯಸುತ್ತೇನೆ. ಇದೂ ಸಹ ಅಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಒಂದು ಮಹಾನ್ ಕ್ರಾಂತಿಕಾರಿ ಪಾತ್ರವನ್ನು ನಿರ್ವಹಿಸಿತು.

ನಮ್ಮ ಇಂದಿನ ಅವಶ್ಯಕತೆಯನ್ನು ಪೂರೈಸಲು ಬಹುಶಃ ರವೀಂದ್ರೋತ್ತರ ಮತ್ತು ಶರತೋತ್ತರ ಸಾಹಿತ್ಯ ಎಂದು ಕರೆಯಬಹುದಾದ ಕಾರ್ಮಿಕವರ್ಗ ಸಾಹಿತ್ಯ ಹಾಗೂ ಕಾರ್ಮಿಕವರ್ಗ ಸಂಸ್ಕೃತಿಗೆ ನೀವು ಜನ್ಮ ನೀಡಬೇಕೆಂದರೆ, ಶರತ್‌ಚಂದ್ರರಲ್ಲಿ ಪ್ರತಿಬಿಂಬಿತವಾದ ಮಾನವತಾವಾದಿ ಸಾಹಿತ್ಯದಲ್ಲಿನ ಅತ್ಯಂತ ಕ್ರಾಂತಿಕಾರಿ ಧಾರೆಯನ್ನು ಕೂಲಂಕಷವಾಗಿ ಅರ್ಥಮಾಡಿಕೊಂಡು ಅದನ್ನು ಹೀರಿಕೊಂಡು ಮೀರಿ ಮುನ್ನಡೆಯಲು ಸಾಧ್ಯವಾದಾಗ ಮಾತ್ರ, ಅಂದರೆ ಶರತ್‌ಚಂದ್ರರಲ್ಲಿ ಪ್ರತಿಬಿಂಬಿತವಾದ ಕ್ರಾಂತಿಕಾರಿ ಮಾನವತಾವಾದಿ ಮೌಲ್ಯಗಳ ಸಾರವನ್ನು ಸಂಪೂರ್ಣ ಅರಗಿಸಿಕೊಂಡಾಗ ಅದು ಸಾಧ್ಯವಾಗುತ್ತದೆ. ಆಗ ಮಾತ್ರ ನೀವು ಈ ಪ್ರಸ್ತುತ ಯುಗದ ಅತ್ಯಂತ ಪ್ರಗತಿಪರ ಸಂಸ್ಕೃತಿಯಾದ ಕಾರ್ಮಿಕವರ್ಗ ಸಂಸ್ಕೃತಿಗೆ ಜನ್ಮ ನೀಡಲು ಸಾಧ್ಯವಾಗುತ್ತದೆ. ಏಕೆಂದರೆ ಕಾರ್ಮಿಕವರ್ಗ ಸಂಸ್ಕೃತಿಯ ಮಟ್ಟ ಬೂರ್ಜ್ವಾ ಮಾನವತಾವಾದಿ ಸಂಸ್ಕೃತಿಯ ಮಟ್ಟಕ್ಕಿಂತ ಕೆಳಗಿದ್ದರೆ, ಅಂದರೆ ಅದು ರವೀಂದ್ರನಾಥರ ಅಥವಾ ಶರತ್‌ಚಂದ್ರರ ಸಾಹಿತ್ಯದ ನೈತಿಕ ಹಾಗೂ ಅಭಿರುಚಿಯ ಮಟ್ಟಕ್ಕಿಂತ ಕೆಳಗಿನ ಮಟ್ಟವನ್ನು ಪ್ರತಿಬಿಂಬಿಸಿದರೆ ಅದು ಉದ್ದೇಶ ಸಾಧನೆಯಲ್ಲಿ ವಿಫಲವಾಗುತ್ತದೆ. ಅಷ್ಟೇ ಅಲ್ಲ, ಕಾರ್ಮಿಕವರ್ಗದ ಹೋರಾಟದ ನೈತಿಕ ಬೆನ್ನೆಲುಬನ್ನೇ ಮುರಿಯುತ್ತದೆ ಹಾಗೂ ಅಂತಿಮವಾಗಿ ಬೂರ್ಜ್ವಾಸಿಗಳಿಗೇ ಲಾಭ ತಂದು ಕೊಡುತ್ತದೆ. ಕಾರ್ಮಿಕವರ್ಗವು ಬೂರ್ಜ್ವಾ ಸಮಾಜ ಸೃಷ್ಟಿಸಿದ್ದಕ್ಕಿಂತ ಕೆಳಮಟ್ಟದ ಉತ್ಪನ್ನ–ಉಪಕರಣಗಳಿಂದ ಬೂರ್ಜ್ವಾ ಸಮಾಜವನ್ನು ನಾಶಗೊಳಿಸಲಾರದು. ಕಾರ್ಮಿಕವರ್ಗ ಹೋರಾಟವು, ವೈಚಾರಿಕ, ರಾಜಕೀಯ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಬೂರ್ಜ್ವಾಗಳು ಏನನ್ನು ಉತ್ಪಾದಿಸಲು ಸಾಧ್ಯವಾಗಿದೆಯೋ ಅದಕ್ಕಿಂತ ಎಲ್ಲಾ ರೀತಿಯಲ್ಲಿ ಉತ್ಕೃಷ್ಟವಾಗಿರುವುದನ್ನು ಉತ್ಪಾದಿಸುವ ಮೂಲಕ ಮಾತ್ರ ಬೂರ್ಜ್ವಾ ಸಾಮಾಜಿಕ ವ್ಯವಸ್ಥೆಯನ್ನು ನಾಶಪಡಿಸಬಲ್ಲದು. ಆದ್ದರಿಂದ ಕಾರ್ಮಿಕವರ್ಗ ಸಂಸ್ಕೃತಿಯ ನೇತಾರರು ಹಿಂದಿನ ಸಮಾಜದಲ್ಲಿನ ಅತ್ಯಂತ

ಕ್ರಾಂತಿಕಾರಿ ಬೂರ್ಜ್ವಾ ಮಾನವತಾವಾದಿ ಚಿಂತನೆಯನ್ನು ಪ್ರತಿಬಿಂಬಿಸಿದ ಸಾಹಿತ್ಯವನ್ನು, ಅತ್ಯಂತ ಉನ್ನತ ಮಟ್ಟದ ಚಿಂತನೆ, ಕಲೆ ಮತ್ತು ಅಭಿರುಚಿಯನ್ನು ಬೆಳೆಸಿದ ಸಾಹಿತ್ಯವನ್ನು ಸರಿಯಾಗಿ ಗ್ರಹಿಸಿಕೊಂಡು, ಅರ್ಥಮಾಡಿಕೊಳ್ಳಲಾಗದಿದ್ದರೆ ಆಗ ಅವರು ಕಾರ್ಮಿಕ ವರ್ಗ ಸಾಹಿತ್ಯದ ಸಾರವನ್ನೇ ಗ್ರಹಿಸುವಲ್ಲಿ ವಿಫಲರಾಗುತ್ತಾರೆ. ಹೆಚ್ಚೆಂದರೆ ಅವರು ಸಿದ್ಧ ಮಾದರಿಯ ಸಾಹಿತ್ಯವನ್ನು ಯಾಂತ್ರಿಕವಾಗಿ ಸೃಷ್ಟಿಸಬಹುದು.

...ನಾವು ಶರತ್‌ಚಂದ್ರರ ಸಾಹಿತ್ಯವನ್ನು ಸರಿಯಾಗಿ ಗ್ರಹಿಸಲು ಸಾಧ್ಯವಾದರೆ, ಅದರಿಂದ ಇಂದಿನ ಪ್ರಗತಿಪರ ಹೋರಾಟಕ್ಕೆ ನೀತಿ–ನೈತಿಕತೆಯ ಅಡಿಪಾಯವನ್ನು ಸೃಷ್ಟಿಸುವುದಕ್ಕೆ ನೆರವಾಗುತ್ತದೆ, ನಾವು ವಿಚಾರ ಮತ್ತು ಅಭಿಪ್ರಾಯಗಳ ತಾಕಲಾಟ ಮತ್ತು ಸಂಘರ್ಷದ ಮೂಲಕ ಸತ್ಯವನ್ನು ತಲುಪುವ ದಾರಿಯನ್ನು ಕಂಡುಹಿಡಿಯುವುದು ಸಾಧ್ಯವಾಗುತ್ತದೆ. ನಾವು ಶರತ್‌ಚಂದ್ರರನ್ನು ಮರೆತಿರುವುದರಿಂದ ನಮ್ಮ ದೇಶದ ರಾಜಕೀಯ–ಸಾಹಿತ್ಯಿಕ–ಸಾಂಸ್ಕೃತಿಕ ಹೋರಾಟದ ನೀತಿ–ನೈತಿಕ, ಸಾಂಸ್ಕೃತಿಕ, ಸೌಂದರ್ಯಾಭಿರುಚಿಯ ಮಟ್ಟ ನುಚ್ಚುನೂರಾಗಿದೆ. ಅದರ ಪರಿಣಾಮವಾಗಿ ನಾವು ಬೇರಿಲ್ಲದವರಾಗಿದ್ದೇವೆ. ಆದ್ದರಿಂದ ನಾವು ದೊಡ್ಡದೊಡ್ಡ ಮಾತುಗಳನ್ನೇನೋ ಆಡುತ್ತೇವೆ. ಆದರೆ ಉದಾತ್ತ ತುಡಿತಗಳನ್ನು ಮತ್ತು ಕೋಮಲ ಭಾವನೆಗಳನ್ನು ಬೆಳೆಸಿಕೊಳ್ಳುವುದಿಲ್ಲ. ಯಾವುದೇ ಹೋರಾಟವು ಬರೀ ಬುದ್ಧಿಶಕ್ತಿಯ ಕಸರತ್ತು ಆಗಿರದೆ ಅದಕ್ಕೆ ಧೀಶಕ್ತಿ ಹಾಗೂ ಭಾವನೆ ಎರಡೂ ಬೇಕಾಗುತ್ತದೆ. ಕ್ರಾಂತಿಯೂ ಇದಕ್ಕೆ ಅಪವಾದವಲ್ಲ. ಚಿಂತನೆಗಳು ಪ್ರಗತಿ ಹೊಂದುತ್ತಾ, ಮನಸ್ಸಿನ ತುಡಿತ ಮತ್ತು ಭಾವನೆಗಳು ಹಿಂದೆ ಬಿದ್ದರೆ ಇವೆರಡರ ನಡುವೆ ಖಂಡಿತ ಒಂದು ಕಂದರ ಉಂಟಾಗುತ್ತದೆ. ಹಾಗಾದಾಗ ಹೋರಾಟ ಮತ್ತು ಚಿಂತನೆಗಳೆರೆಡೂ ದಾರಿತಪ್ಪಿ ಕುರುಡುಗಲ್ಲಿಯನ್ನು ತಲುಪುತ್ತವೆ. ನಮ್ಮ ದೇಶದ ಪ್ರಸಕ್ತ ಸಮೂಹ ಹೋರಾಟಗಳ ಎಲ್ಲಾ ಹಂತಗಳಲ್ಲಿ ವ್ಯಕ್ತವಾಗುತ್ತಿರುವ ನೀತಿ–ನೈತಿಕತೆಯ ಅಭಾವವನ್ನು ನಾನು ಆಳವಾದ ಕ್ಷೋಭೆಯಿಂದ ಗಮನಿಸುತ್ತಿದ್ದೇನೆ. ನಾನೊಬ್ಬ ರಾಜಕೀಯ ವ್ಯಕ್ತಿ, ಎಡ ಮತ್ತು ಕಮ್ಯುನಿಸ್ಟ್ ಚಳುವಳಿಗೆ ಸೇರಿದಂಥ ವ್ಯಕ್ತಿ ಎಂಬುದು ನಿಮಗೆ ತಿಳಿದೇ ಇದೆ. ಇಂತಹ ಸಾಹಿತ್ಯ ಸಭೆಗಳಿಗೆ ಸಂಘಟನಾಕಾರರು ನನ್ನನ್ನೇಕೆ ಆಹ್ವಾನಿಸುತ್ತಾರೆಂಬುದು ಅವರಿಗೇ ಗೊತ್ತು! ಅವರ ಒತ್ತಾಯಕ್ಕೆ ಮಣಿದು ಕೆಲವೊಮ್ಮೆ ನಾನು ಬರಲೇಬೇಕಾಗುತ್ತದೆ. ಆದರೆ ರಾಜಕೀಯ ಹೋರಾಟದ ವ್ಯಕ್ತಿಯಾದ ನನಗೆ ಮತ್ತೆ ಮತ್ತೆ ಕಣ್ಣಿಗೆ ಬೀಳುತ್ತಿರುವ ಸಂಗತಿಯೆಂದರೆ ಈ ಹೋರಾಟಗಳ ನೀತಿ–ನೈತಿಕ ಅಡಿಪಾಯ ಹಾಗೂ ಸಾಂಸ್ಕೃತಿಕ ಎಳೆ ಸಂಪೂರ್ಣವಾಗಿ ತುಂಡಾಗಿದೆ. ಇಂದು ಹೆಚ್ಚಿನ ಹೋರಾಟಗಳು ವಾಸ್ತವದಲ್ಲಿ ಘೋಷಣೆಯನ್ನು ಕಿರುಚುವ ಮಟ್ಟಕ್ಕೆ ಇಳಿಸಲ್ಪಟ್ಟಿವೆ. ಆದ್ದರಿಂದಲೇ ಹೋರಾಟಗಳ ಅಲೆಗಳು ಒಂದರನಂತರ ಇನ್ನೊಂದರಂತೆ ಏಳುತ್ತಿವೆ; 'ನಮಗೆ ಬದಲಾವಣೆ ಬೇಕು, ನಾವು ಕ್ರಾಂತಿಯನ್ನು ಆಕಾಂಕ್ಷಿಸುತ್ತೇವೆ' ಎಂಬ ಕೂಗು ಪ್ರತಿಧ್ವನಿಸುತ್ತಿದೆ; ಜನತೆ ಜೀವತ್ಯಾಗಮಾಡುತ್ತಿದ್ದಾರೆ, ಯುವಜನರ ಬಲಿದಾನವಾಗುತ್ತಿದೆ; ಆದರೆ ಯಾವುದೇ ಬದಲಾವಣೆ ಬರುತ್ತಿಲ್ಲ, ಕ್ರಾಂತಿ ಜರುಗುತ್ತಿಲ್ಲ. ಸಂಸ್ಕೃತಿ ಮತ್ತು ನೈತಿಕತೆಗಳಿಂದ ಸಂಪೂರ್ಣವಾಗಿ ಹೊರತಾದ, ಅಲ್ಲೊಮ್ಮೆ ಇಲ್ಲೊಮ್ಮೆ ನಡೆಯುವ ಇಂತಹ ಹೋರಾಟಗಳ ಮೂಲಕ ನೀವು ಎಷ್ಟೇ ಪ್ರಾಮಾಣಿಕವಾಗಿ ಸೆಣೆಸಾಡಿದರೂ, ಎಷ್ಟೇ ಬಲಿದಾನ ಮಾಡಿದರೂ

ಬದಲಾವಣೆ ಎಂದಿಗೂ ಬರುವುದಿಲ್ಲ. ಸಮೂಹ ಹೋರಾಟಗಳು ನಿರ್ದಿಷ್ಟ ರಾಜಕೀಯ ಉದ್ದೇಶ ಮತ್ತು ನೈತಿಕತೆಯ ಆಧಾರದ ಮೇಲೆ ಮಾರ್ಗದರ್ಶನ ಪಡೆದಾಗ ಮಾತ್ರವೇ ರಾಷ್ಟ್ರದ ನೈತಿಕತೆ ಮತ್ತೆ ಬಲಗೊಳ್ಳುತ್ತದೆ.

...ನಮ್ಮ ಸಮಾಜದಲ್ಲಿ ಶರತ್ ವಿಚಾರಧಾರೆ, ಶರತ್‌ಚಂದ್ರರ ಚಿಂತನೆ ಮತ್ತು ವಿಚಾರಗಳ ಮೇಲಿನ ಚರ್ಚೆ ಮತ್ತು ವಿಚಾರ ವಿನಿಮಯಗಳು ಹೆಚ್ಚು ಹೆಚ್ಚು ಅನಿವಾರ್ಯವಾಗಿವೆ. ಏಕೆಂದರೆ ನಾವು ಹಿಂದಿನ ಸಾಂಸ್ಕೃತಿಕ ಚಳುವಳಿಯಿಂದ ಸಂಪೂರ್ಣವಾಗಿ ವಿಚ್ಛೇದಗೊಂಡಿದ್ದೇವೆ – ಇಂದು ನಾವು ಬೇರುಗಳಿಲ್ಲದವರಾಗಿದ್ದೇವೆ. ನಾವು ನಮ್ಮ ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ತಲುಪಿದ ಉನ್ನತ ಸಾಂಸ್ಕೃತಿಕ ಮಟ್ಟದೊಂದಿಗೆ ಅನುಬಂಧವನ್ನು ಉಳಿಸಿಕೊಳ್ಳುತ್ತಿಲ್ಲ. ನಾವು ದೊಡ್ಡ ದೊಡ್ಡ ಪದಗಳನ್ನು ಎರವಲು ತೆಗೆದುಕೊಳ್ಳುತ್ತಿರುವುದೇನೋ ಸರಿಯೇ, ಆದರೆ ನಮ್ಮ ಸ್ವಂತ ನೆಲದಲ್ಲಿ ಹಿಂದೊಮ್ಮೆ ಬೆಳೆದ ಉನ್ನತ ಸಾಂಸ್ಕೃತಿಕ ಧಾರೆಯೊಡನೆ ನಾವು ಸಂಬಂಧವನ್ನು ಕಡಿದುಕೊಂಡಿದ್ದೇವೆ. ಆ ಪರಂಪರೆಯೊಂದಿಗೆ ಒಂದು ದ್ವಂದ್ವವು ಇಂದು ಅನಿವಾರ್ಯ ಎಂಬುದು ನಿಜ; ಏಕೆಂದರೆ ಶರತ್‌ಚಂದ್ರರು ಪೆಟ್ಟಿ ಬೂರ್ಜ್ವಾ ಕ್ರಾಂತಿವಾದ ಮತ್ತು ಬೂರ್ಜ್ವಾ ಮಾನವತಾವಾದದಲ್ಲಿ ನಂಬಿಕೆ ಇಟ್ಟಿದ್ದವರು, ಆದರೆ ನಾವು ಕಾರ್ಮಿಕವರ್ಗ ಕ್ರಾಂತಿಯ, ಸಮಾಜವಾದಿ ಕ್ರಾಂತಿಯ, ಬಂಡವಾಳಶಾಹಿಯನ್ನು ಕಿತ್ತೊಗೆಯುವ ಕ್ರಾಂತಿಯ ಕಾರ್ಯವನ್ನು ನೆರವೇರಿಸಬೇಕಿದೆ. ಆದ್ದರಿಂದ ನಾವು ನಮ್ಮ ಶ್ರದ್ಧಾಪೂರ್ಣ ಕ್ರಾಂತಿಕಾರಿ ಹೋರಾಟಗಳಲ್ಲಿ ಇನ್ನೂ ಒಂದು ಹಂತ ಮುಂದೆ ಹೋಗಬೇಕಿದೆ. ಆದರೆ ಶರತ್‌ಚಂದ್ರರನ್ನು ಸರಿಯಾಗಿ ಗ್ರಹಿಸಿ, ಅವರ ಸರಿಯಾದ ಮೌಲ್ಯಮಾಪನ ಮಾಡಿಕೊಂಡು ಅವರ ಸಾಹಿತ್ಯದ ಸಾರವನ್ನು ಸ್ವೀಕರಿಸಿ, ಅಸಮರ್ಪಕವಾದದ್ದು ಹಾಗೂ ಅಪ್ರಯೋಜಕವಾದದ್ದನ್ನು ತಿರಸ್ಕರಿಸಿ, ಅವರ ಸಾಹಿತ್ಯ ಸಂಪತ್ತನ್ನು ನಮ್ಮದಾಗಿಸಿಕೊಳ್ಳುತ್ತಾ ಅದನ್ನು ಸಂಪೂರ್ಣವಾಗಿ ರಕ್ತಗತಮಾಡಿಕೊಳ್ಳುತ್ತಾ ಅವರಿಂದ ಇನ್ನೇನನ್ನೂ ಸ್ವೀಕರಿಸಲ್ಲಿಕ್ಕೆ ಉಳಿದಿಲ್ಲವೆನ್ನುವಂತಾದಾಗ ಮಾತ್ರ ನಾವು ಮುಂದೆ ಹೋಗಲು ಸಾಧ್ಯ. ದುರದೃಷ್ಟವೆಂದರೆ ನಾವು ಅವರಿಂದ ಏನನ್ನೂ ಸ್ವೀಕರಿಸಲಾಗಿಲ್ಲ, ಬದಲಿಗೆ ನಾವು ಅವರೊಂದಿಗೆ ಸಂಬಂಧವನ್ನೇ ಕಳೆದುಕೊಂಡಿದ್ದೇವೆ. ಶರತ್‌ಚಂದ್ರರು ಪ್ರತಿಬಿಂಬಿಸಿದ ಮುಂದುವರೆದ ಧೋರಣೆ ಮತ್ತು ಮೌಲ್ಯ ಪ್ರಜ್ಞೆ ಸಹ ನಮ್ಮಲ್ಲಿ ಇಲ್ಲ... ಆದ್ದರಿಂದ ನಾವು ಶರತ್‌ಚಂದ್ರರನ್ನು ಅರಿಯಬೇಕು, ಅವರನ್ನು ಅಭ್ಯಸಿಸಬೇಕು ಹಾಗೂ ಅರ್ಥಮಾಡಿಕೊಳ್ಳಬೇಕು.

*......"ಯಾವುದು ಸುಂದರವಲ್ಲವೋ,*
*ನೈತಿಕವಲ್ಲವೋ,*
*ಕಲ್ಯಾಣಕರವಲ್ಲವೋ, ಅದು ಯಾವ*
*ರೀತಿಯಲ್ಲೂ ಕಲೆಯಲ್ಲ, ಧರ್ಮವೂ*
*ಅಲ್ಲ. ಕಲೆಗಾಗಿ ಕಲೆ ಎಂಬ*
*ಮಾತಿನಲ್ಲೂ ಯಾವುದೇ ಸತ್ಯವಿಲ್ಲ."*

***–ಶರತ್‌ಚಂದ್ರ ಚಟರ್ಜಿ***

*.......“ಈ (ಪೋಲೀಸ್) ನಾಯಿಗಳನ್ನು ನಮ್ಮ ಹಿಂದೆ ನಿಮ್ಮ ಹಿಂದೆ ಬಿಟ್ಟಿರುವವರು ಕಾರ್ಖಾನೆಯ ಮಾಲೀಕರು. ನಿಮಗೆ ನಿಮ್ಮ ಕಷ್ಟಸುಖಗಳನ್ನು ಯಾರು ಬಿಚ್ಚಿ ಹೇಳುವುದೂ ಅವರಿಗಿಷ್ಟವಿಲ್ಲ; ನೀವು ಆ ಕಾರ್ಖಾನೆ ನಡೆಸುವವರು ಮತ್ತು ಅದರ ಭಾರ ಹೊತ್ತಿರುವ ಎತ್ತುಗಳು. ನೀವೂ ಅವರಂತೆಯೇ ಮನುಷ್ಯರು, ನಿಮಗೂ ಹೊಟ್ಟೆ ತುಂಬಾ ಉಣ್ಣುವ ಮತ್ತು ಜೀವನದಲ್ಲಿ ಸಂತೋಷವಾಗಿರುವ ಅಧಿಕಾರ ಜನ್ಮಸಿದ್ಧವಾಗಿದೆಯೆಂಬ ಸತ್ಯಾಂಶವನ್ನು ನಿಮ್ಮಿಂದ ಮುಚ್ಚಿಡಲು ಇವರು ತಮ್ಮ ಶಕ್ತಿಯನ್ನೆಲ್ಲಾ ಉಪಯೋಗಿಸಿದ್ದಾರೆ. ನೀವು ಒಮ್ಮೆ ಈ ನಿದ್ದೆಯಿಂದ ಎಚ್ಚೆತ್ತರೆ, ನಾವು ಬಡವರಾದರೂ, ಅಶಿಕ್ಷಿತರಾದರೂ ಅವರಂತೆ ಮನುಷ್ಯರು, ಈ ಮನುಷ್ಯತ್ವವನ್ನು ಕಸಿದುಕೊಳ್ಳಲು ಸಾಧ್ಯವಿಲ್ಲವೆಂಬ ಸತ್ಯವನ್ನು ತಿಳಿದರೆ, ಈ ಗಿರಣಿ ಮಾಲೀಕರು ನಿಮ್ಮ ಮುಂದೆ ಯಾವ ಮಹಾವಿಷಯ? ನಿಮಗೆ ಈ ಸತ್ಯ ತಿಳಿಯುವುದಿಲ್ಲವೆ? ಇದು ದುಡ್ಡಿದ್ದವರ ವಿರುದ್ಧ ಬಡವರ ಆತ್ಮ ರಕ್ಷಣೆಗಾಗಿ ಯುದ್ಧ! ಇದಕ್ಕೆ ದೇಶ–ವಿದೇಶ, ಜಾತಿ–ಧರ್ಮ, ಹಿಂದೂ–ಮುಸಲ್ಮಾನ ಎಂಬ ವ್ಯತ್ಯಾಸವಿಲ್ಲ. ಇದರಲ್ಲಿ ಇರುವುದು ದುಡ್ಡಿನಿಂದ ಉನ್ನತ್ತರಾದ ಗಿರಣಿ ಮಾಲೀಕರು ಮತ್ತು ಅವರ ಕಾರ್ಖಾನೆಯಲ್ಲಿ ದುಡಿಯುವ ಪ್ರವಂಚಿತ ಕೂಲಿಕಾರರು. –ನಿಮ್ಮ ಶಕ್ತಿಗೆ ಅವರು ಹೆದರುತ್ತಾರೆ. ನಿಮಗೆ ವಿಷಯಗಳನ್ನು ತಿಳಿಸಬೇಕೆಂಬ ಆಸೆ ಹುಟ್ಟಿದರೆ ಅವರ ಎದೆಯ ರಕ್ತ ಒಣಗುತ್ತದೆ. ಮೂರ್ಖರಾದ ನೀವೇ ಅವರ ಸ್ವೇಚ್ಛಾಚಾರದ ವಿಲಾಸ ಜೀವನಕ್ಕೆ ಸಹಾಯಕರು! ಅದಕ್ಕಾಗಿ ನಿಮಗೆ ಬದುಕಿರಲು ಎಷ್ಟು ಬೇಕೋ ಅದಕ್ಕಿಂತ ಒಂದು ಕಾಸೂ ಹೆಚ್ಚಾಗಿ ಕೊಡುವುದಿಲ್ಲ. ಇದನ್ನು ತಿಳಿಯಲು ನಿಮಗೆ ಇಷ್ಟು ಕಷ್ಟವೇ?”*

**– ಶರತ್‌ಚಂದ್ರ ಚಟರ್ಜಿ**

**(ಅಧಿಕಾರ ಕಾದಂಬರಿಯಿಂದ)**